
UNIVERSAL
LIBRARY
OU_198365
UNIVERSAL
LIBRARY

ಮಹಷಿ

# ಅರವಿಂದ ಘೋಷ

ಇವರ

## ಸಂಕ್ಷಿಪ್ತ ಚರಿತ್ರವು.




ಲೇಖಕರು :—
ಶಂಕರ ಬಾಳದೀಕ್ಷಿತ ಜೆ.

ದಿ ಕರ್ನಾಟಕ ಟ್ರೇಡಿಂಗ ಕಂಪನಿ,
ಧಾರವಾಡ.

ಉದ್ಬೋಧನ ಮಾಲೆಯ ಪ್ರಥಮ ಸುಮನವು.

# ಮಹರ್ಷಿ ಅರವಿಂದ ಘೋಷ

ಇವರ

## ಸಂಕ್ಷಿಪ್ತ ಚರಿತ್ರವು.

ಲೇಖಕ:— ಶ. ಬಾ. ಜೋಶಿ.

ಪ್ರಕಾಶಕ:— ಗುರುರಾವ ಧಾರವಾಡಕರ.

ಮೊದಲನೇಯಾವೃತ್ತಿ ೧೦೦೦ ಪ್ರತಿಗಳು.

[ ಮುದ್ರಣದ ಎಲ್ಲ ಅಧಿಕಾರಗಳು ಲೇಖಕನ ಕಡೆಗಿರುತ್ತವೆ.]

೧೯೨೧.

We live in deeds not years, in thoughts, not breaths
In feelings, not in figures on a dial
We should count time by heart throbs. He most lives
Who thinks most, feels most, acts the best.

—Bay lay.

ब्रम्हार्पणं ब्रम्हहविर्ब्रम्हाग्नौ ब्रम्हणाहुतम् ।
ब्रम्हैव तेनगंतव्यं ब्रम्हकर्म समाधिना ॥

—श्रीमद्भगवद्गीता.

ಕ್ಷುದ್ರ ಸಾಂಸಾರಿಕ ವಿಚಾರಗಳಿಗೆ ಆಸ್ಪದ ಕೊಟ್ಟು ಮನಸ್ಸನ್ನು ಮಲಿನ
ಮಾಡದೆ ಚಿದ್ಘನ ಪರಮೇಶನ ವಾಸಕ್ಕೆ ಪವಿತ್ರವಾಗಿಟ್ಟ ಶುಚಿ
ಯಾದ ಅಂತಃಕರಣವುಳ್ಳ ಹಾಗೂ ಹೃದಯಸ್ಥ ಸಚ್ಚಿದಾ
ನಂದನ ಆದೇಶಗಳನ್ನು ತಿಳಿದು ಅದರಂತೆ ಆಚರಿ
ಸಲು ತತ್ಪರಾಗಿರುವ ಬಂಧು ಭಗಿನಿಯರ
ಕೈಯಲ್ಲಿ ಪ್ರೇಮ ಪುರಸ್ಸರವಾಗಿ
ಈ ಅಲ್ಪ ಕೃತಿಯನ್ನು
ಒಪ್ಪಿಸುತ್ತೇನೆ.

—ಸಂಪಾದಕ

# ಪ್ರಸ್ತಾವನೆ.

ಶ್ರೀ ಶಂಕರರಾವ ಜೋಶಿಯವರು ಬರೆದ ಈ ಚಿಕ್ಕ ಪುಸ್ತಕವು, ನಮ್ಮ ದೇಶದ ಮೂವತ್ತಮೂರು ಕೋಟಿ ಜನರ ಉದ್ಧಾರಾರ್ಥವಾಗಿ ಈಗ ಹನ್ನೆರಡು ವರ್ಷಗಳಿಂದ ತಪಶ್ಚರ್ಯವನ್ನು ಮಾಡುತ್ತ, ಏಕಾಂತದಲ್ಲಿ ಕುಳಿತಿರುವ ಮಹಾಯೋಗಿಗಳಾದ ಶ್ರೀ ಅರವಿಂದಘೋಷ ಇವರ ಈವರೆಗಿನ ಇತಿಹಾಸವು. ಮಹರ್ಷಿ ಅರವಿಂದಘೋಷರವರ ಪರಿಚಯವು ಇತ್ತಲಿನ ತರುಣರಿಗೆ ವಿಶೇಷವಾಗಿ ಇರುವದಿಲ್ಲ. ಹನ್ನೆರಡು ವರ್ಷಗಳ ಹಿಂದೆ ಅವರು ರಾಜಕೀಯ ರಣಾಂಗಣದಲ್ಲಿ ಲೋಕಮಾನ್ಯ ಟಿಳಕರವರಿಗೆ ಸರಿಸಮಾನಸ್ಕಂಧರಾಗಿ ಸರಕಾರದವರೊಡನೆ ಕಾದುತ್ತಿದ್ದರು. ಆದರೆ, ಕೇವಲ ರಾಜಕೀಯೋನ್ನತಿಯು ಧ್ಯೇಯವು ಹಿಂದುಸ್ಥಾನಕ್ಕೆ ಸಾಲದೆಂದೂ ನಮ್ಮ ಆರ್ಯಭೂಮಿಯ ವಿಶಿಷ್ಟ ಧ್ಯೇಯವು ಆಧ್ಯಾತ್ಮಿಕ ಉನ್ನತಿಯಾಗಿರುವದರಿಂದ ಅದನ್ನು ಸಾಧಿಸಿ, ಕೇವಲ ಆರ್ಯಭೂಮಿಯ ಉದ್ಧಾರವನ್ನು ಮಾತ್ರವೇ ಅಲ್ಲ, ಇಡೀ ಮಾನವ ಜಾತಿಯ ಉದ್ಧಾರವನ್ನು ಮಾಡಬೇಕೆಂಬ ಅತ್ಯುಚ್ಚವಾದ ಮಹತ್ವಾಕಾಂಕ್ಷೆಯಿಂದ ಅವರು ರಾಜಕೀಯ ರಣಾಂಗಣವನ್ನು ತೊಲಗಿ, ಘೋರತರವಾದ ತಪಶ್ಚರ್ಯವನ್ನು ಪ್ರಾರಂಭಿಸಿರುವರು. ಅವರ ತಪಶ್ಚರ್ಯವು ಈಗ ಮುಗಿಯುತ್ತ ಬಂದಿರುವದು. ಮತ್ತು ಬೇಗನೇ ಅವರು ತಮ್ಮ ಅವತಾರ ಕಾರ್ಯವನ್ನು ಆರಂಭಿಸುವವರಿರುವರೆಂದು ಅವರ ಭಕ್ತರು ಸಾರುತ್ತಿರುವರು. ಇಂಥ ಸಮಯದಲ್ಲಿ ಅವರ ಉಜ್ವಲವಾದ ಇತಿಹಾಸವನ್ನು ನಮ್ಮ ಜನರ ಮುಂದಿಟ್ಟು, ಆ ಮಹಾ ವಿಭೂತಿಯ ಕಡೆಗೆ ಶ್ರೀ ಶಂಕರರಾವ ಜೋಶಿಯವರು ಜನಮನವನ್ನು ಆಕರ್ಷಿಸಿದ್ದು ಬಹಳ ಯೋಗ್ಯವಾದ ಕಾರ್ಯವೆಂದು ಯಾರು ಹೇಳಲಿಕ್ಕಿಲ್ಲ?

ಈ ಪುಸ್ತಕಕ್ಕೆ ಪ್ರಸ್ತಾವನೆಯನ್ನು ಬರೆಯುವದೆಂದರೆ ಮಹರ್ಷಿ ಅರವಿಂದರವರ ಚರಿತ್ರೆಯ ಮರ್ಮವನ್ನು ಸೂತ್ರರೂಪವಾಗಿ ಹೇಳಬೇಕಾಗುವದಲ್ಲವೆ? ಹಾಗೆ ಮಾಡುವದು ಮಾತ್ರ ದುಸ್ತರವಾದ ಕೆಲಸವು. ಯಾಕಂದರೆ, ಅವರ ಚರಿತ್ರವು ಮೊದಲಿನಿಂದಲೇ ಲೋಕೋತ್ತರವಾದುದು, ಗೂಢವಾದುದು, ಗಂಭೀರವಾದುದು, ಅತರ್ಕ್ಯವಾದುದು. ಅವರ ಚಾರಿತ್ರ್ಯಕ್ಕೆ—ನಿಜವಾದ ಚಾರಿತ್ರ್ಯಕ್ಕೆ ಇನ್ನು ಮುಂದೆ ಪ್ರಾರಂಭವಾಗತಕ್ಕದ್ದಿರುವದು. ಈಗ ಸದ್ಯಕ್ಕೆ ಅವರು ಅವ್ಯಕ್ತ ಸ್ಥಿತಿಯಲ್ಲಿ ಇರುವರು, ಮೌನವ್ರತಸ್ಥರು. ಯಾವ ಬಗೆಯ ತಪಶ್ಚರ್ಯವನ್ನು ನಡಿಸಿರುವರೆಂಬದು ನಮಗೆ ಗೊತ್ತಿಲ್ಲ. 'ಆರ್ಯ' ವೆಂಬ ಮಾಸಪತ್ರಿಕೆಯಲ್ಲಿ ಏಳು ವರ್ಷಗಳಿಂದ ಅವರು, ಜಗತ್ತಿನ ವಿಚಾರದಲ್ಲಿಯೇ ಪ್ರಬಲವಾದ ಕ್ರಾಂತಿಯನ್ನುಂಟು ಮಾಡುವಂಥ ಅತ್ಯಂತ ಗಹನವಾದ ವಿಚಾರಗಳನ್ನು ಪ್ರಕಟಗೊಳಿಸುವರೆಂಬದು ಮಾತ್ರ ನಮಗೆ ಗೊತ್ತಿದೆ. ಅವರು ಆ ವಿಚಾರಗಳನ್ನು [illegible]ಕವಾಗಿ ಕೃತಿಯಲ್ಲಿ ತರುವದಕ್ಕೆ ಯಾವ ಬಗೆಯ ಸಾಧನಗಳನ್ನು ಕೈಕೊಳ್ಳುವರೆಂಬದು ಇನ್ನೂ ಗೂ[illegible] ಇಂಥ ಸ್ಥಿತಿಯಲ್ಲಿ, ನಾವು ಅವರ ಚಾರಿತ್ರ್ಯದ ಮರ್ಮವನ್ನು ಅವರ ಜೀವಿತದ ಸಂದೇಶವನ್ನು [illegible] ಆಯುಷ್ಯದ ಆದೇಶವನ್ನು ಹೇಳಲೆತ್ನಿಸುವದೆಂದರೆ ಒಂದು ರೀತಿಯಿಂದ ಭವಿಷ್ಯ ಪುರಾಣವನ್ನು ಬರೆಯುವದೇ ಸರಿ. ಇರಲಿ.

ಶ್ರೀ ಬಾಬೂ ಅರವಿಂದರ ಆಯುಷ್ಯಕ್ರಮಣವನ್ನು ಮೊದಲಿನಿಂದ ನಿರೀಕ್ಷಿಸಿದರೆ ನಮಗೆ ಏನು ತೋರುತ್ತದೆ? ಅವರು ಜನರು ಏನೆಂದಾರೆಂಬದನ್ನು ಲಕ್ಷಕ್ಕೆ ತಾರದೆ, ಕೇವಲ ಅಂತಃಪ್ರೇರಣೆಯಿಂದ ತಮ್ಮ ಆತ್ಮದ ಉನ್ನತಿಯನ್ನು ಸಾಧಿಸುತ್ತ ಬಂದಿರುವರು. ಮೊದಲು ಅವರು ಆಯ್ ಸಿ ಎಸ್. ಪರೀಕ್ಷೆಯನ್ನು ಕೊಟ್ಟು, ಕಲೆಕ್ಟರ ಕಮಿಶನರ ಮುಂತಾದ ಅಧಿಕಾರಗಳನ್ನು ಸಂಪಾದಿಸುವ ದಾರಿಯನ್ನು ಹಿಡಿದಿದ್ದರು. ಆ ಪರೀಕ್ಷೆಯಲ್ಲಿ ಪಾಸಾಗಿ ಇಂಗ್ಲಂಡದಲ್ಲಿ ಮೇಲಿನ ನಂಬರನ್ನು ಪಡೆದರು. ಆದರೆ ನಮ್ಮ ಸುದೈವದಿಂದ ಅವರು ಕುದುರೆಯನ್ನೇರುವದರಲ್ಲಿ ಅಕಸ್ಮಾತ್ತಾಗಿ ನಾಪಾಸಾದರು (ಕೆಲವರು ಅವರು ಅದಕ್ಕೆ ಕೂಡಲೇ ಇಲ್ಲವೆಂದು ಹೇಳುವರು) ಆದ್ದರಿಂದ ಅವರ ಆ ಮಾರ್ಗವು ತಪ್ಪಿಹೋಯಿತು. ಆನಂತರ ಬಡೋದೆಯಲ್ಲಿ ಪ್ರೊಫೇಸರ, ವ್ಹಾಯಿಸ ಪ್ರಿನ್ಸಿಪಾಲ ಮುಂತಾದ ಹುದ್ದೆಗಳನ್ನು ಪಡೆದರು

ಇನ್ನುಮುಂದೆ ದಿವಾಣರಾಗತಕ್ಕವರಿದ್ದರು. ಆದರೆ ಇಷ್ಟರಲ್ಲಿ ನಮ್ಮ ದೇಶದಲ್ಲಿ ಸ್ವದೇಶಿ ಚಳವಳಿಯು ಪ್ರಾರಂಭವಾಯಿತು. ಕೂಡಲೆ, ಇವರಿಗೆ ದೈವಿಕ ಪ್ರೇರಣೆಯುಂಟಾಯಿತು ಇವರು ಆ ಬಡೋದೆಯ ನವಕರಿಯಮೇಲೆ ತಿಲಾಂಜಲಿಯನ್ನಿಟ್ಟು, ದಾರಿದ್ರ್ಯ ವ್ರತವನ್ನು ಸ್ವೀಕರಿಸಿ ರಾಜಕೀಯ ರಣಾಂಗಣದಲ್ಲಿ ಒಮ್ಮೆಲೆ ಧುಮುಕಿದರು. ಆಗ ಇವರ ವಯಸ್ಸು ತೀರ ಚಿಕ್ಕದು, ಅಂದರೆ ೩೨ ಆದರೆ ಧುಮುಕುವದೊಂದೇ ತಡ, ಒಂದೆರಡೇ ವರ್ಷಗಳಲ್ಲಿ, ಇವರು ತಮ್ಮ ಬುದ್ಧಿಬಲದಿಂದ, ಮೇಧಾ, ಸಾಮರ್ಥ್ಯದಿಂದ ಎಲ್ಲ ದೇಶಭಕ್ತರಿಗಿಂತ ಮುಂದೆ ಈಸಿ ಹೋಗಿ ಲೋಕಮಾನ್ಯರ ಸರಿಸಮಾನಸ್ಕಂದರಾದರು. ದೇಶಾಭಿಮಾನಕ್ಕೆ ದಿವ್ಯವಾದ ತೇಜಸ್ಸನ್ನು ಕೊಟ್ಟರು. ತರುಣರಲ್ಲಿ ರಾಷ್ಟ್ರೀಯತ್ವದ ಜ್ಯೋತಿಯನ್ನು ಹೊತ್ತಿಸಿದರು. ಆದರೆ ರಾಷ್ಟ್ರೀಯತ್ವದ ಜ್ಯೋತಿಯೊಂದೇ ಸಾಲದು, ದೇಶಾಭಿಮಾನವೆಂಬ ದೀಪದ ಮಿಣಿಮಿಣಿ ಬೆಳಕಿನಿಂದ ನಮ್ಮ ದೇಶದ ಉದ್ಧಾರವು ಪೂರ್ಣವಾಗಿ ಆಗದೆಂದೂ ಹಿಂದುಸ್ಥಾನದ ಮುವತ್ತಮೂರು ಕೋಟಿ ಜನರಲ್ಲಿ ಆಧ್ಯಾತ್ಮಿಕದ ದಿವ್ಯವಾದ ಜ್ಯೋತಿಯನ್ನು ಹೊತ್ತಿಸುವದೇ ಮುಖ್ಯವಾದ ಕಾರ್ಯವೆಂದೂ ಬಗೆದು ತಮ್ಮಲ್ಲಿ ಅಂಥ ಲೋಕೋತ್ತರವಾದ ಸಾಮರ್ಥ್ಯವನ್ನು ತಂದುಕೊಳ್ಳುವದಕ್ಕಾಗಿ ಅವರು ಇಷ್ಟು ತಪಶ್ಚರ್ಯವನ್ನು ನಡಿಸಿರುವರು. ಹೀಗೆ ಅವರ ಆಯುಷ್ಯಮಣದಲ್ಲಿ ಎರಡು ಮೂರಾವರ್ತಿ ಬದಲಾವಣೆಗಳಾಗಿವೆ ಅವರ ಆತ್ಮವು ಏರುತ್ತೇರುತ್ತ ಈಗ ಅಂತ್ಯಂತ ಉಚ್ಚವಾದ ಶಿಖರದ ಮೇಲೆ ಕುಳಿತಿದೆ ಇಂಥ ತಪೋಬಲರು ನಮ್ಮ ದೇಶದಲ್ಲಿ ಕಾರ್ಯ ಮಾಡುವದಕ್ಕೆ ಪ್ರವೃತ್ತರಾದರೆ, ಮಿಕ್ಕವರು ಮೂರು ವರ್ಷಗಳಲ್ಲಿ ಮಾಡುವ ಪರಿಣಾಮವನ್ನು ಇವರು ಮೂರುಗಳಿಗೆಯಲ್ಲಿ ಮಾಡಲಾಪರೆಂಬದು ನಿರ್ವಿವಾದವಾಗಿದೆ. ಆದರೆ ಅವರು ಹಾಗೆ ಯಾವ ರೀತಿಯಿಂದ ಮಾಡುವರು, ಯಾವ ಮಾರ್ಗವನ್ನು ಸ್ವೀಕರಿಸುವರು ಎಂಬಿವೇ ಮೊದಲಾದ ಸಂಗತಿಗಳು ನಮ್ಮ ಮಾನವ ದೃಷ್ಟಿಗೆ ಅಗೋಚರವಾದ ಸಂಗತಿಗಳು. ಆದಕ್ಕಾಗಿ ಅವರು ಈಗಿನ ಸಮಾಜ ಪದ್ಧತಿಯನ್ನು ಬುಡಮೇಲು ಮಾಡಬಹುದು, ರಾಜಕೀಯ ಪ್ರವಾಹವನ್ನು ಹೊರಳಿಸಬಹುದು. ಅಥವಾ ಮತ್ತಾವದೊಂದು ಮಾರ್ಗವನ್ನು ಸ್ವೀಕರಿಸಬಹುದು ಅದು ಏನೇ ಇರಲಿ ಅವರು ಬುದ್ಧ, ಕ್ರಾಯಿಸ್ಟ ಶಂಕರ, ರಾಮಾನುಜ, ಮಧ್ವ ಮುಂತಾದ ಜಗತ್ತಿನ ದಿವ್ಯ ವಿಭೂತಿಗಳಲ್ಲಿ ಗಣಿಸಲ್ಪಡಬೇಕಾದ ಯೋಗ್ಯತೆಯುಳ್ಳವರೆಂದು ಮಾತ್ರ ನಿಃಸಂದೇಹವಾಗಿ ಹೇಳಬಹುದು. ಅವರ ಜೀವನವು ಎಂಥ ವಿಲಕ್ಷಣವಾದುದು ನೋಡಿರಿ! ಅವರು ಬಾಲ್ಯವನ್ನು ಕಳೆದದು ಇಂಗ್ಲಂಡಿನಲ್ಲಿ; ವಿದ್ಯಾಭ್ಯಾಸವನ್ನು ಮಾಡಿದ್ದು ಇಂಗ್ಲಿಷಿನಲ್ಲಿ, ಅವರು ಮೊದಲಿನಿಂದ ಪಾಶ್ಚಿಮಾತ್ಯ ಸಂಸ್ಕಾರಗಳಲ್ಲಿ, ನಡೆನುಡಿಗಳಲ್ಲಿ, ವಿಚಾರಗಳಲ್ಲಿ ಮುಳುಗಿದವರು. ದೊಡ್ಡವರಾಗುವ ವರೆಗೆ ಮಾತೃದೇಶದ ನೆನಪಿಲ್ಲ, ಮಾತೃಭಾಷೆಯ ಗಂಧವಿಲ್ಲ, ದೇವ ಭಾಷೆಯ ಜ್ಞಾನವಿಲ್ಲ, ಆರ್ಯಸಂಸ್ಕೃತಿಯ ಸಂಸ್ಕಾರವಿಲ್ಲ. ಹೀಗೆ ಎಲ್ಲ ಬಗೆಯಿಂದಲೂ ಪಾಶ್ಚಿಮಾತ್ಯರಾದವರು ಇಂದಿಗೆ ಆಚಾರದಲ್ಲಿ ವಿಚಾರದಲ್ಲಿ ಸಂಸ್ಕೃತಿಯಲ್ಲಿ ಎಲ್ಲರಿಗಿಂತ ಹೆಚ್ಚು ಪೌರ್ವಾತ್ಯರಾಗಿ, ಹಿಂದಿನ ಮಹಾಋಷಿಗಳ ಕೋಟಿಯಲ್ಲಿ ಸೇರಿರುತ್ತಾರೆಂಬದು ಎಂಥ ಆಶ್ಚರ್ಯಜನಕವಾದ ಸಂಗತಿಯು. ಅಥವಾ ಹಾಗೆ ಆಶ್ಚರ್ಯಪಡುವದಾದರೂ ಏಕೆ? ನಮ್ಮ ಪೂರ್ವಜರ ಪುಣ್ಯಪ್ರಭಾವವೇ ಅಂಥದು, ನಮ್ಮ ಆರ್ಯಸಂಸ್ಕೃತಿಯ ದಿವ್ಯಜ್ಞಾನದ ಪರಿಣಾಮವೇ ಅಂಥದು, ನಮ್ಮ ಭರತಭೂಮಿಯ ಭಾಗ್ಯವೇ ಅಂಥದು. ಅಂತಲೇ, ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ, ಮಹರ್ಷಿ ಅರವಿಂದರಂಥವರು ನಮ್ಮಲ್ಲಿ ಹುಟ್ಟುತ್ತಾರೆ!

ಧಾರವಾಡ.
೫–೭–೧೯೨೧

ವೆಂಕಟೇಶ ಭೀಮರಾವ ಆಲೂರ,
B. A., LL. B.

ಜಯ ಭುವನೇಶ್ವರೀ ! ಕರ್ನಾಟಕ ಮಾತೆ !!

# ಪರಿಚಯ.

೧. ಭವಿಷ್ಯತ್ಕಾಲದ ಗಾಢಾಂಧಃಕಾರದೊಳಗಿಂದ ಸಾಮಾನ್ಯ ಜನರಿಗೆ ಪ್ರವಾಸ ಮಾಡಲಿಕ್ಕೆ ಇತಿಹಾಸದ ವಿದ್ಯುತ್ ಪ್ರಕಾಶವು ಬಹಳ ಸಹಾಯ ಮಾಡುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಅಲ್ಪ ಪ್ರಯತ್ನವು ಮಾಡಲ್ಪಟ್ಟಿದೆ ಇದು ಯಾವದೊಂದರ ಭಾಷಾಂತರವಾಗಿರದೆ ಬೇರೆ ಬೇರೆ ಆಧಾರಗಳಿಂದ ಬರೆದ ಸ್ವತಂತ್ರವಾದ ಪುಸ್ತಕವಾಗಿದೆ

೨. ಮಹರ್ಷಿಗಳ ವಿಸ್ತೃತ ವೃತ್ತಾಂತವನ್ನೊಳಗೊಂಡ ಚರಿತ್ರವು ಈ ವರೆಗೆ ಯಾವ ಭಾಷೆಯಲ್ಲಿಯೂ ಆಗಿಲ್ಲ ಮಾಹಿತಿಯನ್ನು ದೊರಕಿಸಲಿಕ್ಕೆ ಶಕ್ಯವಿದ್ದಷ್ಟು ಪ್ರಯತ್ನಗಳನ್ನು ಮಾಡಿದೆ. ಇದನ್ನು ಬರೆಯುವಾಗ ಈ ಲೇಖಕನು ಸಹಾಯವಾದ ಗ್ರಂಥಕಾರರಿಗೆ ತುಂಬಾ ಕೃತಜ್ಞನಾಗಿದ್ದಾನೆ. ಇದರ ಮೊದಲನೆಯ ಪ್ರತಿಯನ್ನು ಸ್ವಲ್ಪ ಅವಸರದಿಂದ ಬರೆಯಬೇಕಾಯಿತು ಆಗ ದೊರೆತ ಆಧಾರ ಪುಸ್ತಕಗಳೊಳಗಿನ ಅವತರಣಗಳನ್ನು ತಕ್ಕೊಳ್ಳುವಾಗ ಅದರ ಪುಟ ಮುಂತಾದವುಗಳನ್ನು ಕಾಣಿಸುವದು ಹಾಗೇ ಉಳಿದು ಬಿಟ್ಟಿತು. ಮುಂದ ಹೊತ್ತಿಗೆ ಆ ಪುಸ್ತಕಗಳು ಸಿಗಲಿಲ್ಲವಾದುದರಿಂದ ಕೆಲವೆಡೆಗಳಲ್ಲಿ ಈ ದೋಷವು ಉಳಿದುದಕ್ಕೆ ಉಪಾಯವಿಲ್ಲ

೩. ಸಜ್ಜನರ ಸಹವಾಸವು ಹೆಜ್ಜೇನು ಸವಿದಂತೆಯಿರುತ್ತದೆ. ಮಹರ್ಷಿಗಳ ಪ್ರತ್ಯಕ್ಷ ಸಹವಾಸದ ಯೋಗವು ಇನ್ನೂ ಈ ಬಡಲೇಖಕನಿಗೆ ಸಿಕ್ಕಿಲ್ಲವಾದರೂ ವಾಙ್ಮಯಾತ್ಮಕ ಸಹವಾಸದಲ್ಲಿ ಕೂಡ ಅವರ ವಿಚಾರಗಳನ್ನು ನೆನೆ-ನೆನೆದು ಸ್ವರ್ಗೀಯ ಆನಂದವನ್ನು ಪಡೆಯಲಿಕ್ಕೆ ಸಿಕ್ಕಿತು. ಮಗುವು ಸೃಷ್ಟಿಯ ಶೋಭೆಯನ್ನು ನೋಡಿ ಆನಂದಬಟ್ಟು ಫೈ ಫೈ ಎಂದು ಕುಣಿದಾಡುತ್ತದೆ ಅದು ತನಗಾದ ಆನಂದವನ್ನು ಶಬ್ದಗಳಿಂದ ವ್ಯಕ್ತಪಡಿಸುವದರಲ್ಲಿ ಅಸಮರ್ಥ್ಯವಿರುತ್ತದೆ. ಆದರೂ ಹಿರಿಯರೆದುರಿಗೆ ತನ್ನ ಮನೋಗತವನ್ನು ಅಸ್ಫುಟ ಶಬ್ದಗಳಿಂದ ಹೇಗೋ ವ್ಯಕ್ತಬಡಿಸಿ ಮನಸ್ಸಿನ ಸಮಾಧಾನವನ್ನು ಮಾಡಿಕೊಳ್ಳದೆ ಬಿಡುವದಿಲ್ಲ. ಹಿರಿಯರು ಕಕ್ಕುಲತೆಯಿಂದ ಅದರ ಆ ತೊದಲ್ನುಡಿಗಳನ್ನೇ ಮನ್ನಿಸಿ, ಮಗುವಿಗೆ ಉತ್ತೇಜನವನ್ನೀಯುತ್ತಿರುವದುಂಟು.

೪ ಪ್ರಕೃತ ಲೇಖಕನ ಸ್ಥಿತಿಯೂ ಹೀಗೆಯೇ ಇದೆ. ವಿದ್ವಜ್ಜನರೆದುರಿಗೆ ಬರುವ ಪ್ರಥಮ ಪ್ರಯತ್ನವಿದು. ಇದನ್ನು ಬರೆದಿಟ್ಟ ಬಳಿಕ ಮುದ್ರಿಸುವ ಸಾಹಸವನ್ನು ಮಾಡಬೇಕೇ ಬಿಡಬೇಕೇ ಎಂಬ ವಿಚಾರದಲ್ಲಿ ಕೆಲದಿನಗಳು ಹೋದವು. ಹಂಸದಂತೆ ಗಮನಮಾಡಲಿಕ್ಕೆ ಬರುವದಿಲ್ಲೆಂದು ನಡೆಯುವದನ್ನು ಯಾರೂ ಕಟ್ಟು ಮಾಡಿಲ್ಲ, ಅಥವಾ ಕೋಗಿಲೆಯಂತೆ ಕಂಠವಿಲ್ಲೆಂದು ಹಾಡುವದನ್ನು ಯಾರೂ ನಿಲ್ಲಿಸಿಲ್ಲವೆಂಬ ವಿಚಾರಗಳು ಪುಕ್ಕ ಮನಸ್ಸಿಗೆ ಧೈರ್ಯವನ್ನು ಕೊಟ್ಟು ಈ ಸಾಹಸವನ್ನು ಮಾಡಿಸಿವೆ

೫. ಲೇಖಕನು ಹೊಸಬನಾದುದರಿಂದಲೂ, ಯಾವದೊಂದು ಭಾಷಯಲ್ಲಿ ಪಾಂಡಿತ್ಯವನ್ನು ಪಡೆಯದುದರಿಂದಲೂ ಇದರಲ್ಲಿ ಕುಂದು ಕೊರತೆಗಳುಳಿದಿರುವವು. ಮುದ್ರಣ ದೋಷಗಳಿಗೂ ಕಡಿಮೆಯಿಲ್ಲ ಆದರೆ ಅವುಗಳನ್ನು ಉದಾರ ದೃಷ್ಟಿಯಿಂದ ನೋಡಬೇಕೆಂದು ಕೃಪಾಳುವಾದ ಸಮಾಜಪುರುಷನಿಗೆ

ಪ್ರಾರ್ಥಿಸುತ್ತೇನೆ ದಯಾರ್ದ್ರ ದೃಷ್ಟಿಯಿಂದ ಗುಣದೋಷಗಳನ್ನು ಚರ್ಚಿಸಿ ತಿಳಿಸಿದಲ್ಲಿ ಮುಂದಿನ ಪ್ರಯತ್ನದ ಕಾಲಕ್ಕೆ ಅವುಗಳ ಉಪಯೋಗವು ಬಹಳವಾಗುವದು ಭಾಷೆಯು ಸಜೀವವಾಗಬೇಕೆಂದು ಇದನ್ನು ವಿಶಿಷ್ಟ ಶೈಲಿಯಲ್ಲಿ ಬರೆದಿದೆ ಕೆಲವು ಸಂಗತಿಗಳನ್ನು ಬಿಂಬಿಸುವದಕ್ಕಾಗಿ ದ್ವಿರುಕ್ತಿ ದೋಷವನ್ನು ಮಾಡಬೇಕಾಯಿತು.

೬. ಆಡದೆ ಮಾಡುವವನು ರೂಢಿಯೊಳಗುತ್ತಮನು ಎಂಬದು ಸತ್ಯವಾದರೂ ವಾಚಕ ಬಂಧು ಭಗಿನಿಯರಿಗೆ ಈ ಪ್ರಥಮ ಪರಿಚಯದಲ್ಲಿ ಇನ್ನೊಂದು ಕಿವಿಮಾತು ಹೇಳುವದಿದೆ. ಪ್ರಸ್ತುತ ಲೇಖಕನು ಶ್ರೀಗಣೇಶಾಯನಮಃ ಎಂದು ಆರಂಭಿಸಿರುವ ಈ ವಾಙ್ಮಯ ಸೇವೆಯಲ್ಲಿ ಅರ್ಥಿಕ ದೃಷ್ಟಿಯು ಇರದೆ ಬೇರೊಂದು ಉದ್ದೇಶವಿರುತ್ತದೆ. ಗುರುಹಿರಿಯರ ಋಣವನ್ನೂ, ದೇಶದ ಋಣವನ್ನೂ, ತೀರಿಸಲಿಕ್ಕೆ ಈ ಲೇಖಕನಿಗೆ ಇದೊಂದೇ ಮಾರ್ಗವಿರುತ್ತಿರುವದರಿಂದ ತದ್ದ್ವಾರವಾಗಿಯೇ ನಿರಪೇಕ್ಷ ಬುದ್ಧಿಯಿಂದ ಈಶ ಸೇವೆಯನ್ನು ಮಾಡಿ ಕೃತಾರ್ಥನಾಗಬೇಕೆಂದು ಆತನ ಸಂಕಲ್ಪವಿದೆ. ಅದನ್ನು ಪೂರ್ಣಮಾಡುವದು ಕೆಲಮಟ್ಟಿಗೆ ವಾಚಕರುಗಳ ಕೈಯಲ್ಲಿದೆ.

೭. ಈ ಪುಸ್ತಕವು ವಾಚಕರ ಕೈಯಲ್ಲಿ ಬೀಳುವವರೆಗೆ ಅನೇಕ ಮಿತ್ರರಿಂದಲೂ ಹಿತಚಿಂತಕರಿಂದಲೂ ಸಹಾಯವಾಗಿದೆ ಶ್ರೀ ಅರವಿಂದರ ತತ್ವಜ್ಞಾನದ ದೀರ್ಘ ವ್ಯಾಸಂಗ ಮಾಡಿದ ಶ್ರೀಯುತ ಆಲೂರವರು ಸ್ವಸಂತೋಷದಿಂದ ಪ್ರಸ್ತಾವನೆಯನ್ನು ಬರಕೊಟ್ಟು ಪ್ರೋತ್ಸಾಹಿಸಿದರು. ಶ್ರೀಮತ್ಸ್ವತಂತ್ರಾನಂದಮೂರ್ತಿಗಳ ದರ್ಶನದ ಲಾಭವು ಆಕಸ್ಮಿಕವಾಗಿ ಪ್ರಾಪ್ತವಾಗಿ, ಅವರ ಸಂಗಡ ಆದ ಸ್ವಲ್ಪ ಸಂಭಾಷಣದೊಳಗೆ ಮಹರ್ಷಿಗಳ ವಿಷಯಕ್ಕೆ ಕೆಲವು ಹೊಸ ಸಂಗತಿಗಳು ತಿಳಿಯಬಂದವು. ದೇ. ಭ. ಬೇಂದ್ರೆಯವರು ಕೆಲವು ಪುಸ್ತಕಗಳನ್ನು ಪೂರೈಸಿದರು. ಮೆಸರ್ಸ ಧಾರವಾಡಕರರು ಪ್ರಕಾಶನಕಾರ್ಯಕ್ಕೆ ಒಪ್ಪಿಕೊಂಡರು ಇವರೆಲ್ಲರುಗಳ ಉಪಕಾರದ ಭಾರವು ಬಹಳವಿರುತ್ತದೆ. ಶ್ರೀ. ಜರಾರ ಯಶವಂತರಾಯರು ಮುದ್ರಣಕಾರ್ಯದಲ್ಲಿ ಬಹಳ ಸಹಾಯ ಮಾಡಿದ ಬಗ್ಗೆ ಈ ಲೇಖಕನು ಅವರ ಆಭಾರಗಳನ್ನು ಮನ್ನಿಸದೆ ಇರಲಾರನು ಶ್ರೀ. ವೇಂಕಟರಾವ ಬಾಪಟರ ಸಹಾಯವನ್ನು ಒಂದೆರಡು ಶಬ್ದಗಳಲ್ಲಿ ಹೇಳಿದರೆ ತೀರದು. ಸ್ಥಳಾಭಾವದ ಮೂಲಕ ಇನ್ನೂ ಅನೇಕರ ಹೆಸರುಗಳನ್ನು ಬಿಡಬೇಕಾದುದರಿಂದ ಅವರು ಕ್ಷಮಿಸುವರೆಂದು ನಂಬುಗೆಯಿದೆ. ಪರಮೇಶನು ಇವರೆಲ್ಲರುಗಳಿಗೆ ಸದ್ಬುದ್ಧಿಯನ್ನಿತ್ತು ಸಹಾಯಕರಾಗಿ ಮಾಡಿದುದಕ್ಕೆ ಆತನ ಪಾದಾರವಿಂದದಲ್ಲಿ ಅನಂತ ಪ್ರಣಾಮಗಳೊಂದಿಗೆ ಈ ಕೃತಿಕುಸುಮವನ್ನು ಸಮರ್ಪಿಸಿ ಲೇಖಕನು ಸ್ವಸ್ಥನಾಗುತ್ತಾನೆ.

ಧಾರವಾಡ
ಆಷಾಢ ಶುದ್ಧ ೧೧ ೧೮೪೩

ತಮ್ಮ ನಮ್ರ ಸೇವಕನಾದ,

**ಶ. ಬಾ. ಜೋಶಿ.**

# ಇದನ್ನು ಬರೆಯುವದರಲ್ಲಿ ಆಧಾರಕ್ಕಾಗಿ ಉಪಯೋಗಿಸಿದ ಪುಸ್ತಕಗಳೂ ಲೇಖಗಳೂ:—


1. A study of Aurobindo Ghosh ಶ್ರೀ. ಜಿತೇಂದ್ರಲಾಲ ಬ್ಯಾನರ್ಜಿ (Modern Review September 1909).
2. Indian Nationalism: Its principles & personalities ಶ್ರೀ. ಬಿಪಿನಚಂದ್ರಪಾಲ
3. Life of Sri Arivind Ghosh ಆರ್. ಪಲಿತ.
4. New spirit in India ನೆವ್ಹಿನ್‌ಸನ್.
5. ಆರ್ಯ ಮಾಸಿಕ ಪುಸ್ತಕದ ಫೈಲುಗಳು.
6. ಕರ್ಮಯೋಗಿನ್‌ದ ಫೈಲು.
7. Standard Bearer Vol. I.
8. अरविंदची आपल्या पत्नीस पत्रे ವಾ. ಗೋ. ಆಪಟೆ.
9. Nation builders Part III.
10. Yogic Sadhana ಉತ್ತರಯೋಗಿ.


ಅಲ್ಲದೆ "ನಾರಾಯಣ" ಆಫೀಸಿನವರು ಕಳಿಸಿದ ಪತ್ರ "ಕೇಸರಿ" ಯ ೧೯೦೨-೮ರ ಫೈಲು "ರಾಷ್ಟ್ರಮತ" "ಕಾಳ" ಮತ್ತು "ಮುಂಬಯಿ ಕ್ರಾನಿಕಲ್" ಪತ್ರಗಳೊಳಗಿನ ಕೆಲವು ರಿಪೋರ್ಟುಗಳು ಇವುಗಳ ಉಪಯೋಗವೂ ಅತ್ಯಂತವಾಗಿದೆ. ಇವರಿಗೆ ಲೇಖಕನು ತುಂಬಾ ಋಣಿಯಾಗಿದ್ದಾನೆ.

## ಶುದ್ಧೀಕರಣಂ

ಅರ್ಥಕ್ಕೆ ಬಾಧೆಬರುವಂಥ ಕೆಲವು ಮುದ್ರಣ ದೋಷಗಳು ಉಳಿದಿವೆ. ವಾಚಕರು ದಯಮಾಡಿ ಮೊದಲು ಇವನ್ನು ತಿದ್ದಿಕೊಂಡು ಓದಲು ಆರಂಭಿಸಬೇಕೆಂದು ಬಿನ್ನಹವಿದೆ.

| ಪುಟ. | ಪಙ್ಕ್ತಿ. | ತಪ್ಪು. | ಒಪ್ಪು. |
|---|---|---|---|
| ೧ | ೨ | व्यायति | ध्यायति |
| ೨ | ೩ | तुप्यते | तृप्यते |
| ೨ | ೪ | तस्मिन् | तत्तस्मिन् |
| ೨ | ೪ | व्यजितं | व्यञ्जितं |
| ೮ | ೮ | (Guilt) | (Gilt) |
| ೯ | ೧೪ | ೧೮೫ | ೧೮೮೫ |
| ೧೬ | ೧೪ | Schoolar | Scholar |



श्री अरविंदयोगी.

चित्रशाळा प्रेस, पुणें.

ವಂದೇ ಮಾತರಂ!!

# ಮಹರ್ಷಿ ಅರವಿಂದ ಘೋಷ

ಇವರ

# ಸಂಕ್ಷಿಪ್ತ ಚರಿತ್ರವು.

## ೧ ಪೀಠಿಕೆ.

यन्मनसा ध्यायति तद्वाचा वदति ।
यद्वाचा वदति तत् कर्मणा करोति ।
यत् कर्मणा करोति तदभि संपद्यते ।

—श्रुति

ಮನಸ್ಸಿನ ಶಕ್ತಿಯು ಅತ್ಯದ್ಭುತವಿರುತ್ತದೆ. ಬ್ರಹ್ಮನು ಸೃಷ್ಟಿಯನ್ನು ಸೃಜಿಸಬೇಕೆಂದು ಮನಸ್ಸಿನಲ್ಲಿ ತಂದನು; ಸೃಷ್ಟಿಯು ಉತ್ಪನ್ನವಾಯಿತು! मन एव मनुष्याणाम् कारणम् बंधमोक्षयोः ಎಂಬ ವಚನವಾದರೂ ಮನಸ್ಸಿನ ಮಹತ್ವವನ್ನೇ ಸೂಚಿಸುತ್ತದೆ. ಈ ಪ್ರಕರಣದ ಶಿರೋಭಾಗದಲ್ಲಿ ಉದ್ಧೃತವಾದ ಶ್ರುತಿಯಾದರೂ ಮನಸ್ಸಿನಲ್ಲಿ ಅದ್ಭುತ ಶಕ್ತಿಯುಂಟೆಂದೇ ಹೇಳುವದಿಲ್ಲವೇ? ಅಷ್ಟು ದೂರ ಏತಕ್ಕೆ, ಜನರ ನಿತ್ಯವ್ಯವಹಾರಗಳು ಏನನ್ನು ಬೋಧಿಸುತ್ತವೆ? ಮನುಷ್ಯನ ಶರೀರವು ಮುಂಜಾವಿನಿಂದ ಸಂಜೆಯವರೆಗೆ ಮನಸ್ಸಿನ ದಾಸವಾಗಿರುತ್ತದೆ, ಮನಸ್ಸು ಆಜ್ಞಾಪಿಸಿದತ್ತ ಶರೀರವು ಒಂದು ಕ್ಷುಲ್ಲಕ ಯಂತ್ರದೋಪಾದಿಯಲ್ಲಿ ತಿರುಗುತ್ತಿರುತ್ತದೆ. ಮನಸ್ಸು ಏಳೆನ್ನುತ್ತಲೆ ಅದು ಏಳುವದು, ಕುಳ್ಳಿರೆಂದೊಡನೆ ಕುಳಿತುಕೊಳ್ಳುವದು. ಅಂತೂ ಶರೀರವೆಂದರೆ ಅದೊಂದು ಮನಸ್ಸಿನ ಕೈಯೊಳಗಿನ ಆಟಿಕೆಯ ಜೀನಸಿನಂತಿರುತ್ತದೆ.

ಈ ದೃಷ್ಟಿಯಿಂದ ವಿಚಾರಿಸಿದರೆ ಜಗತ್ತಿನ ಎಲ್ಲ ಘಡಾಮೋಡಿಗಳಿಗೂ ಮನಸ್ಸಿನ ಅಧಿಷ್ಠಾನವಿದ್ದೇ ಇರುತ್ತದೆಂದು ಹೇಳಬಹುದು, ಪ್ರತಿಯೊಬ್ಬನು ಮಾಡುವ ಪ್ರತಿಯೊಂದು ಕಾರ್ಯಕ್ಕೆ ಉಚ್ಚ ಅಥವಾ ನೀಚ ಹೇತು (ಉದ್ದೇಶ) ವು ಇರುತ್ತದೆ. ಪ್ರತಿಯೊಬ್ಬನು ಸರ್ವೇಶನನ್ನು ತನ್ನ ಕರ್ಮಮಯ ಪುಷ್ಪಗಳಿಂದ ದಿನಾಲು ಅರ್ಚಿಸು

ತ್ತಿರುತ್ತಾನೆ. ಈ ಕರ್ಮ-ಕುಸುಮಗಳಿಗೆ ಇರುವ ಹೇತು ರೂಪಿಯಾದ ಗಂಧವು ಸುಷ್ಟ-ದುಷ್ಟವಾಗಿದ್ದಂತೆ ಪೂಜೆಯ ಫಲವು ಸಿಕ್ಕುತ್ತಿರುತ್ತದೆ. ಜಗತ್ಪಾಲಕನಿಗೆ ಎಲ್ಲಿಯ ವರೆಗೆ ಸತ್ಕರ್ಮ ಸುಗಂಧಿತ ಪುಷ್ಪಗಳು ಸಿಗುವವೋ ಅಲ್ಲಿಯ ವರೆಗೆ ಆತನು ಸಿಟ್ಟಾಗಲು ಕಾರಣವೇ ಇಲ್ಲ. ಮಾತ್ರ ಇದಕ್ಕೆ ವಿಪರೀತವಾಗಿ, ಎಂದು ಆಚರಣಕ್ಕೆ ಆರಂಭವಾಗುವದೋ ಆಗ ಪರಮಾತ್ಮನ ಅವಕೃಪೆಗೆ ಆರಂಭವಾಯಿತೆಂದೇ ತಿಳಿಯತಕ್ಕದ್ದು.

ಎಂದು ಪರ್ಯಂತರ ಭಾರತೀಯರು ಭಾರತ ಜನನಿಯನ್ನು ಸತ್ಕ್ರಿಯಾ ಕುಸುಮಗಳಿಂದ ಅನನ್ಯಭಾವದಿಂದ ಅರ್ಚಿಸುತ್ತಿದ್ದರೋ ಅಂದು ಪರ್ಯಂತರ ಅವರು ಐಶ್ವರ್ಯ ಶಿಖರದಲ್ಲಿಯೇ ಇದ್ದರು. ಎಲ್ಲಿಯವರೆಗೆ ಬ್ರಾಹ್ಮಣರು ತಮ್ಮ ಬೌದ್ಧಿಕ ತಪಶ್ಚರ್ಯದಿಂದಲೂ, ನಿಸ್ವಾರ್ಥಿಯಾದ ನಿಸ್ಪೃಹ ವೃತ್ತಿಯಿಂದಲೂ ಭಾರತ ಜನನಿಯನ್ನು ಸೇವಿಸಿದರೋ, ಕ್ಷತ್ರಿಯರು ತಮ್ಮ ಅತುಲ ಪರಾಕ್ರಮದಿಂದ ಪರರಿಂದ ಮಾತೃಭೂಮಿಯನ್ನು ಉಳಿಸಿದರೋ, ವೈಶ್ಯರು ಅನುಪಮೇಯ ವೈಭವದಿಂದ ಪ್ರಾಮಾಣಿಕ ವ್ಯವಹಾರಗಳಿಂದ ಜಗತ್ತಿನ ಯೋಗಕ್ಷೇಮವನ್ನು ಸಾಗಿಸಿದ್ದರೋ, ಎಲ್ಲಿಯವರೆಗೆ ಭಾರತೀಯರು ಕ್ಷುದ್ರ ದೃಷ್ಟಿಯವರಾಗಿ ಅಂತಃಕಲಹಗಳಿಗೆ ಈಡಾಗಿದ್ದಿಲ್ಲವೋ ಅಲ್ಲಿಯ ವರೆಗೆ ಹಿಂದುಸ್ತಾನವು ಐಶ್ವರ್ಯದ-ಸುಖ ಸಮಾಧಾನದ ತವರುಮನೆಯಾಗಿತ್ತು, ಹಿಂದುಸ್ತಾನವೆಂದರೆ ಬುದ್ಧಿವಂತರ ಆಗರ, ಶೌರ್ಯಶಾಲಿಗಳ ನಿಧಾನ, ವ್ಯವಹಾರ ಚತುರರ ಖನಿಯಾಗಿತ್ತು. ಭಾರತೀಯರಿಂದ ಪ್ರಜ್ವಲಿತವಾದ ಜ್ಞಾನಜ್ಯೋತಿಯ ಪ್ರಕಾಶದಲ್ಲಿ ಗ್ರೀಸ ರೋಮಾದಿಗಳು ತಮ್ಮ ವ್ಯವಹಾರಗಳನ್ನು ನಡೆಸುತ್ತಿದ್ದವು!

ಈ ಸ್ಥಿತಿಯು ಎಂದಿನದು? ಯಾವಾಗ ಜನರು ತಮ್ಮ ಸುಮನ ಪರಿಮಳಯುಕ್ತ ಪುಷ್ಪಗಳನ್ನು ಪರಮಾತ್ಮನಿಗೆ ಅರ್ಪಿಸುತ್ತಿದ್ದರೋ ಆವಾಗಿನದು. ಆಗ ಹಿಂದುಸ್ತಾನದಲ್ಲಿ ಬಂಗಾರದ ಹೊಗೆ ಹಾಯುತ್ತಿತ್ತು. ಆದರೆ ಇಂದೇನು? ಹೊತ್ತಿಗೆ ಕಟ್ಟಿಗೆಯ ಹೊಗೆ ಹಾಯುವದೂ ದುಸ್ತರವಾಗಿದೆ! ಹೀಗೆ ಯಾಕೆ ಆಯಿತು? ಯಕ್ಷನ ಮಾಟದಿಂದ ಹಿಂದುಸ್ತಾನದೊಳಗಿನ ಜನರೇನು ವನಕುರಿಗಳಾದರೋ, ಅಥವಾ ಮನುಷ್ಯರೂಪಿ ಮೃಗಗಳಾದರೋ ಆದುದಾದರೂ ಏನು? ಈಶಕೋಪವು ಯಾಕೆ ಆಯಿತು? ಆ ನಿಸ್ವಾರ್ಥಿಗಳೂ, ನಿಗ್ರಹಾನುಗ್ರಹ ಸಾಮರ್ಥ್ಯಪೂರ್ಣರೂ ಆದ ಆ ಬ್ರಾಹ್ಮಣರು ಎಲ್ಲಿ ಹೋದರು? ಜ್ಞಾತ ಜಗತ್ತನ್ನು ಗೆದ್ದು ಮತ್ತೆ ಕೋಟಿಕೋಟಿ ಕೀರದ ಇದ್ದುದರಿಂದ ಶೌರ್ಯದಿಂದ ಮುಸಗುಡುವ ಆ ಕ್ಷತ್ರಿಯರು ಎಲ್ಲಿ ಅಡಗಿದರು? ಜಗತ್ತಿನ ಬೇರೆ ಬೇರೆ ಭಾಗಗಳೊಡನೆ ವ್ಯಾಪಾರ ನಡಿಸಿ ಅಪಾರ ಸಂಪತ್ತು ಗಳಿಸಿ ಭರತ ಭೂಮಿಗೆ ಸುವರ್ಣಭೂಮಿ ಎಂಬ ಸಾರ್ಥನಾಮ ಮಾಡಿದ ಆ ಕುಶಲ ವೈಶ್ಯರು ಎಲ್ಲಿ ಅದೃಶ್ಯರಾದರು! ಏನು ಮಾಟವಿದು! ಅಸದೃಶವಾದ ಬೌದ್ಧಿಕ ತೇಜಸ್ಸಿನಿಂದ ಜಗತ್ತಿನ ವಿಶ್ವಜ್ಞನರ ಕಣ್ಣು ಕುಕ್ಕಿಸಿದ ಆ ಬ್ರಾಹ್ಮಣರ-ನಿಸ್ವಾರ್ಥಿಯಾದ ಹಾಗೂ ಲೋಕೋಪಕಾರಕ್ಕಾಗಿಯೇ ದೇಹಧಾರಣೆಯನ್ನು ಮಾಡಿದ ಆ ಬ್ರಾಹ್ಮಣರ ವಂಶಜರು ಇವರೇ ಏನು, ಇಂದು ಗೇಣು ಹೊಟ್ಟೆ ತುಂಬಿಸಿ

ಕೊಳ್ಳಲಿಕ್ಕೆ ಅವತ್ತು ಮುಂದೆ ಹವಾಲದಾರರ ಬೂಟು ಒರಿಸುತ್ತ ತಿರುಗುವ ಇಂದಿನ ನಾಮಧಾರಿ ಬ್ರಾಹ್ಮಣರು? ತೋಳದ ನಾತ ಬಡಿಯುತ್ತಲೆ ಕೈಕಾಲು ಬಿಡುವ ಕುರಿಯಂತೆ ರಣಹೇಡಿಗಳಾದ ಸುಖಲೋಲುಪ ಇಂದಿನ ಕ್ಷತ್ರಿಯಬ್ರುವರು, ಆ ಮಹಾ ಪ್ರತಾಪಶಾಲಿಗಳಾದ ಆ ಕ್ಷತ್ರಿಯರ ರಕ್ತದವರೇ ಏನು? ಚುಟ್ಟ ಬೀಡಿಯ ಅಂಗಡಿಗಳನ್ನು ಅಥವಾ ಪರದೇಶೀ ಮಾಲಿನ ದಲಾಲಿ ಮಾಡಿ ವೈಶ್ಯರೆಂದು ಹೇಳುವ ವಣಿಕ್ಕರು ಆ ವೈಭವಶಾಲಿ ವ್ಯಾಪಾರಿಗಳ ಗೋತ್ರದವರೇ ಏನು? ಅಯ್ಯೋ! ಎಷ್ಟು ಹೃದಯಭೇದಕ ಅಭ್ಯಂತರವಿದು! ಭರತಖಂಡದ ನಿವಾಸಿ ಎಂಬ ಬಗ್ಗೆ ಅಭಿಮಾನ ಬಡುವಂಥ ಐಶ್ವರ್ಯದ ದಿನಗಳೆತ್ತ! ಮತ್ತು ಇಂದಿನ ಹಿಂದೂ ಎಂದೆನಿಸಿಕೊಳ್ಳಲಿಕ್ಕೆ ಮಾನಸಾಲದ ಈ ದುರ್ದಿನಗಳೆತ್ತ! ಮಾತೆ, ಯಾಕೆ ಇಷ್ಟು ಕೋಪಗೊಂಡೆ? ಛೇ ನೀನಾದರು ಏನು ಮಾಡೀ, ಯಥಾಪ್ರಕಾರ ನಿನ್ನ ಪ್ರಜೆಯಾಗದಾಯಿತು.

ಜನರ ಪ್ರತಿಯೊಂದು ವ್ಯವಹಾರವು ಉದಾತ್ತ ಸ್ವರೂಪದಲ್ಲಿರಲಿಕ್ಕೆ ಅವರ ಮನಸ್ಸು ಉದಾತ್ತವಿರಲಿಕ್ಕೆ ಬೇಕು. ಉದಾತ್ತ ಮನಸ್ಸು ಇದ್ದರೆ ಉದಾತ್ತ ಕೃತಿ. ಉದಾತ್ತ ಕೃತಿ ಕುಸುಮಗಳು ಭಾರತ ಮಾತೆಗೆ ಬರಬರುತ್ತ ಸಿಗದಾದವು; ಅವಕೃಪೆಗೆ ಆರಂಭವಾಯಿತು. ಮೊದಲಿನ ಪ್ರಜೆಯಿಂದ ಸಿಕ್ಕ ಫಲದ ಅನುಭವ ತಕ್ಕೊಳ್ಳುವದರಲ್ಲಿ ಜನರು ಗುಂಗು ಆದರು. ಬ್ರಾಹ್ಮಣನು ತನ್ನ ಪೂರ್ವಜರ ವಿದ್ವತ್ತೆಯ ಪ್ರತಿಫಲವನ್ನು ಅನುಭವಿಸುವದರಲ್ಲಿ, ಕ್ಷತ್ರಿಯನು ತನ್ನ ಹಿರಿಯರ ಶೌರ್ಯದಿಂದ ದೊರಕಿಸಿದ ಐಶ್ವರ್ಯದ ವಿಲಾಸದಲ್ಲಿ, ವೈಶ್ಯನು ತನ್ನ ವಂಶಜರು ಗಳಿಸಿದ ಸಂಪತ್ತಿನ ಉಪಭೋಗದಲ್ಲಿ ಆನಂದಪಡಹತ್ತಿದನು. ಸ್ವಾತಂತ್ರ್ಯ ವೃತ್ತಿಯು ಕಡಿಮೆಯಾಗಹತ್ತಿತು. ಸ್ವಾವಲಂಬನವು ನಷ್ಟವಾಯಿತು. ಖಡ್ಗವು ಎಷ್ಟು ತೀಕ್ಷ್ಣವಿದ್ದರೂ ಅದನ್ನು ಆಗಾಗ್ಗೆ ಉಪಯೋಗಿಸದಿದ್ದರೆ ಜಂಗು ತಿನ್ನುವದು ಸ್ವಾಭಾವಿಕವಿದೆ. ಬುದ್ಧಿ, ಶೌರ್ಯ, ಚಾತುರ್ಯಗಳು ನಿತ್ಯದ ವ್ಯವಹಾರದ ಸಾಣೇಕಲ್ಲಿನ ಮೇಲೆ ಮಸೆಯದಿದ್ದರೆ ಜಂಗು ತಿನ್ನುತ್ತವೆ. ಹಿರಿಯರು ಗಳಿಸಿದ್ದರ ಮೇಲೆ ತೃಪ್ತಿಬಟ್ಟು ಅದರ ಉಪಭೋಗದಲ್ಲಿ ಮಗ್ನರಾದ ಭಾರತೀಯರು ದಿನೇ ದಿನೇ ಹೀನ ಮನಸ್ಕರಾಗಹತ್ತಿದರು. ಅಧಃಪಾತಕ್ಕೆ ಆರಂಭವಾಯಿತು. ಇಳಿಜಾರಿಗೆ ಒಮ್ಮೆ ಸಿಕ್ಕ ಕಲ್ಲು ಉರುಳುತ್ತ ಉರುಳುತ್ತ ತಳಕಾಣುವದು. ವೈಭವ ಶಿಖರದಿಂದ ಚ್ಯುತವಾದ ಹಿಂದುಸ್ಥಾನವು ಗಡಗಡನೆ ಉರುಳುತ್ತ ಅನೇಕ ಮುಸಲ್ಮಾನೀ ಮನೆತನಗಳೆಂಬ ಬಂಡೆಗಲ್ಲುಗಳ ಮೇಲೆ ಅಪ್ಪಳಿಸಿತು. ಕೆಲವು ಯುರೋಪೀಯ ಪ್ರಸ್ಥಗಳ ಮೇಲೆ ಡಿಕ್ಕಿ ತಿಂದಿತು. ಯುರೋಪೀಯ ಪ್ರಸ್ಥಗಳಲ್ಲಿ ಇಂಗ್ಲಂಡವು ಮುಖ್ಯವಿದ್ದುದರಿಂದ ಅದರ ಸಂಯೋಗವಾಗಿ ಬಹು ದೊಡ್ಡ ಆಘಾತ ಪ್ರತ್ಯಾಘಾತಗಳನ್ನು ಹೊಂದಿತು.

ಹಿಂದುಸ್ಥಾನವು ತನ್ನ ಪ್ರಾಚೀನ ವೈಭವವನ್ನು ಕಳಕೊಂಡಿತು. ಜನರು ಉದಾತ್ತ ಧ್ಯೇಯಚ್ಯುತರಾದರು. ಬದುಕುವದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂದು ಬಗೆಯಹತ್ತಿದರು. ಬಹು ಸಂಖ್ಯಾಕರು ಹೀನ ಮನಸ್ಸಿನವರಾದ ಬಳಿಕ ದೇಶವು ಹೀನದೆಸೆಗೆ

ಬಂದದ್ದರಲ್ಲಿ ಏನು ಆಶ್ಚರ್ಯ? ಯಾಕೆಂದರೆ ದೇಶದೊಳಗಿನ ಜನರೆಂದರೇ ಆ ದೇಶ. ಶಾರೀರಿಕ ಅಧಃಪಾತದ ಮೊದಲು ಮಾನಸಿಕ ಅಧಃಪಾತವಾಗುತ್ತಿರುತ್ತದೆ. ಮನಸ್ಸಿದ್ದರೆ ಶಾರೀರಿಕ ದಾಸ್ಯದೊಳಗಿಂದ ಪಾರಾಗಬಹುದು. ಆದರೆ ಮಾನಸಿಕ ದಾಸ್ಯವೇ ಇದ್ದುದಾದರೆ ಅದರೊಳಗಿಂದ ದಾಟುವದು ಅಸಾಧ್ಯವು. ತಾನು ಕುರಿಯೆಂದು ನಂಬಿ ಸಿಂಹವು ಒಂದು ಕುರಿ ಹಿಂಡಿನೊಳಗೆ ವಾಸವಾಗಿತ್ತಂತೆ ಓಡಿಹೋಗಬೇಕೆಂದು ನಿಶ್ಚಯಿಸಿದ ಪ್ರಾಣಿಯನ್ನು ಅರ್ಥಾತ್ ಮನಸ್ಸಿನಿಂದ ಒಪ್ಪದ ಪ್ರಾಣಿಯನ್ನು ಬಂಧಿಸುವದು ಅಸಾಧ್ಯವು. ಅಂತೇ ಅದನ್ನು ಒಲಿಸಿಕೊಳ್ಳಲಿಚ್ಛಿಸುವವರು ಮೊದಲು ಅದು ತನ್ನನ್ನು ನಂಬುವಂತೆ (ವಿಶ್ವಾಸವಿಡುವಂತೆ) ಮಾಡುತ್ತಾರೆ ಇದರ ರಹಸ್ಯವೇನು? ಬಾಬರನಿಗೆ ತನ್ನ ಸಾಮ್ರಾಜ್ಯದ ಸ್ಥಿರತ್ವದ ಬಗ್ಗೆ ಅವಿಶ್ವಾಸವಿತ್ತು. ಯಾಕಂದರೆ ಆಗ ಇನ್ನೂ ಮನಸ್ಸಿನಿಂದ ಜನರು ಆತನಿಗೆ ಅಂಕಿತರಾಗಿದ್ದಿಲ್ಲ. ಆದರೆ ಅಕಬರನ ಕಾಲಕ್ಕೆ ಅದಕ್ಕೆ ಸ್ಥಿರತ್ವವು ಬಂತು. ಯಾಕಂದರೆ ಮಾನಸಿಂಹನಂಥ ರಣಧುರಂಧರರು ಮನಸ್ಸಿನಿಂದ ಆತನ ಗುಲಾಮರಾದರು. ಅಫಗಾಣರ ಒಂದು ಗೇಣು ದೇಶವು ಮನಸ್ಸಿನಿಂದ ಇಂಗ್ಲಿಶರ ಅಧಿಕಾರಕ್ಕೆ ಒಲ್ಲದುದರಿಂದ ಬ್ರಿಟಿಶರ ಎರಡು ಸಾರೆ ಮಾಡಿದ ಪ್ರಯತ್ನಗಳೂ ನಿಷ್ಫಲವಾದವು. ಆದರೆ ೩೦ ಕೋಟಿಯ ಅವಾಢವ್ಯ ಹಿಂದುಸ್ತಾನವು ಬ್ರಿಟಿಶರನ್ನು ಮನಸ್ಸಿನಿಂದ ಆದರಿಸಿದ್ದರಿಂದ ಅವರ ವಿಯೋಗಕ್ಕೆ ಭೀತಿಪಡುತ್ತದೆ! ಇಂಗ್ಲಿಶರು ಬಹು ದೊಡ್ಡ ಮಾಟ ಮಾಡಿದ್ದೆಂದರೆ ಅವರು ಹಿಂದೂ ಜನರ ಮನಸ್ಸನ್ನು ನಾನಾವಿಧದಿಂದ ಗುಲಾಮವಾಗಿ ಮಾಡಿದುದು. ಅವರ ರೇಲ್ವೆ, ಅವರ ತಾರಾಯಂತ್ರ, ಅವರ ಕೋರ್ಟು, ಅವರ ಕಚೇರಿ, ಅವರ ಅಚ್ಚುಕಟ್ಟುತನ ಇವೆಲ್ಲವುಗಳೂ ಸಾದಾ ಭೋಳೆ ಹಿಂದೂ ಜನರ ಚಿತ್ತವನ್ನು ಆಕರ್ಷಿಸಿದವು. ಇಂಗ್ಲಿಶರೇ ತಮ್ಮ ಉದ್ಧಾರಕರ್ತರೆಂದು ಜನಗಳು ನಂಬಿದವು. ೧೮೫೭ನೆಯ ಇಸವಿಯ ಗಂಡಾಂತರದಲ್ಲಿ ಇಂಗ್ಲಿಶರು ಇಲ್ಲಿಂದ ಕಾಲು ಕಿತ್ತುವ ಹೊತ್ತು ಬಂದರೂ, ನಮ್ಮ ಜನರು ಅವರನ್ನು ಆಗ್ರಹದಿಂದ ಇಟ್ಟುಕೊಂಡರು!

ಇಷ್ಟು ಮಾನಸಿಕ ದಾಸ್ಯವಿದ್ದಬಳಿಕ ಸ್ವಾತಂತ್ರ್ಯದ ಅಲೆಯಾದರೂ ಹೇಗೆ? ಸಾಮಾನ್ಯ ಜನರು ರಾಜಕರ್ತರ ಮೋಹಿನಿಗೆ ಒೀಗೆ ಬಲೆಬಿದ್ದುದು ನಿಜ ಆದರೆ ಮಾತೃಭೂಮಿಯ ಪುಣ್ಯದಿಂದ ಎಲ್ಲರೂ ಮೋಹವಶರಾಗಲಿಲ್ಲ. ದೇಶದಲ್ಲಿ ಎಲ್ಲಿಯಾದರೂ ಒಂದೊಂದು ಸಂದಿ ಮೂಲೆಯಲ್ಲಿ ಆಶೆಯ ಕಿರಣಗಳು ಮಿನುಗುತ್ತಿದ್ದವು. ಇವುಗಳು ಇದ್ದುದರಿಂದಲೇ ಇಂದಿನ ಗಾಢವಾದ ತಮವು ನಷ್ಟವಾದೀತೆಂಬ ಆಶೆ ಆಲದ ಬೀಜವು ಕಸಕಸಿ ಕಾಳಿನಗಿಂತಲೂ ಸಣ್ಣದಾಗಿದ್ದರೂ ಅದು ಪರ್ವತರವಾಗುವದೆಂಬುದರಲ್ಲಿ ಸಂದೇಹವೇನು?

ಸೂರ್ಯೋದಯದ ಮುಂಚೆ ಸ್ವಲ್ಪ ಕಾಲ ಕಣ್ಣೊಳಗೆ ಬೊಟ್ಟು ಹಾಕಿದರೂ ಕಾಣದಷ್ಟು ಕಗ್ಗತ್ತಲೆಯು ಎಲ್ಲ ಕಡೆಗೆ ವ್ಯಾಪಿಸಿರುತ್ತದೆ. ಅದರಂತೆ ಹಿಂದುಸ್ತಾನದ ಭಾಗ್ಯಸೂರ್ಯನ ಉದಯವಾಗುವ ಮುಂಚೆ ಎಲ್ಲ ಕಡೆಗೂ ಅಂಧಃಕಾರವು ಪಸರಿಸಿತ್ತು.

ಪ್ರಿಟಿಶರು ಮಾಡಿದ ಪ್ರತಿಯೊಂದು ಕಾರ್ಯವು ಕೇವಲ ಲೋಕೋಪಯೋಗಕ್ಕಾಗಿಯೇ ಇರುತ್ತದೆಂದು ಜನರು ತಿಳಿದಿದ್ದರು. ರೇಲ್ವೆಗಳು ಸೈನ್ಯದ ವಾಹನಕ್ಕೂ, ಜನರ ಪ್ರವಾಸಕ್ಕೂ ಕೂಡಿಯೇ ಉಪಯೋಗವಾಗುತ್ತಿದ್ದು, ಜನರು ಅವು ಕೇವಲ ತಮ್ಮ ಹಿತಕ್ಕೆ ಕಟ್ಟಿರುವರೆಂದು ತಿಳಿದರು! ತಮ್ಮ ಕಚೇರಿಕಟ್ಟೆಗಳಲ್ಲಿ ನೌಕರರು ಬೇಕೆಂದು ಶಾಲೆಗಳನ್ನು ಸ್ಥಾಪಿಸಿದ್ದು ಮರೆತು, ಜನರು ಅವು ತಮ್ಮ ಕಲ್ಯಾಣಕ್ಕಾಗಿಯೇ ಇರುತ್ತವೆಂದು ಕಲ್ಪಿಸಿದರು. ರಾವಸಾಹೇಬ ರಾವಬಹಾದ್ದೂರಾದಿ ಪದವಿಗಳನ್ನು, ಅಧಿಕಾರೀ ವರ್ಗಕ್ಕೆ ಜನರು ಸಹಾಯ ಮಾಡಬೇಕು, ಮತ್ತು ಅನುಕೂಲರಾಗಿರಬೇಕೆಂದು ಕೊಡುವರೆಂಬುದನ್ನು ಮರೆತು, ಅವು ಕೇವಲ ತಮ್ಮ ಅಪೌಲ್ಯ ಗುಣಗಳನ್ನು ಕಂಡು ಲುಬ್ಧರಾಗಿ ಅರ್ಪಿಸುವರೆಂದು ಗ್ರಹಿಸಹತ್ತಿದರು. ಸ್ವಲ್ಪದರಲ್ಲಿ ಹೇಳುವದೆಂದರೆ ಇಂಗ್ಲಿಶರು ಹಿಂದುಸ್ಥಾನಕ್ಕೆ ರಾಜ್ಯಮಾಡಿ ತಮ್ಮ ಜನಾಂಗದ ಹಿತ ಸಾಧಿಸಿಕೊಳ್ಳಲಿಕ್ಕೆ ಬಂದಿರುವರೆಂಬುದನ್ನು ಮರೆತು ಅವರು ಇಲ್ಲಿ ಹಿಂದೂ ಜನರ ಹಿತಕ್ಕಾಗಿಯೇ ತಮ್ಮ ಆಯುಷ್ಯ, ಬುದ್ಧಿ, ಧನಗಳನ್ನೆಲ್ಲ ಅರ್ಪಿಸಿ ಮೋಕ್ಷ ಸಂಪಾದಿಸಲಿಕ್ಕೆ ಬಂದಿರುವರೋ ಏನೋ ಎಂಬ ಭಾವನೆ ಮಾಡಿಕೊಂಡರು.

ಹೀಗೆ ಜನರು ವಿಪರೀತ ಬುದ್ಧಿಯುಳ್ಳವರಾಗಿರಲು ಅವರಿಗೆ ಸತ್ಯಜ್ಞಾನವನ್ನು ಮಾಡಿಕೊಡುವದು ಬಲು ಬಿಗಿಯಾಗಿತ್ತು. ಜನರನ್ನು ಜಾಗ್ರತ ಮಾಡಹೋದರೆ ಜನರಂತೂ ಮಬ್ಬಿನಲ್ಲಿರುವದರಿಂದ ಏಳಲಿಕ್ಕೆ ಒಲ್ಲರು; ಅಮಲಿನಲ್ಲಿಯೇ ಇರಲಿಕ್ಕೆ ಇಚ್ಛಿಸುವಂಥವರು. ಜನರು ಜಾಗ್ರತರಾದರೆ ತಮ್ಮ ಅಸ್ತಿತ್ವಕ್ಕೆ ಭಂಗ ಒಂದೀತೆಂಬ ಭೀತಿ ಸರಕಾರಕ್ಕೆ. ಆದುದರಿಂದ ಜನರ ಪೂರ್ಣ ಸಹಾಯವಿಲ್ಲದ ಈ ಜಾಗ್ರತ ಮನುಷ್ಯನು ತನ್ನ ಕಾರ್ಯದಲ್ಲಿ ಸರಕಾರದವರಿಂದ ತಡೆಯಲ್ಪಡುವದು ಸ್ವಾಭಾವಿಕವಿದೆ. ಇಂಥ ಇಕ್ಕಟ್ಟಾದ ಮಾರ್ಗವನ್ನು ಕ್ರಮಿಸುವದು ಬಹಳ ಸಾಹಸದ ಕೆಲಸವಾಗಿದೆ.

ಜನರನ್ನು ಎಚ್ಚರಿಸಲಿಕ್ಕೆ ರಾಮಬಾಣ ಔಷಧವೆಂದರೆ ಅವರ ಮನಸ್ಸು ಜಾಗ್ರತಪಡಿಸುವದು, ತಾನು ಯಾರು? ಮೊದಲು ಏನಿದ್ದೆ? ಈಗ ಇದ್ದ ಸ್ಥಿತಿಯಾವದು? ಇರಬೇಕಾದ ಸ್ಥಿತಿಎಂಥದು! ಎಂಬ ಜ್ಞಾನವು ಜನರಿಗೆ ಆಯಿತೆಂದರೆ ಅರ್ಥಾತ್ ಮಾನಸಿಕ ಗುಲಾಮತನವು ನಷ್ಟವಾಯಿತೆಂದರೆ ಇಷ್ಟಸಾಧ್ಯವಾಗಲಿಕ್ಕೆ ತಡ ಹತ್ತುವದಿಲ್ಲ. ಸ್ವಾತಂತ್ರ್ಯಾರ್ಥವಾಗಿ ಹೆಣಗುವ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರಗಳಿಂದ ಮುಂಚೆ ಅದಕ್ಕೂ ಎಷ್ಟೋಪಾಲು ಮಹತ್ವದ ಜೀವಂತ ಮನಸ್ಸು ಬೇಕು "ನಾನು ಸ್ವತಂತ್ರನಾಗಲಿಕ್ಕೆ ಬೇಕು." ಎಂದು ತ್ರಿಕರಣಪೂರ್ವಕವಾಗಿ ದಿನಾಲು ಅಂತಃಕರಣದಲ್ಲಿ ಜಪಿಸುವಾತನಿಗೆ ಸ್ವಾತಂತ್ರ್ಯವು ಸಿಗದೆ ಎಂದೂ ನಿಲ್ಲಲಿಕ್ಕಿಲ್ಲ. ಅಹಂ ಬ್ರಹ್ಮಾಸ್ಮಿ ಮಂತ್ರದ ಜಪದಿಂದ ದೇವತ್ವವನ್ನು ಹೊಂದುತ್ತಿರಲು ಸ್ವಾತಂತ್ರ್ಯದಂಥ ಸೊಟ್ಟ ಕೆಲಸವು ಸಾಧ್ಯವಾಗಲಿಕ್ಕೆ ಏನು ತಡ? ದೇಶದ ಹೀನ ಸ್ಥಿತಿಯಲ್ಲಿ ಜನರ ಮನಸ್ಸು ನಿರ್ಜೀವವಾಗಿರುತ್ತದೆ. ಅವುಗಳನ್ನು ಸಜೀವ ಮಾಡುವದೇ ರಾಷ್ಟ್ರೋದ್ಧಾರಕನ ಮೊದಲನೇ ಕರ್ತವ್ಯವಿದೆ. ಇದೇ ಕರ್ತವ್ಯವನ್ನು

ಫ್ರಾನ್ಸದಲ್ಲಿ ರೂಸೋ ವ್ಹಾಲ್ಟೇಯರಾದಿಗಳು ಮಾಡಿದರು; ಇದೇ ಕಾರ್ಯವನ್ನು ಟಾಲಸ್ಟಾಯರಾದಿಗಳು ರಶಿಯದಲ್ಲಿ ಮಾಡಿದರು; ಇದೇ ಕಾರ್ಯವನ್ನು ಮ್ಯಾಜಿನಿ ಕಾವ್ಹೂರುಗಳು ಇಟಲಿಯಲ್ಲಿ ಮಾಡಿದರು.

ಇಂಥ ಪವಿತ್ರತಮವಾದ ಹಾಗು ಮಹತ್ವದ ಕಾರ್ಯವನ್ನು ಮಾಡಲಿಕ್ಕೆ ಭರತಖಂಡದ ಒಂದೊಂದು ಭಾಗವೂ ಅನೇಕರಿಗೆ ಅನೇಕ ಸಾರೆ ಜನ್ಮ ಕೊಟ್ಟಿವೆ ಪಂಜಾಬವು ನಾನಕ, ರಣಜಿತಸಿಂಹ, ಲಜಪತರಾಯರುಗಳಿಗೆ, ರಜಪೂತಸ್ಥಾನವು ಪ್ರತಾಪಸಿಂಹನಿಗೆ, ಬಂಗಾಲವು ರಾಜಾ ರಾಮಮೋಹನರಾಯ, ರವೀಂದ್ರನಾಥ, ಬಿಪಿನಚಂದ್ರಪಾಲರಿಗೆ. ಗುಜರ ದೇಶವು ಮಹಾತ್ಮಾ ಗಾಂಧಿ ಮೊದಲಾದವರಿಗೆ, ಮಹಾರಾಷ್ಟ್ರವು ರಾಮದಾಸ ತುಕಾರಾಮ ತಿಲಕರಿಗೆ, ಕರ್ನಾಟಕವು ವಿದ್ಯಾರಣ್ಯಾದಿಗಳಿಗೆ ಜನ್ಮ ಕೊಟ್ಟಿದೆ. ಇತ್ತಲಾಗಿ ಇಂಥ ಅಸಾಧಾರಣ ಚರಿತರಿಗೆ ಜನ್ಮ ಕೊಡುವ ಭಾಗ್ಯವು ವಂಗ ದೇಶಕ್ಕಿದ್ದಷ್ಟು ಬೇರೆ ಯಾವ ಪ್ರಾಂತಗಳಿಗೆ ಇರುವಂತೆ ತೋರುವದಿಲ್ಲ. ನಗಾಧಿರಾಜ ಹಿಮಾಲಯದ ಪಾದಸನ್ನಿಧಿಯಲ್ಲಿದ್ದಂಥ, ಭಗೀರಥನ ದೀರ್ಘತಪಶ್ಚರ್ಯದಿಂದ ಭೂಲೋಕಕ್ಕೆ ಬಂದ ಪವಿತ್ರತಮಳಾದ ಭಾಗೀರಥಿಯ ವರಕೃಪೆಗೆ ಪಾತ್ರವಾದಂಥ, ಬ್ರಹ್ಮಪುತ್ರನ (ನದದ) ಕೃಪಾದೃಷ್ಟಿಯುಳ್ಳಂಥ ಈ ಪವಿತ್ರವಾದ ಭೂಮಿಯಲ್ಲಿ ಅನೇಕ ಮಹಾತ್ಮರು ಹುಟ್ಟಿದುದೂ, ಅವರು ತಮ್ಮ ಕವಿತ್ವ, ವಕ್ತೃತ್ವ, ಚಿತ್ರಕೌಶಲ್ಯ, ಭೌತಿಕಶೋಧ ಮುಂತಾದವುಗಳಿಂದ ಇಡೀ ಜಗತ್ತಿಗೆ ಅಚ್ಚರಿಗೊಳಿಸಿದುದೂ ಆಶ್ಚರ್ಯವಲ್ಲ. ಪರಮಹಂಸ ಶ್ರೀರಾಮಕೃಷ್ಣರ ಆಶೀರ್ವಾದ ಪಡೆದ ಬಂಗಾಲಿಗಳು ಮುಂದೆ ಬರದೆ ಮತ್ತಾರು ಬರಬೇಕು? ಶ್ರೀಮತ್ ವಿದ್ಯಾರಣ್ಯ ಸ್ವಾಮಿಗಳ ವರ ಪಡೆದ ಕರ್ನಾಟಕವೂ, ರಾಮದಾಸ ಸ್ವಾಮಿಗಳ ಪ್ರಸಾದ ಗ್ರಹಣ ಮಾಡಿದ ಮಹಾರಾಷ್ಟ್ರವೂ, ಒಮ್ಮೊಮ್ಮೆ ತಮ್ಮ ಅದ್ಭುತ ಕಾರ್ಯವನ್ನು ಈ ಜಗತ್ತಿನ ರಂಗಭೂಮಿಯ ಮೇಲೆ ಮಾಡಿ ತೋರಿಸಲಿಲ್ಲವೇ?

ಜನರು ರಾಜಕೀಯ ಮಾಯೆಯಲ್ಲಿ ಸಿಕ್ಕಿಕೊಂಡಾಗ ಆ ಮಾಯೆಯಿಂದ ದೂರವಿದ್ದು ಜನರನ್ನೂ ಮಾಯಾಪಾಶದಿಂದ ಬಿಡಿಸಲಿಕ್ಕೆ ಹೆಣಗಿದ ಬಂಗಾಲದ ಶ್ರೇಷ್ಠಪುರುಷರಲ್ಲಿ ಶ್ರೀ ಬಾಬು ಅರವಿಂದ ಘೋಸ ಎಂಬವರು ಅಗ್ರಣಿಗಳಾಗಿದ್ದಾರೆ. ಯಾವ ಮಹಾತ್ಮನು ತನ್ನ ಪವಿತ್ರ ಕಾರ್ಯವನ್ನು ಯಾರ ಸ್ತುತಿ-ನಿಂದೆಗಳಿಗೆ ಅಥವಾ ಬೆದರಿಕೆಗೆ ಸೊಪ್ಪು ಹಾಕದೆ ಮಾಡುತ್ತಿರುವನೋ, ತನ್ನ ಅದ್ಭುತ ಚಾರಿತ್ರ್ಯದಿಂದ ಜಗತ್ತಿನ ಚಿತ್ತವನ್ನು ತನ್ನ ಕಡೆಗೆ ಆಕರ್ಷಿಸಿರುವನೋ, ಅವನ ಅಲ್ಪ ಚರಿತ್ರವನ್ನಾದರೂ ತಿಳಿಯಬೇಕೆಂಬ ಕುತೂಹಲವು ಯಾರಿಗಾಗಲಿಕ್ಕಿಲ್ಲ?

# ೨ ವಂಶವೃತ್ತ.

यादृशं तुप्यते बीज क्षेत्रे कालोपपादिते ।
तादृग्रोहति तास्मिन्बीजं स्वैर्व्यंजितं गुणैः ॥

—मनु

ಮನುಷ್ಯನ ಚಾರಿತ್ರ್ಯದ ಮೇಲೆ ಆನುವಂಶಿಕ ಸಂಸ್ಕಾರಗಳೂ ಸ್ವಲ್ಪ ಹೆಚ್ಚು ಕಡಿಮೆ ಪರಿಣಾಮಗಳನ್ನು ಮಾಡದೆ ಬಿಟ್ಟಿರುವದಿಲ್ಲ. ಆದುದರಿಂದ ಯಾವನೊಬ್ಬ ಮನುಷ್ಯನ ಚಾರಿತ್ರ್ಯದ ವಿಚಾರ ಮಾಡುವಾಗ ಆತನ ಕುಲಗೋತ್ರಗಳನ್ನು ಲಕ್ಷ್ಯದಲ್ಲಿ ತಕ್ಕೊಳ್ಳುವದು ಅವಶ್ಯವಿರುತ್ತದೆ. ಪೂರ್ವಜರಲ್ಲಿ ಪರಂಪರೆಯಿಂದ ಕಂಡುಬಂದ ಗುಣಗಳೇ ಅವರ ಮುಂದಿನ ವಂಶಜರಲ್ಲಿ ಅಂಶತಃ ಕಾಣಲಿಕ್ಕೆ ಸಿಗುತ್ತವೆ. ಅಥವಾ ಅಜ್ಜ-ಮುತ್ತಜ್ಜಂದಿರಲ್ಲಿ ಅಂಕುರ ರೂಪದಲ್ಲಿದ್ದ ಗುಣಗಳೇ ಅವರ ಸಂತತಿಯಲ್ಲಿ ಪೂರ್ಣ ವಿಕಾಸವಾದುವನ್ನೂ ಕಾಣಬಹುದು. ಮಾರ್ಮಿಕ ನಾಟಕಕಾರನು ತನ್ನ ನಾಟಕದ ಸೂಚನೆಯನ್ನು ಆರಂಭದಲ್ಲಿ ಸ್ವಲ್ಪದರೊಳಗೆ ಪ್ರಸ್ತಾವನೆಯಲ್ಲಿ ವ್ಯಂಗ್ಯವಾಗಿ ಸೂಚಿಸುತ್ತಿರುತ್ತಾನೆ. ಜಗತ್ತಿನ ನಾಟಕ ಬರೆಯಲುದ್ಯುಕ್ತನಾದ ಬ್ರಹ್ಮನು, ಮಗನ ನಾಟಕದ ಪೂರ್ವಸೂಚನೆಯನ್ನು ಅವನ ಪೂರ್ವಜರಲ್ಲಿ ಅಂಶತಃ ಮಾಡಿಡುತ್ತಿದ್ದರೆ ಆಶ್ಚರ್ಯವೇನು? ಚರಿತ್ರನಾಯಕರಾದ ಶ್ರೀ ಅರವಿಂದರ ಚರಿತ್ರದ ಸಣ್ಣ ಪ್ರತಿಕೃತಿಯನ್ನು ನೋಡಬೇಕಾಗಿದ್ದರೆ ಇವರ ಅಜ್ಜಂದಿರಾದ (ತಾಯಿಯ ತಂದೆ) ಬಾಬು ರಾಜನಾರಾಯಣ ಬೋಸ ಇವರ ಆಯುಷ್ಯದ ಕಡೆಗೆ ನೋಡಬೇಕು. ಶ್ರೀ ಅರವಿಂದರ ಚರಿತ್ರದಲ್ಲಿ ವಿಲಕ್ಷಣವಾಗಿ ತೋರುವ ಸಂಗತಿಗಳ ಪೂರ್ವಸೂಚನೆಯು— ಉಗಮವು ರಾಜನಾರಾಯಣ ಬಾಬುಗಳ ಚರಿತ್ರದಲ್ಲಿದೆ.

ಶ್ರೀ ರಾಜನಾರಾಯಣ ಬಾಬುಗಳ ಜನ್ಮವು ೧೮೨೬ನೆಯ ಇಸವಿಯಲ್ಲಿ ಆಯಿತು. ಇವರ ಶಿಕ್ಷಣವು ಆರಂಭದಲ್ಲಿ ಹಳೇ ಪದ್ಧತಿಯಿಂದ ಆಯಿತು. ಮನೆಯಲ್ಲಿ ರಾಮಾಯಣ ಮಹಾಭಾರತಾದಿ ಸಂಸ್ಕೃತ ಗ್ರಂಥಗಳು ಮುಖೋದ್ಗತವಾಗಿ ಮಾಡಿಸಲ್ಪಟ್ಟವು. ಸ್ವಲ್ಪ ದೊಡ್ಡವರಾದ ಬಳಿಕ ಇವರಿಗೆ ಒಂದು ಅಂಗ್ಲೋ ವ್ಹರ್ನ್ಯಾಕ್ಯುಲರ ಸ್ಕೂಲಿಗೆ ಹಾಕಿದರು. ಆದರೆ ಅಲ್ಲಿ ಮನಸಿನಂತೆ ಶಿಕ್ಷಣವು ಸಿಗುವದಿಲ್ಲೆಂದು ಮತ್ತೊಂದು ಶಾಲೆಗೆ ಹಾಕಿದರು. ಅಲ್ಲಿ ಅವರ ಮುಂದಿನ ಆಯುಷ್ಯದಲ್ಲಿ ಕಂಡುಬಂದ ಕೆಲವು ಗುಣಗಳಿಗೆ ಚಾಲನೆ ಸಿಕ್ಕಿತು. ಇಲ್ಲಿಯ ಶಿಕ್ಷಣವು ಮುಗಿದನಂತರ ಕಾಲೇಜ ಸೇರಿದರು. ಕಾಲೇಜದಲ್ಲಿ ರಾಜನಾರಾಯಣ ಬಾಬುಗಳು ತಮ್ಮ ಕುಶಾಗ್ರಬುದ್ಧಿಯಿಂದ ಎಲ್ಲರಿಗೆ ಪ್ರಿಯರಾಗಿದ್ದರು. ತಮ್ಮ ಚುರುಕು ಬುದ್ಧಿಯಿಂದ ಎಷ್ಟೋ ಸ್ಕಾಲರಶಿಪ್ಪುಗಳನ್ನು ಸಂಪಾದಿಸಿದರು. ಇವರು ಪರೀಕ್ಷೆಯಲ್ಲಿ ಬರೆದ ಉತ್ತರದ ಕಾಗದಗಳು ಬಹು ಸರಸಾಗಿದ್ದುದರಿಂದ ಅವುಗಳನ್ನು ಪರೀಕ್ಷಕರು ಮಾದರಿಗಾಗಿ ವೃತ್ತಪತ್ರಗಳಲ್ಲಿ ಪ್ರಕಟಿಸಿದರು. ಇವರ ಸಹಪಾಠಿಗಳೂ ಇವರಂತೆಯೇ

ಬುದ್ಧಿವಂತರಿದ್ದರು; ಮುಂದಿನ ಆಯುಷ್ಯದಲ್ಲಿ ಹೆಸರಾದ ಅನೇಕ ದೊಡ್ಡ ದೊಡ್ಡ ಜನರು ಇವರ ಸಂಗಡಿಗರಿದ್ದರು.

ರಾಜನಾರಾಯಣ ಬಾಬುಗಳ ಕಾಲವೆಂದರೆ ಬ್ರಿಟಿಶರ ಆಳಿಕೆಯ ಆರಂಭದ ಅವಧಿಯು. ಹಿಂದೆ ಹೇಳಿದಂತೆ ಜನರಲ್ಲಿ ಬ್ರಿಟಿಶ ಸರಕಾರದ ವಿಷಯಕ್ಕೆ ಆಗ ಅತ್ಯಂತ ಆದರವಿತ್ತು. ಮುಸಲ್ಮಾನರ ಗೈರವುತ್ಸದ್ದಿತನದ ಆಳಿಕೆಗೆ ಜನರು ಬೇಸತ್ತಿದ್ದರು. ಗೈರಮುತ್ಸದ್ದಿ ಮುಸಲ್ಮಾನರಿಗೆ, ಜನರಿಗೆ ತಿಳಿಯದಲೇ ಅವರ ರಕ್ತಶೋಷಣವನ್ನು ಹೇಗೆ ಮಾಡಬೇಕೆಂಬ ಕಲೆಯು ಜ್ಞಾನವಿದ್ದಿಲ್ಲ ಅವರ ಪ್ರತಿಯೊಂದು ರಾಜಕಾರಣದ ಕೃತ್ಯಕ್ಕೂ ಬಣ್ಣದ ಮಾತಿನ ಮುಲಾಮು (Guilt) ಇರುತ್ತಿದ್ದಿಲ್ಲ ದುಡ್ಡು ಬೇಕಾದ ಕೂಡಲೆ ಬಹಿರಂಗವಾಗಿ ಜನರ ಕಣ್ಣಿಗೆ ಅಸಹ್ಯಕಾಣುವಂತೆ ಸುಲಿಯುತ್ತಿದರು ಇದರಿಂದ ಜನರಿಗೆ ಬಹಳ ತಾಪವಾಗಿತ್ತು. ಆದಕಾರಣ ಮುಸಲ್ಮಾನರ ಆಳಿಕೆಗೆ ಬೇಸತ್ತ ಜನರು ಬ್ರಿಟಿಶರನ್ನು ಆದರಿಸಿದರು. ಬ್ರಿಟಿಶರ ಬಣ್ಣದ ಮಾತುಗಳಿಗೆ ಮರುಳಾದರು. ಮನಸ್ಸು ಗುಲಾಮವಾಯಿತು. ಇಂಗ್ಲಿಶ ಮನುಷ್ಯನು ದೇವರಂತೆ ಕಾಣಹತ್ತಿದನು. ಆತನ ಎಲ್ಲ ಕೃತಿಗಳೂ ಸುಂದರವಾಗಿ ಕಾಣಹತ್ತಿದವು ಮತ್ತು ಅವುಗಳನ್ನು ಅನುಕರಿಸುವದರಲ್ಲಿ ಕೃತಕೃತ್ಯತೆಯನ್ನು ಪಡೆಯಹತ್ತಿದರು.

ಇಂಥ ಕಾಲದಲ್ಲಿ ರಾಜನಾರಾಯಣ ಬಾಬುಗಳ ಜನ್ಮವಾದದ್ದು. ಅಂದಬಳಿಕ ಪರಿಸ್ಥಿತಿಯ ಪರಿಣಾಮವು ಅವರ ಮೇಲಾದರೂ ಆಗದೆ ಹೇಗೆ ಇದ್ದೀತು? ಆರ್ಯಸಂಸ್ಕೃತಿಯು ತ್ಯಾಗ ಪ್ರಧಾನವಾದದ್ದು. ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯು ಭೋಗಪ್ರಧಾನವಾದದ್ದು. ಸಾಮಾನ್ಯವಾಗಿ ಮನುಷ್ಯನ ಒಲವು ಭೋಗದ ಕಡೆಗೆ ಇರುತ್ತದೆ. ಆತ್ಯಂತಿಕ ಕಲ್ಯಾಣಕರವಾವುದೆಂಬದನ್ನು ತಿಳಿಯುವಷ್ಟು ದೂರದೃಷ್ಟಿಯು ಸಾಮಾನ್ಯ ಜನರಿಗೆಲ್ಲಿಂದ ಬಂದೀತು? ಇಂಗ್ಲಿಶ ಶಿಕ್ಷಣದಿಂದ, ಇಂಗ್ಲಿಶರ ಸಂಸರ್ಗದಿಂದ, ಇಂಗ್ಲಿಶ ವಸ್ತುಗಳ ಬಳಿಕೆಯಿಂದ ಜನರಲ್ಲಿ ಪಾಶ್ಚಿಮಾತ್ಯರ ಆಚಾರ ವಿಚಾರಗಳು ಸೇರಹತ್ತಿದವು. ಕಾಲೇಜದಲ್ಲಿರುವಾಗ ರಾಜನಾರಾಯಣರಿಗೆ ತತ್ಕಾಲೀನ ಇತರರಂತೆ ಮದ್ಯ ಮಾಂಸಾದಿಗಳ ಸೇವನೆ ಮಾಡುವದೇ ಭೂಷಣವೆನಿಸಹತ್ತಿತು ಮದ್ಯಪಾನದ ಅತಿರೇಕದಿಂದ ಒಮ್ಮೆ ರಾಜಾನಾರಾಯಣರು ಬೇನೆಬಿದ್ದರು. ಆಗ ತಂದೆಯು ಮಗನ ಶುಶ್ರೂಷೆಯನ್ನು ಚನ್ನಾಗಿ ಮಾಡಿ, ಬಹುಪರಿಯಿಂದ ಉಪದೇಶಿಸಿದನು ಆದರೆ ತತ್ಕಾಲಕ್ಕೆ ಅದರ ಉಪಯೋಗವೇನೂ ಆಗಲಿಲ್ಲ. ಧರ್ಮದ ಮೇಲಿನ ವಿಶ್ವಾಸವು ಜನರೊಳಗಿಂದ ಹಾರಿತು ಧರ್ಮಾಧಿಕಾರಿಗಳ ಧಾರ್ಮಿಕ ನಿಯಂತ್ರಣದ ಅಧಿಕಾರವು ಅಳಿಯಿತು ಸುತ್ತೂಕಡೆಯಿಂದ ಆರ್ಯಧರ್ಮದ ಮೇಲೆ ಟೀಕೆಗಳಿಗೆ ಆರಂಭವಾಯಿತು. ಆಚಾರ ಧರ್ಮದಲ್ಲಿ ಪರಿಸ್ಥಿತಿಯಂತೆ ಸ್ವಲ್ಪ ಬದಲಾವಣೆಯಾಗುವದು ಅವಶ್ಯವಿರುತ್ತದೆ. ಆದರೆ ಹೊಸ ಸಂಸ್ಕರಣಗಳನ್ನು ಹೊಂದದೇ ಇದ್ದ ಧಾರ್ಮಿಕ ವಿಕೃತ ಆಚಾರಗಳು ಆಂಗ್ಲವಿದ್ಯಾವಿಭೂಷಿತರ ಚೇಷ್ಟೆಯ ವಿಷಯಗಳಾದವು. ಮಡಿ, ಮಡಿ ಮಾಡುವವರು ನಗೆಗೇಡಾದರು, ಚಂಡಿಕೆಯು ಚೇಷ್ಟೆ ಮಾಡಿಸಿಕೊಂಡಿತು. ಪ್ರತಿಯೊಬ್ಬರು ಧರ್ಮದ ಉಪಹಾಸಮಾಡಹತ್ತಿದರು.

ಈ ಕಾಲಕ್ಕೆ ಧಾರ್ಮಿಕ ಆಚಾರ ವಿಚಾರಗಳಿಗೆ ನೂತನ ಸ್ವರೂಪಗೊಡುವದಕ್ಕೆ ಕೆಲವರು ಪ್ರಯತ್ನಿಸಿದರು. ಆರ್ಯಸಮಾಜ, ಬ್ರಹ್ಮೋಸಮಾಜ ಮತ್ತು ಪ್ರಾರ್ಥನಾ ಸಮಾಜಗಳು ಈ ಮಾತಿಗೆ ಸಾಕ್ಷಿಯಾಗಿವೆ. ಬಂಗಾಲದಲ್ಲಿ ರಾಜಾರಾಮ ಮೋಹನರಾಯ ಎಂಬವರು ಬ್ರಹ್ಮೋಸಮಾಜವನ್ನು ಸ್ಥಾಪಿಸಿ, ತಮ್ಮ ಪಂಥದ ಪ್ರಚಾರಮಾಡಿದರು. ಪಾಶ್ಚಿಮಾತ್ಯ ಶಿಕ್ಷಣ ಹೊಂದಿದ ಸುಶಿಕ್ಷಿತರು ಈ ಪಂಥದಲ್ಲಿ ಬಹಳವಾಗಿ ಸೇರಿದರು. ಮತಾಂತರನಾಡಿ ಕ್ರಿಸ್ತಿಯನರಾಗುವದಕ್ಕಿಂತ ಬ್ರಹ್ಮೋಪಂಥವನ್ನು ಸ್ವೀಕರಿಸುವದು ಲೇಸೆಂದು ಬಗೆದು ಕೆಲವರು ಇದರಲ್ಲಿ ಸೇರಿದರು. ರಾಜಾನಾರಾಯಣ ಬಾಬುಗಳ ತಂದೆಯು ಮೊದಲು ಈ ಪಂಥಕ್ಕೆ ಸೇರಿದ್ದನು. ಆದರೆ ಇಲ್ಲಿ ಆತನಿಗೆ ಸಮಾಧಾನವಾಗಲಿಲ್ಲ. ಅಂತ್ಯ ಕಾಲಕ್ಕೆ ಗಂಗಾತಟಾಕಕ್ಕೆ ಹೋಗಿ ಅಲ್ಲಿ ಸನ್ಯಾಸದೀಕ್ಷೆಯನ್ನು ತಕ್ಕೊಂಡು ಮೃತ್ಯುವನ್ನು ಆವರಿಸಿದನು'

ರಾಜನಾರಾಯಣ ಬಾಬುಗಳಿಗೆ ಪಾಶ್ಚಿಮಾತ್ಯ ಆಚಾರ ವಿಚಾರಗಳನ್ನು ಅನುಕರಿಸಿ ಸುಖವೆನಿಸಲಿಲ್ಲ. ಮದ್ಯಪಾನಾದಿ ವ್ಯಸನಗಳಿಂದ ಶರೀರದ ಮೇಲೆ ಅನಿಷ್ಟ ಪರಿಣಾಮವಾಯಿತು. ಕರ್ಮಧರ್ಮ ಸಂಯೋಗದಿಂದ ಇದೇ ಸುಮಾರಿಗೆ ಅಂದರೆ ೧೮೫೫-೫೬ರಲ್ಲಿ ಅವರ ಪ್ರೇಮದ ತಂದೆಯು ತೀರಿದನು ಪ್ರೀತಿಯ ಸಹಚಾರಣಿಯು ವಿಯೋಗವಾಯಿತು. ಇವರಿಂದ ಮನಸ್ಸಿನ ಮೇಲೆ ಬಹು ದೊಡ್ಡ ಆಘಾತವಾಯಿತು.

ಬಾಹ್ಯ ಸುಖೋಪಭೋಗಗಳಿಂದ ತೃಪ್ತಿಹೊಂದಿ, ಶಾಂತಿಪಡೆಯಬೇಕೆಂದು ಮಾಡಿದ ಶ್ರೀ ರಾಜನಾರಾಯಣ ಬಾಬುಗಳ ಮನಸ್ಸು ಚಂಚಲವಾಯಿತು ಆಗ ಅವರು ಆತ್ಮಿಕ ಶಾಂತಿಯು ಹೇಗೆ ದೊರೆದೀತೆಂಬ ವಿಚಾರಕ್ಕೆ ಬಿದ್ದರು. ಬ್ರಹ್ಮೋಸಮಾಜದ ಪೂಜ್ಯ ದೇವೇಂದ್ರನಾಥ ಟಾಗೋರರ ಪರಿಚಯವಾಗಿ ರಾಜ ನಾರಾಯಣರು ಅವರ ಪಂಥದಲ್ಲಿ ಸೇರಿದರು. ಈ ಸಮಯಕ್ಕೆ ಕಾಕತಾಲ ನ್ಯಾಯದಿಂದ ರಾಜನಾರಾಯಣರಿಗೆ ಉಪನಿಷತ್ತುಗಳ ಪರಿಶೀಲನ ಮಾಡುವ ಸುಯೋಗವು ಬಂತು. ಬಂಗಾಲದ ತತ್ವಬೋಧಿನಿ ಸಭೆಯವರು ಶ್ರೀ ರಾಜನಾರಾಯಣ ಬಾಬುಗಳ ಸಂಸ್ಕೃತ ಹಾಗೂ ಇಂಗ್ಲಿಷ ಭಾಷಾಪ್ರಭುತ್ವವನ್ನು ಕಂಡು, ತಿಂಗಳೊಂದಕ್ಕೆ ೬೦ ರೂ ಗಳ ಮೇಲೆ ಉಪನಿಷದ್ಗ್ರಂಥಗಳ ಭಾಷಾಂತರ ಮಾಡಲಿಕ್ಕೆ ನಿಯಮಿಸಿದರು. ಸಹಜವಾಗಿಯೇ ವೇದಾಂತ ಗ್ರಂಥಗಳವಾಚನ ಮನನವಾಗಹತ್ತಿತು. ಇತ್ತ ಬ್ರಹ್ಮೋಪಂಥದ ಸಂಘಟ್ಟನೆಯಿಂದ ಅದರ ಸ್ವರೂಪಜ್ಞಾನವೂ ಅವರಿಗೆ ಆಯಿತು. ಬ್ರಹ್ಮೋಪಂಥಿಗಳು ಧಡ ಕ್ರಿಸ್ತಿಯನರಲ್ಲ; ಧಡ ವೈದಿಕ ಧರ್ಮಿಗಳಲ್ಲ. ಅವರ ಅನುಯಾಯಿಗಳ ಆಚಾರ ವಿಚಾರಗಳಲ್ಲಿ ತಾಳಮೇಳವಿದ್ದಿಲ್ಲ. ಬ್ರಹ್ಮೋಪಂಥದ ಅನುಯಾಯಿಗಳು ಹೀಗಿದ್ದರೆಂದಮಾತ್ರಕ್ಕೆ ಆ ಪಂಥದ ಸಂಸ್ಥಾಪಕರೂ ಹಾಗೇ ಶೀಲಭ್ರಷ್ಟರಿದ್ದರೆಂದು ಯಾರಾದರೂ ಕಲ್ಪಿಸಿದರೆ ಅದು ತಪ್ಪು. ರಾಜಾರಾಮ ಮೋಹನರಾಯ, ದೇವೇಂದ್ರನಾಥ ಠಾಕೂರರಂಥವರಿಗೆ ಕಲಂಕಹಚ್ಚುವದೆಂದರೆ ಅದು ಪಾಪವಾದೀತು. ಯಾಕೆಂದರೆ ಯಾವದೇ ಧರ್ಮದ ಅಥವಾ ಮತದ ಇಲ್ಲವೇ ಪಂಥದ ಸಂಸ್ಥಾ

ಪಕರು ಶೀಲವಂತರೇ ಇರುತ್ತಾರೆ. ಇರಲಿ. ರಾಜ ನಾರಾಯಣ ಬಾಬುಗಳಿಗೆ ಬ್ರಹ್ಮೋ ಪಂಥದವರ ನಡವಳಿಕೆಗಳು ಸೇರದಕಾರಣ ಸ್ವಲ್ಪ ಕಾಲದಲ್ಲಿಯೇ ಅವರು ಆ ಪಂಥವನ್ನು ಬಿಟ್ಟು, ವೈದಿಕ ಧರ್ಮಾನುಯಾಯಿಗಳಾದರು! ಶಾಂತಿಯನ್ನು ದೊರಕಿಸಲಿಕ್ಕೆ ಹಲುಬುವ ರಾಜ ನಾರಾಯಣರಿಗೆ ಧರ್ಮಾಂತರ, ಮತಾಂತರಗಳನ್ನು ಮಾಡಿ ಕಡೆಗೆ ವೇದಾಂತಧರ್ಮ ದಲ್ಲಿ ಅದು ಸಿಕ್ಕಿತು. ಬಳಿಕ ಉಪನಿಷತ್ತುಗಳ ನಿಧಿಧ್ಯಾಸ ಮಾಡಹತ್ತಿದರು

ಇಂಗ್ಲಿಶರ ಸಂಸರ್ಗದಿಂದ ದೇಶದಲ್ಲಿ ಪರಸ್ಪರ ವಿರೋಧಿಗಳಾದ ಎರಡು ವಿಚಾರ ಪ್ರವಾಹಗಳು ಹುಟ್ಟಿದವು. "ಹಳೇದೆಲ್ಲ ಹೊಲಸು" ಎಂಬ ಮತದ ಜೋರು ವಿಶೇಷ ವಿತ್ತು. ಅದರ ಸೆಳವಿಗೆ ಅನೇಕ ತರುಣರು ಸಿಕ್ಕು, ಗಾಸಿಯೇ ಸಿಯಾದರೂ ಶ್ರೀ ರಾಜನಾರಾ ಯಣ ಬಾಬುಗಳು ಈ ಪ್ರವಾಹದಲ್ಲಿ ಸಿಕ್ಕು, ಒದ್ದಾಡಿ, ಗುಟಕರಿಸಿ, ಬಾಯ್ಬಿಟ್ಟು ಕಡೆಗೆ ದಂಡೆಗೆ ಹತ್ತಿದರು. ದಂಡೆಗೆ ಬರುವ ಭಾಗ್ಯವು ಬಹು ಸ್ವಲ್ಪ ಜನರಿಗಿರುತ್ತದೆ. ಒಮ್ಮೆ ಪಾಶ್ಚಿಮಾತ್ಯರ ಸೆಳವಿಗೆ ಸಿಕ್ಕನಂತರ ಸ್ಮೃತಿಯು ಮೇಲೆ ಬರುವದು ಬಲು ದುಸ್ತ ರವು. ರಾಜ ನಾರಾಯಣ ಬಾಬುಗಳು ವೇದಾಂತಜ್ಞಾನದಿಂದ ತೃಪ್ತಿಹೊಂದಿದ ಬಳಿಕ ಅದರ ಪ್ರಸಾರಕ್ಕಾಗಿ ಟೊಂಕಕಟ್ಟಿದರು. ಇವರಿಗೆ ಇಂಗ್ಲಿಶ, ಸಂಸ್ಕೃತ, ಹಾಗೂ ಪರ್ಶಿಯನ್ ಭಾಷೆಗಳು ಚನ್ನಾಗಿ ಬರುತ್ತಿದ್ದುದರಿಂದ ಹಿಂದಕ್ಕೆ ವೈದಿಕ ಧರ್ಮದ ನಿಂದೆಗೆ ಒಳ್ಳೇ ಅನುಕೂಲವಾಗಿತ್ತು. ಪಾಪ, ಬುದ್ಧಿಯೇನು ಮಾಡೀತು! ಅದೊಂದು ಶಸ್ತ್ರದಂತಿದೆ. ಕಳ್ಳನ ಮೇಲೆ ಹಾಕಿದರೆ ಅವನನ್ನು ತುಂಡರಿಸುತ್ತದೆ; ಸಜ್ಜನನ ಮೇಲೆ ಹಾಕಿದರೆ ಆತ ನನ್ನೂ ಛೇದಿಸುತ್ತದೆ. ರಾಜ ನಾರಾಯಣರ ಯಾವ ಬುದ್ಧಿಯು ಮುಂಚೆ ವೈದಿಕಧರ್ಮದ ನಗೆಗೇಡು ಮಾಡುವದರಲ್ಲಿ ವ್ಯರ್ಥವಾಗಿ ವ್ಯಯವಾಗುತ್ತಿತ್ತೋ, ಅದು ಈಗ ಅದರ ಮಂಡನೆ ಮಾಡುವದರಲ್ಲಿ ಸಾರ್ಥಕವಾಗಹತ್ತಿತು. ರಾಜ ನಾರಾಯಣರು ತಮ್ಮ ಸ್ವಾನುಭವ ಪೂರ್ಣ ಹಾಗೂ ವಿದ್ವತ್ತೆಯಿಂದ ತುಂಬಿತುಳುಕುವ ಅಧಿಕಾರಯುಕ್ತ ರಸಾಲವಾಣಿಯಿಂದ ಜನಗಳಿಗೆ ವೇದಾಂತ ಧರ್ಮದ ಉಪದೇಶ ಮಾಡಹತ್ತಿದರು. ಮತಮತಾಂತರಗಳ ಗೊಂದ ಲದಲ್ಲಿ ಸಿಕ್ಕು ತೊಳಲಾಡುವವರಿಗೆ, ಧರ್ಮಾಂತರ ಮಾಡಿ ಆತ್ಮನಾಶ ಮಾಡಿಕೊಳ್ಳುವವರಿಗೆ ಸತ್ಯಜ್ಞಾನವನ್ನು ಉಪದೇಶಿಸಿ ಅವರ ಆತ್ಯಂತಿಕ ಕಲ್ಯಾಣ ಮಾಡಹತ್ತಿದರು ಇವರು ಬಂಗಾ ಲಿಯಲ್ಲಿ ಬರೆದ ಗ್ರಂಥಗಳನ್ನು ಜನರು ಈಗಲೂ ಭಕ್ತಿಯಿಂದ ಪಠಿಸುತ್ತಾರೆ. ಜನರಲ್ಲಿ ಸ್ವದೇ ಶಾಭಿಮಾನವುಂಟಾಗಬೇಕು, ಮದ್ಯಪಾನಾದಿ ವ್ಯಸನಗಳು ಅವರಲ್ಲಿ ಸೇರಬಾರದು, ಶಾರೀರಿಕ ಅವನತಿಯು ಅವರಲ್ಲಿ ಮನೆಮಾಡಬಾರದೆಂಬದಾಗಿ ಹಲವು ವಿಧದಿಂದ ಪ್ರಯತ್ನ ಮಾಡಿ ದರು. ಇವರಿಗೆ ಬಂಗಾಲಿ ರಾಷ್ಟ್ರಧರ್ಮದ ಆದಿಪುರುಷರೆಂದು ಅನ್ನುತ್ತಾರೆ. ಇಂಥ ವಿಲಕ್ಷಣ ಚಾರಿತ್ರ್ಯದ ಪುರುಷನ ಮಗಳು ಶ್ರೀ ಅರವಿಂದ ಘೋಸರ ತಾಯಿಯು. ಇವಳು ತನ್ನ ತಂದೆಯಿಂದ ದೊರಕಿಸಿದ ಠೇವನ್ನು ಮಗನಿಗೆ ಒಪ್ಪಿಸಿ ಬಿಟ್ಟಳು.

ಇದು ತಾಯಿಯ ಕಡೆಯ ಐತಿಹ್ಯವಾಯಿತು ಇನ್ನು ತಂದೆಯಾದ ಕೃಷಧನ ಬಾಬುಗಳ ವಿಷಯಕ ಸ್ವಲ್ಪ ಮಾಹಿತಿಯನ್ನು ಹೇಳುವದು ಯುಕ್ತವಾಗಿದೆ. ಇವರ

ಸ್ವಭಾವ ಪರಿಚಯವನ್ನು ಸ್ವಲ್ಪದರಲ್ಲಿ ಮಾಡಿಕೊಡಬೇಕಾದರೆ ಹೀಗೆ ಹೇಳಬಹುದು: ಶ್ರೀ ರಾಜ ನಾರಾಯಣ ಬೋಸರು ಆರ್ಯಸಂಸ್ಕೃತಿಯ ಎಷ್ಟು ಅಭಿಮಾನಿಗಳಾಗಿದ್ದರೋ ಅಷ್ಟೇ ಕೃಷ್ಣಧನ ಘೋಸರು ಪಾಶ್ಚಿಮಾತ್ಯ ಸಂಸ್ಕೃತಿಯ ಅಭಿಮಾನಿಗಳಾಗಿದ್ದರು. ಶ್ರೀ ಕೃಷ್ಣಧನರು ಆಂಗ್ಲವೈದ್ಯಕದ ಹೆಚ್ಚಿನ ಅಭ್ಯಾಸಕ್ಕಾಗಿ ವಿಲಾಯತಿಗೆ ಹೋದಾಗ ಕೃಷ್ಣ ಧನರ ಮಾವಂದಿರು ಅವರಿಗೆ ಹಿಂದೂ ಧರ್ಮವನ್ನೂ, ಹಿಂದೀ ಆಚಾರ ವಿಚಾರಗಳನ್ನೂ ತ್ಯಜಿಸಬಾರದೆಂದು ಬಹು ಪರಿಯಾಗಿ ಬರೆಯುತ್ತಿದ್ದರು. ಆದರೆ ಫಲಿತಾಂಶವೇನೂ ದೊರೆಯಲಿಲ್ಲ ಮಾವಂದಿರ ಆಗ್ರಹಕ್ಕೆ ವಿಪರೀತವಾಗಿ ಆಂಗ್ಲ ಆಚಾರ ವಿಚಾರಗಳ ವಿಷಯಕ್ಕೆ ಆಗ್ರಹವು ಮಾತ್ರ ಕೃಷ್ಣಧನರಲ್ಲಿ ಹೆಚ್ಚಾಯಿತು. ಹಿಂದುಸ್ಥಾನದ ಸುಧಾರಣೆಗೆ ಪಾಶ್ಚಿಮಾತ್ಯ ಆಚಾರ ವಿಚಾರಗಳನ್ನು ಅನುಕರಿಸುವದೊಂದೇ ಮಾರ್ಗವೆಂದು ಅವರು ತಿಳಿದಿದ್ದರು. ಶ್ರೀ ಕೃಷ್ಣಧನರು ಉದಾರರೂ, ಕೋಮಲಾಂತಃಕರಣಿಗಳೂ ಆಗಿದ್ದರು. ಬಡಬಗ್ಗರಿಗೆ ಪುಕ್ಕಟೆಯಾಗಿ ಔಷಧಗಳನ್ನು ಕೊಡುತ್ತಿದ್ದರು. ಆಪ್ತ ಇಷ್ಟರಿಗೆ ಉದಾರ ಹಸ್ತದಿಂದ ಆರ್ಥಿಕ ಸಹಾಯವನ್ನು ಮಾಡುತ್ತಿದ್ದರು.

ವಾಚಕರು ಇಲ್ಲಿ ಲಕ್ಷಿಸುವದೊಂದು ಮಹತ್ವದ ಮಾತಿದೆ. ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಸಂಸ್ಕೃತಿಗಳ ರಣಸಂಗ್ರಾಮದಲ್ಲಿ ಯಾವದು ವಿಜಯಿಯಾಗುತ್ತದೆಂಬ ದನ್ನು ತಿಳಿಯುವ ಲವಲವಿಕೆಯು ಬಹು ಮುಂದಿಗಿರಬಹುದು. ಅದನ್ನು ತಿಳಕೊಳ್ಳಲಿಕ್ಕ ತಲೆಯನ್ನು ಬಹಳವಾಗಿ ತುರಿಸಬೇಕಾಗಿಲ್ಲ. ನಮ್ಮ ಚರಿತ್ರನಾಯಕರ ಕಡೆಗೆ ದೃಷ್ಟಿಕ್ಷೇಪ ಮಾಡಿದರೆ ಆ ಮಾತು ತಾನೇ ಒಡೆದು ತೋರುವಂತಿದೆ. ಬೋಸ ಹಾಗೂ ಘೋಸ ಮನೆತನಗಳ ಸಂಯೋಗವೆಂದರೆ ಪೂರ್ವ ಹಾಗೂ ಪಶ್ಚಿಮಗಳ ಸಂಯೋಗವೆಂದೇ ಹೇಳ ಬಹುದು. ಇವೆರಡೂ ಸಂಸ್ಕೃತಿಗಳ ಸಂಯೋಗದಿಂದಾದ ಶ್ರೀ ಅರವಿಂದರ ಜನ್ಮವು (ಅವರ ಚರಿತ್ರೆಯು) ಆರ್ಯಸಂಸ್ಕೃತಿಯ ವಿಜಯವನ್ನೇ ಸೂಚಿಸುತ್ತದೆಂದು ಧಾರಾ ಳವಾಗಿ ಹೇಳಬಹುದು.

ಪರಸ್ಪರ ವಿರೋಧಿಗಳಾದ ಒಲವಿನ ( Nature ) ಆದರೆ ಪ್ರೇಮಪಾಶಬದ್ಧರಾದ ದಂಪತಿಗಳು ಸುಖದಿಂದ ಸಂಸಾರವನ್ನು ನಡಿಸಿರಲು ಯಥಾಕಾಲದಲ್ಲಿ ನಾಲ್ಕು ಗಂಡೂ, ಒಂದು ಹೆಣ್ಣೂ ಹೀಗೆ ಐದು ಮಕ್ಕಳಾದವು. ಇವರಲ್ಲಿ ಹಿರಿಯನಾದ ವಿನಯ ಕುಮಾರ ಘೋಸ ಎಂಬಾತನು ಕುಚಬಿಹಾರ ಸಂಸ್ಥಾನದ ದಿವಾಣನಾಗಿದ್ದಾನೆ. ಎರಡನೆಯವನು ಮನಮೋಹನ ಘೋಸ ಎಂಬಾತನು ಈತನು ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜದಲ್ಲಿ ಇಂಗ್ಲಿಶ ವಾಙ್ಮಯದ ಪ್ರೊಫೆಸರನಾಗಿದ್ದಾನೆ; ಹಾಗೂ ಉತ್ತಮ ಕವಿಯೆಂದು ಹೆಸರಾಗಿ ದ್ದಾನೆ. ಮೂರನೆಯವರೇ ನಮ್ಮ ಚರಿತ್ರನಾಯಕರಾದ **ಶ್ರೀ ಬಾಬು ಅರವಿಂದ ಘೋಷರು.** ಇವರ ಜನ್ಮವು ಕ್ರಿಸ್ತಾಬ್ದದ ೧೮೭೨ನೆಯ ವರುಷದ ಅಗಸ್ಟ ೧೫ನೆಯ ತಾರೀಖಿಗೆ ಆಯಿತು. ನಾಲ್ಕನೆಯ ಶಿಶುವು ಹೆಣ್ಣು ಆಯಿತು ಇವಳ ಹೆಸರು ಸರೋ

ಜೆನಿ ಎಂದಿದೆ. ಇವಳು ಸುಶಿಕ್ಷಿತಳಿರುತ್ತಾಳೆ; ತಮ್ಮನಾದ ಬರೀಂದ್ರಕುಮಾರನ ಕಡೆಗೆ ಕಲಕತ್ತೆಯಲ್ಲಿರುತ್ತಾಳೆ. ಬರೀಂದ್ರನು ಎಲ್ಲಕ್ಕೂ ಚಿಕ್ಕವನು. ಇವನಿಗೆ ೧೯೦೮ರ ಮಾಣಿಕತೋಳಾ ಬಾಂಬಿನ ಪ್ರಕರಣದಲ್ಲಿ ಕರೇನೀರಿನ ಶಿಕ್ಷೆಯಾಗಿತ್ತು. ಮೊನ್ನಿನ ೧೯೧೯ರ ಬಾದಶಾಹೀ ಜಾಹೀರನಾಮೆಯಂತೆ ಬಿಟ್ಟು ಬಂದಿದ್ದಾನೆ. ಇವನು "ನಾರಾಯಣ" ವೆಂಬ ಬಂಗಾಲೀ ಮಾಸಪತ್ರಿಕೆಯ ಉಪಸಂಪಾದಕನಿದ್ದು, ಒಂದೆರಡು ಪುಸ್ತಕಗಳನ್ನು ಬರೆದಿದ್ದಾನೆ ಅಲ್ಲದೆ ಆಗಾಗ್ಗೆ ಬೇರೆಬೇರೆ ಕಡೆಗೆ ಲೇಖಗಳನ್ನೂ ಬರೆಯುತ್ತಿರುತ್ತಾನೆ. ಹೀಗೆ ಅರವಿಂದರ ಅಣ್ಣತಮ್ಮಂದಿರೆಲ್ಲರೂ ಒಂದಿಲ್ಲೊಂದು ರೀತಿಯಿಂದ ವಿಖ್ಯಾತರಿರುತ್ತಾರೆ. ಸಿಂಹದ ಹೊಟ್ಟೆಯಲ್ಲಿ ಹುಟ್ಟುವದು ಸಿಂಹವಲ್ಲವೇ ?

---

## ೩. ಅಧ್ಯಯನ.

शैशवेऽभ्यस्तविद्यानाम्
यौवने विषयैषिणाम् ।
वार्धके मुनिवृत्तीनाम्
योगेनांते तनुत्यजाम् ॥

—कालिदासः

ಹುಡುಗರೆಂದರೆ ಕೈಯೊಳಗೆ ಸಿಕ್ಕ ಅರಲಿನ ಮುದ್ದೆಯೆಂದೂ, ಅದಕ್ಕೆ ತಮ್ಮ ಇಷ್ಟ ಬಂದ ಆಕಾರ ಕೊಡಲು ಬಹುದೆಂದೂ ಸಾಧಾರಣವಾಗಿ ತಾಯಿತಂದೆಗಳು ತಿಳಿಯುವದುಂಟು. ಹುಡುಗನಿಗೆ ಆತ್ಮವಿಲ್ಲ, ಒಲವುಗಳಿಲ್ಲ, ವಿಶಿಷ್ಟ ಪ್ರವೃತ್ತಿಗಳಿಲ್ಲವೆಂದು ಗ್ರಹಿಸಿ ಅನೇಕ ತಾಯಿತಂದೆಗಳು ತಮ್ಮ ಮಕ್ಕಳಿಗೆ ತಮ್ಮ ಇಚ್ಛೆಯಂತೆ ರೂಪಗೊಡಲಿಕ್ಕೆ ಪ್ರಯತ್ನಿಸುತ್ತಾರೆ. ಆದರಿಂದ ಎಷ್ಟೋ ದುಷ್ಪರಿಣಾಮಗಳಾಗಿವೆ, ಮನೆತನಗಳು ಹಾಳಾಗಿವೆ, ದೇಶಗಳು ಹೀನಸ್ಥಿತಿಗೆ ಬಂದಿವೆ. ವಕೀಲ ತಂದೆಯು ಮಗನ ಒಲವು ಚಿತ್ರಕಲೆಯ ಕಡೆಗಿದ್ದರೂ, ಆತನಿಗೆ ಆ ಕಾಯಿದೆ ಬುಕ್ಕುಗಳ ಕಸವನ್ನು ತಲೆಯಲ್ಲಿ ತುಂಬಿಕೊಳ್ಳಲಿಕ್ಕೆ ಬಲಾತ್ಕಾರ ಮಾಡುವನು! ಸರಕಾರೀ ಸೇವೆಯಲ್ಲಿ ಮುಪ್ಪಾದ ವೃದ್ಧ ಪಿತನು ತನ್ನಂತೆಯೇ, ತನ್ನ ಚಿರಂಜೀವನೂ ಸಾಹೇಬರ ಪಕ್ಕಾ ಮರ್ಜಿಯೊಳಗಿನವನಾಗಲೆಂದು ಹಾರೈಸಿ, ಮಗನ ಪ್ರವೃತ್ತಿಯು ಕಾವ್ಯಶಾಸ್ತ್ರಾದಿಗಳ ಕಡೆಗಿದ್ದರೂ ಅವನನ್ನು ನೌಕರಿಯಲ್ಲಿ ತುರಕಲು ಹೆಣಗುತ್ತಾನೆ! ಹೀಗೆ ತಂದೆ ಮಕ್ಕಳ ಪ್ರವೃತ್ತಿಗಳು ಭಿನ್ನವಾದಲ್ಲಿ ಅವೆರಡರ ನಡುವೆ ತಿಕ್ಕಾಟಕ್ಕೆ ಆರಂಭವಾಗುವದು. ಬಲವಾದ ಪಕ್ಷಕ್ಕೆ ಜಯವು ಕಟ್ಟಿಟ್ಟದ್ದು. ತಂದೆತಾಯಿಗಳ ಬಲುಮೆಗೆ ಕೈಕೊಂಡ ಅಭ್ಯಾಸ ಕ್ರಮದಲ್ಲಿ ಅವರ ಅಧಿಕಾರವಿರುವವರೆಗೆ ಹೇಗೋ ಸ್ವಲ್ಪ ಮನಸ್ಸು ಹತ್ತುವದು. ಅನೇಕರು ಆಗಾಗ್ಗೆ ನಾಪಾಸಾಗುವದಕ್ಕೂ, ಕೈಕೊಂಡ ಅಭ್ಯಾಸಕ್ರಮದ ವಿಷಯಕ್ಕೆ ಬೇಸರಿಯುವದಕ್ಕೂ, ಅದರಲ್ಲಿ ಊರ್ಜಿತರಾಗದಿರಲಿಕ್ಕೂ ಇದೇ ಕಾರಣವಿರುತ್ತದೆ. ಪರರ ಒತ್ತಾಯದಿಂದ ಕೈಕೊಂಡ ಉದ್ಯೋಗದಲ್ಲಿ, ಆ ಒತ್ತಾಯವು ಕಡಿಮೆಯಾದೊಡನೆ ಶೈಥಿಲ್ಯವುಂಟಾಗುವದು, ಮತ್ತು ಅಂತಃಕರಣದಲ್ಲಿ ದಬ್ಬಿಕೊಂಡಿದ್ದ ಪ್ರವೃತ್ತಿಯು ತಲೆ ಎತ್ತುವದು. ಹಾಗೂ ಅದು ತಾನು ವಿಜಯಿಯಾಗಲಿಕ್ಕೆ ಹವಣಿಸುವದು.

ಶ್ರೀ ಕೃಷ್ಣಧನ ಘೋಷರಿಗೆ ಇಂಗ್ಲಿಷ ಪದ್ಧತಿಯ ಮೇಲೆ ಬಲು ಪ್ರೀತಿ. ಅವರಿಗೆ ತಮ್ಮ ಮಗನು ಚೊಕ್ಕ ಇಂಗ್ಲಿಷ ಮನುಷ್ಯನಾಗಬೇಕೆಂಬ ಇಚ್ಛೆಯಿರುವದು ಸಹಜವದೆ. ಮಗನ ಒಲವು, ಪ್ರವೃತ್ತಿ, ಸ್ವಭಾವ ಧರ್ಮಗಳೇನು ಬೇಕಾದವುಗಳಿರಲೊಲ್ಲ

ವೇಕೆ ಅವುಗಳ ಗೊಡವೆ ತಮಗೇನು? ಎಂದು ಅವುಗಳನ್ನು ದುರ್ಲಕ್ಷಿಸಿ ತಮ್ಮ ಇಚ್ಛೆಯಂತೆ ಮಗನ ಶಿಕ್ಷಣಕ್ಕೆ ಆರಂಭಿಸಿದರು. ಮಾತೃಭಾಷೆಯ ಅಭ್ಯಾಸವನ್ನು ಮುಂಚೆ ಮಾಡಿ ಬಳಿಕ ತದ್ದ್ವಾರವಾಗಿ ಇಂಗ್ಲಿಶ ಕಲಿಸುವ ದ್ರಾವಿಡೀ ಪ್ರಾಣಾಯಾಮವೇತಕ್ಕೆ ಎಂದು ಮೊದಲಿಗೆ ಇಂಗ್ಲಿಶವನ್ನೇ ಕಲಿಸಹತ್ತಿದರು ೫ನೆಯ ವರುಷ ಅಭ್ಯಾಸಕ್ಕೆ ಆರಂಭವಾಯಿತು. ದಾರ್ಜಲಿಂಗದ ಸೆಂಟಪಾಲ ಸ್ಕೂಲಿನಲ್ಲಿ ಹೆಸರು ಹಚ್ಚಿತು. ಅಲ್ಲಿ ಅರವಿಂದನು ತನ್ನ ವಿಲಕ್ಷಣವಾದ ಸ್ಮರಣ ಶಕ್ತಿಯಿಂದ ಎಲ್ಲರನ್ನು ದಂಗುಬಡಿಸಿದನು ಉಪಾಧ್ಯಾಯರು ಇವನ ಮೇಲೆ ಬಲು ಪ್ರೇಮ ಮಾಡುತ್ತಿದ್ದರು. ಮುದ್ದು ಅರವಿಂದನ ಮುಖಾರವಿಂದವು ಸಂಗಡಿಗರಿಗೆಲ್ಲ ಬಲು ಪ್ರಿಯಕರವಾಗಿತ್ತು. ಹಿಂದುಸ್ತಾನದಲ್ಲಿಯೇ ಹೆಚ್ಚು ದಿನ ಶಿಕ್ಷಣದ ಸಲುವಾಗಿ ಇಟ್ಟರೆ ಮಗನು ಪೂರ್ಣ ಇಂಗ್ಲಿಶ ಮನುಷ್ಯನಾಗಲಿಕ್ಕಿಲ್ಲವೆಂಬ ಸಂಶಯದಿಂದಲೋ ಏನೋ ಎಂಬುವಂತೆ ಏಳು ವರುಷದ ಕಂದಮ್ಮನನ್ನು ಕೃಷ್ಣಧನರು ಇಂಗ್ಲಂಡಕ್ಕೆ ಒಬ್ಬ ಮಿತ್ರನೆಡೆಗೆ ಕಳಿಸಿದರು.

ಇಂಗ್ಲಂಡದಲ್ಲಿ ಒಬ್ಬ ಮಿಶನರಿ (ಕ್ರಿಸ್ತೀಭಟ್ಟಸ) ಬಳಿಯಲ್ಲಿ ಅರವಿಂದನೂ ಆತನ ತಮ್ಮನೂ ಕೂಡಿ ಇರಹತ್ತಿದರು. ಮಿಶನರಿಯು ಈ ಕೋಮಲ ಮನಸ್ಸಿನ ಮುದ್ದು ಮಕ್ಕಳ ಅಂತಃಕರಣದಲ್ಲಿ ಕ್ರಿಸ್ತೀ ಧರ್ಮದ ವಿಷಯಕ್ಕೆ ಪ್ರವೃತ್ತಿಯನ್ನುಂಟು ಮಾಡಬೇಕೆಂದು ಅವರಿಗೆ ನಾನಾವಿಧದಿಂದ ಉಪದೇಶಿಸಿದನು. ಈ ಉಪದೇಶದಿಂದ ಅರವಿಂದರಲ್ಲಿ ಕ್ರಿಸ್ತೀ ಧರ್ಮಕ್ಕೆ ಸೇರಬೇಕೆಂಬ ಆಕಾಂಕ್ಷೆಯು ಉತ್ಪನ್ನವಾಗದಿದ್ದರೂ, ಬಾಹ್ಯ ಆಡಂಬರದ ವಿಷಯಕ್ಕೆ ಅವರ ಮನಸ್ಸು ಹೇಸಿತು. ಭೋಗವೃತ್ತಿಯ ಕಡೆಗೆ ತಾತ್ಸಾರ ಮಾಡಲಿಕ್ಕೆ ಈ ಉಪದೇಶವು ಸಹಾಯ ಮಾಡಿತು ಇಂಗ್ಲಂಡದಂಥ ವಿಲಾಸೀ ದೇಶದಲ್ಲಿದ್ದು ಅರವಿಂದರ ಒಲವು ತ್ಯಾಗದ ಕಡೆಗೆ ಇರಲಿಕ್ಕೆ ಈ ಮಿಶನರಿಯೇ ಕಾರಣನೆಂದು ಹೇಳಬಹುದು ಈತನ ವಿಷಯಕ್ಕೆ ಅರವಿಂದರಲ್ಲಿ ಪೂಜ್ಯಬುದ್ಧಿ ಇರುತ್ತದೆ. ಮ್ಯಾಂಚಸ್ಟರದಲ್ಲಿ ಕೊಂಚಕಾಲ ಖಾಸಗೀ ಅಭ್ಯಾಸ ಮಾಡಿದರು. ಬಳಿಕ ಲಂಡನದ ಸೆಂಟಪಾಲ ಸ್ಕೂಲಿಗೆ ಹೆಸರು ಹಚ್ಚಿದರು ಈ ಸಾಲೆಯ ಮುಖ್ಯಾಧ್ಯಾಪಕರು ಒಮ್ಮೆ ತಮ್ಮ ವಿದ್ಯಾರ್ಥಿಯಾದ ಅರವಿಂದನ ವಿಷಯಕ್ಕೆ ಅಂದುದೇನಂದರೆ: ನಾನು ಈಗ ಕೆಲಸಮಾಡಹತ್ತಿ ೨೫–೩೦ ವರುಷಗಳಾದವು. ಈ ಅವಧಿಯೊಳಗೆ ಈತನಷ್ಟು ವಿಲಕ್ಷಣ ಬುದ್ಧಿ ಚಾತುರ್ಯವುಳ್ಳ ವಿದ್ಯಾರ್ಥಿಯನ್ನು ನಾನು ಕಾಣಲಿಲ್ಲ. ಈ ಶಾಲೆಯೊಳಗಿನ ಅಭ್ಯಾಸವು ಮುಗಿದ ನಂತರ ಶ್ರೀ ಅರವಿಂದರು ಕೆಂಬ್ರಿಜ್‌ದ ಕಾಲೇಜದಲ್ಲಿ ಹೆಚ್ಚಿನ ಅಭ್ಯಾಸಕ್ಕಾಗಿ ಸೇರಿದರು

ಅಲ್ಲಿ ಶ್ರೀ ಅರವಿಂದರು ತಂದೆಯ ಸಂಕೇತದಂತೆ I. C. S. ಪರೀಕ್ಷೆಯ ತಯಾರಿಯನ್ನು ನಡೆಸಿದರು ಈ ಪರೀಕ್ಷೆಗೆ ಹಿಂದುಸ್ತಾನದ ಯಾವದೊಂದು ಭಾಷೆಯ ಜ್ಞಾನವು ಅವಶ್ಯಕವಿದ್ದುದರಿಂದ ಇತರ ಇಂಗ್ಲಿಶ ವಿದ್ಯಾರ್ಥಿಗಳಂತೆ ಅರವಿಂದರು ಬಂಗಾಲಿಯನ್ನು

ಕಲಿಯಲಿಕ್ಕೆ ಆರಂಭಿಸಿದರು! ಅರವಿಂದರಿಗೆ ಅಭ್ಯಾಸದ ಹುಚ್ಚು ಬಹಳ. ಕೋಣೆಯಲ್ಲಿ ಏಕಾಕಿಯಾಗಿ ಕುಳಿತು ಅಭ್ಯಾಸದ ಪುಸ್ತಕಗಳನ್ನು ಕಂಠಪಾಠಮಾಡುವದು ಇವರ ಶೋಭಿಯಾಗಿತ್ತು. ಶರೀರದ ಕಡೆಗೆ ದುರ್ಲಕ್ಷ ಬಹಳ. ಅದರಲ್ಲಿ ತಂದೆಯ ಉದಾರ ತನದ ಮೂಲಕ ಆತನಿಗೆ ಮಕ್ಕಳ ಅಭ್ಯಾಸಕ್ಕಾಗಿ ಹೊತ್ತು ಹೊತ್ತಿಗೆ ಹಣ ಕಳಿಸುವ ದಕ್ಕೂ ಆಗುತ್ತಿದ್ದಿಲ್ಲ! ಇದರಿಂದ ಆಗಾಗ್ಗೆ ಉಪವಾಸದ ಪ್ರಸಂಗಗಳು ಬರುತ್ತಿದ್ದವು. ಇಂಗ್ಲಂಡ ದೇಶ, ದುಡ್ಡಿದ್ದವನು ದೊಡ್ಡಪ್ಪನು. ಚಿಕ್ಕ ವಯಸ್ಸಿನ ಅರವಿಂದನ ಸ್ಥಿತಿಯು ಎಷ್ಟು ಕಷ್ಟಕರವಾಗಿತ್ತೆಂಬದನ್ನು ಹೇಳುವದೇ ಕಷ್ಟ. ಪರದೇಶ, ಆಪ್ತರಿಲ್ಲ, ಇಷ್ಟರಿಲ್ಲ, ದುಡ್ಡಿನ ಸಂಬಂಧದಿಂದಾದರೂ ಜನರ ಸಹಾಯ ಸಿಕ್ಕೀತೆನ್ನಬೇಕೇ, ಹಾಗೆ ಸಹ ಇಲ್ಲ. ಅಂಥ ಮೇಲೆ ಈ ಚಿಕ್ಕಮಕ್ಕಳ ಜೋಗಳಿಗೆ ಪಾರಾವಾರವೇ ಉಳಿಯಲಿಲ್ಲ. ಅರವಿಂದರಲ್ಲಿ ಒಂದು ತರದ ವಿಕ್ಷಿಪ್ತತನವು ಆರಂಭದಿಂದಲೇ ಇರುವದಂತೆ. ಪುಸ್ತಕದ ಕಡೆಗೆ ಎಷ್ಟೊತ್ತಿನ ವರೆಗೆ ನೋಡುತ್ತ ಕುಳಿತರೂ ಅದರಲ್ಲಿ ಏನು ಮಾಡುವೆನೆಂಬದರ ಕಡೆಗೆ ಲಕ್ಷವಿರುವಂತಿಲ್ಲ, ಗಡಿಯಾಲ ನೋಡುತ್ತ ನಿಂತರೂ ಎಷ್ಟು ಗಂಟೆಯಾಯಿತೆಂಬದನ್ನೇ ತಿಳಿಯಲಿಕ್ಕೆ ಮರೆಯುವದು, ಇವರ ವಿಚಿತ್ರ ಪದ್ಧತಿಯಾಗಿತ್ತು. ಇದರಲ್ಲಿ ಉಪವಾಸ ಬೀಳುವ ಪ್ರಸಂಗಗಳಿಂದ ಶರೀರ ಮತ್ತು ಮನಸ್ಸಿನ ಮೇಲೆ ಆದ ಪರಿಣಾಮಗಳ ಭರತಿ ಬಿದ್ದಿತು.

೧೮೯೦ ರಲ್ಲಿ ಆದ I. C. S. ಪರೀಕ್ಷೆಗೆ ಶ್ರೀ ಅರವಿಂದರು ಕುಳಿತರು. ವಯಸ್ಸಿನ ೧೮ನೆಯ ವರುಷ ಈ ಪರೀಕ್ಷೆಗೆ ಕುಳಿತ ಹಿಂದೀ ವಿದ್ಯಾರ್ಥಿಗಳು ಸಿಕ್ಕುವರೋ ಇಲ್ಲವೋ ಸಂಶಯವೇ ಇದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಪರೀಕ್ಷೆಗೆ ಕುಳಿತರೂ ಪ್ರತಿಯೊಂದು ವಿಷಯದಲ್ಲಿ ಇವರಿಗೆ ಉತ್ತಮ ಗುಣಗಳು ಸಿಕ್ಕವು. ಅದರೊಳಗೂ ಇತಿಹಾಸ ಮತ್ತು ಗ್ರೀಕ ಭಾಷೆಗಳ ಮೇಲೆ ಇವರ ಪ್ರಭುತ್ವವು ಹೆಚ್ಚಿಗಿತ್ತು. ಗ್ರೀಕ ಭಾಷಾ ವಿಷಯದಲ್ಲಿ ಇವರು ಮೊದಲನೆಯ ನಂಬರು ಪಡೆದಿದ್ದು, ಬೀಚಕ್ರಾಫ್ಟ ಎಂಬವರು ಎರಡನೆಯವರಾಗಿದ್ದರು. ಈ ಬೀಚಕ್ರಾಫ್ಟರೇ ಮುಂದೆ ನ್ಯಾಯಾಧೀಶರಾಗಿದ್ದಾಗ ಶ್ರೀ ಅರವಿಂದರಿಗೆ ದೇಶಸೇವೆ ಮಾಡಿದ ಘೋರ ಅಪರಾಧಕ್ಕಾಗಿ ಆರೋಪಿಯ ಪಂಜರದಲ್ಲಿ ಶೃಂಖಲಾಬದ್ಧಹಸ್ತರಾಗಿ ನಿಲ್ಲುವ ವೇಳೆ ಬಂತು! ಕಲ್ಪನಾ ಚತುರ ನಾಟಕಕಾರನಿಗೂ ಕಲ್ಪನೆಯಾಗದಂಥ ಅದ್ಭುತ ರಮ್ಯದೃಶ್ಯಗಳನ್ನು ಜಗಚ್ಚಾಲಕನು ಭೂಲೋಕದ ರಂಗಭೂಮಿಯ ಮೇಲೆ ತೋರಿಸುತ್ತಿರುತ್ತಾನೆ.

I. C. S. ಪರೀಕ್ಷೆಯ ಎಲ್ಲ ಪ್ರಶ್ನೆ ಪತ್ರಿಕೆಗಳು ಮುಗಿದವು. ಅರವಿಂದರು ಎಲ್ಲವುಗಳಿಗೂ ಉತ್ತರಗಳನ್ನು ಬರೆದರು. ಈ ಪರೀಕ್ಷೆಯನ್ನು ಪಾಸಾಗಲಿಕ್ಕೆ ಅಶ್ವಾರೋಹಣ ಕಲೆಯ ಜ್ಞಾನವೂ ಅವಶ್ಯವಿದೆ. ಶ್ರೀ ಅರವಿಂದರು ಈ ಪರೀಕ್ಷೆಯಲ್ಲಿ ಪಾಸಾಗಲಿಲ್ಲವೆಂದು ಕೆಲವರೂ, ತಮ್ಮ ವಿಕ್ಷಿಪ್ತ ಸ್ವಭಾವದಂತೆ ಪರೀಕ್ಷೆಗೆ ಕೂಡ್ರಲಿಲ್ಲವೆಂದು ಕೆಲವರೂ

ಅಭಿಪ್ರಾಯಬಡುತ್ತಾರೆ. ಒಂದು ವೇಳೆ ಪರೀಕ್ಷೆಗೆ ಕುಳಿತು ನಾಪಾಸಾಗಿದ್ದರೂ ಅರವಿಂದರ ಕೀರ್ತಿಗೆ ಎಳ್ಳಷ್ಟೂ ಧಕ್ಕೆ ಬರುವಂತಿಲ್ಲ. ಶಾರೀರಿಕ ಹಾಗು ಮಾನಸಿಕ ಅಸ್ವಾಸ್ಥ್ಯದ ಮೂಲಕ ಅವರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ; ಎಂಬದೇ ಬಹು ಜನರ ಮತವಿದೆ.

I. C S. ಪರೀಕ್ಷೆ ನಾಪಾಸಾದುದು ಒಳಿತಾಯಿತೋ, ಕೆಡಕಾಯಿತೋ? ಅರವಿಂದರ ಭೌತಿಕ ಐಶ್ವರ್ಯದಲ್ಲಿ ಪಾಲುಗಾರರಾಗಿ ಮೋಜು ಮಾಡಲಿಚ್ಛಿಸಿ, ಹೊಂಚು ಹಾಕಿ ಕುಳಿತ ಕೆಲವು ಆಪ್ತ-ಇಷ್ಟರಿಗೆ ನಾಪಾಸಾದುದು ದುಃಖಕರವೆನಿಸಿದರೂ, ಭಾರತೀಯರ ದೃಷ್ಟಿಯಿಂದ ಅದು ಒಳಿತೇ ಆಯಿತೆಂದು ಹೇಳಬಹುದು. I. C S. ಪರೀಕ್ಷೆಯಾದ ಬಳಿಕ ಸ್ವಲ್ಪ ಕಾಲ ವಿಶ್ರಾಂತಿ ತಕ್ಕೊಂಡು ಮತ್ತೆ ಹೆಚ್ಚಿಗೆ ಅಭ್ಯಾಸ ಮಾಡಲಿಕ್ಕೆ ಕಿಂಗ್ಸ ಕಾಲೇಜದಲ್ಲಿ ಸೇರಿದರು. ತಂದೆಯು ದಿವಂಗತನಾದುದರಿಂದ ಆರ್ಥಿಕ ಸಹಾಯದ ಆಶೆಯು ತೀರ ಕಟ್ಟಾಯಿತು. ಆದರೂ ಎದೆಗುಂದದೆ ಸ್ವಂತದ ಕಾಲಮೇಲೆ ನಿಂತು ಅಭ್ಯಾಸ ಮಾಡುವದನ್ನು ನಿಶ್ಚಯಿಸಿದರು. ತಮ್ಮ ಬುದ್ಧಿ ಸಾಮರ್ಥ್ಯದಿಂದ ಕೆಲವು ವಿದ್ಯಾರ್ಥಿವೇತನಗಳನ್ನು (Schoolarships) ದೊರಕಿಸಿದರು. ೧೮೯೨ ರಲ್ಲಿ ಕೆಂಬ್ರಿಜ ವಿದ್ಯಾಪೀಠದ ಕಡೆಯ ಪರೀಕ್ಷೆಗೆ ಕುಳಿತು ಅದರಲ್ಲಿ ಮೊದಲನೆಯ ತರಗತಿಯಲ್ಲಿ ಪಾಸಾದರು.

# ೪. ಪೂರ್ವಾಶ್ರಮ.

द्वितीयं आयुषो भागं कृतदारो गृहे वसेत्

—मनु.

ಶ್ರೀ ಅರವಿಂದರು ಕೆಂಬ್ರಿಜದ ಕಿಂಗ್ಸ ಕಾಲೇಜದಲ್ಲಿ ಕಲಿಯುತ್ತಿದ್ದಾಗ ಬಡೋದೆಯ ಪ್ರಜಾನುರಂಜಕ ಮಹಾರಾಜರಾದ ಶ್ರೀಸಯಾಜಿರಾವ ಗಾಯಕವಾಡ ಇವರ ಪರಿಚಯವಾಯಿತು. ಶ್ರೀ ಸಯಾಜಿರಾಯರು ಒಳ್ಳೇ ಮನುಷ್ಯಪರೀಕ್ಷಕರೆಂದು ಹೆಸರಾಗಿದ್ದಾರೆ. ಉತ್ತಮೋತ್ತಮ ನರರತ್ನಗಳನ್ನು ಆರಿಸಿ, ಅವುಗಳನ್ನು ತಮ್ಮ ರಾಜ್ಯದಲ್ಲಿ ಉಪಯೋಗಿಸಿಕೊಂಡು ಪ್ರಜಾಸೌಖ್ಯವನ್ನು ವೃದ್ಧಿಂಗತ ಮಾಡುವದರಲ್ಲಿ ಇವರು ತತ್ಪರರಾಗಿರುತ್ತಾರೆ. ಇವರೊಡನೆ ಇಂಗ್ಲಂಡದಲ್ಲಾದ ಅರವಿಂದರ ಪರಿಚಯವು ಸ್ನೇಹದಲ್ಲಿ ಪರಿಣಮಿಸಿತು. ಶ್ರೀಸಯಾಜಿರಾವ ಗಾಯಕವಾಡರು ಅರವಿಂದ ಬಾಬುಗಳ ಗುಣಗಳಿಗೆ ಲುಬ್ಧರಾಗಿ ತಮ್ಮ ರಾಜ್ಯದಲ್ಲಿ ಕೆಲಸಮಾಡಬೇಕೆಂದು ಇಚ್ಛೆಯನ್ನು ಪ್ರಕಟಿಸಿದರು [illegible] ನಾವಾನಾವರೂ ಅದರಷ್ಟೇ ಮಾನ್ಯತೆಯುಳ್ಳ ಅಧಿಕಾರವು ಅರವಿಂದರಿಗೆ ಸಿಗುವ ಪ್ರಸಂಗವು ಬಂತು. ಅರವಿಂದರಾದರೂ ಮಹಾರಾಜರ ಇಚ್ಛೆಗೆ ಮಾನಕೊಟ್ಟು, ಅವರ ಖಾಸಗೀ ಕಾರಭಾರಿಯಾಗಲೊಪ್ಪಿದರು.

ಬಡೋದೆಯಲ್ಲಿ ಶ್ರೀ ಅರವಿಂದರು ೧೩ ವರುಷಗಳವರೆಗೆ ಭಿನ್ನ ಭಿನ್ನ ಪದಗಳ ಮೇಲೆ ಬಹಳ ಸರಸವಾಗಿ ಕೆಲಸಮಾಡಿದರು. ಎಲ್ಲಕ್ಕೂ ಮುಂಚೆ ಖಾಸಗೀ ಕಾರಭಾರಿಗಳಿದ್ದರು; ಬಳಿಕ ಕೆಲ ದಿನ ಮಹಾರಾಜರ ದಿವಾಣೀ ಆಫೀಸಿನಲ್ಲಿ ಕೆಲಸಮಾಡಿದರು, ನಂತರ ಕೆಲವು ಕಾಲದ ವರೆಗೆ ಬಡೋದೆಯ ಸ್ಟೇಟ ಕಾಲೇಜದಲ್ಲಿ ಪ್ರೊಫೇಸರರಾಗಿದ್ದರು. ಇಲ್ಲಿಂದ ಮಹಾರಾಜರ ಪ್ರಾಯವ್ಹೇಟ ಸೆಕ್ರೆಟರಿಗಳಾಗಿ ಸ್ವಲ್ಪಕಾಲ ಇದ್ದರು. ಕಟ್ಟಕಡೆಗೆ ಆರಂಭದಲ್ಲಿ ಪ್ರೊಫೇಸರರಾಗಿದ್ದ ವಿದ್ಯಾಲಯದಲ್ಲಿಯೇ ವ್ಹಾಯಿಸ ಪ್ರಿನ್ಸಿಪಾಲರಾದರು. "ಮನುಷ್ಯನ ಪರೀಕ್ಷೆ ಮಾಡುವದಿದ್ದರೆ ಆತನಿಗೆ ಅಧಿಕಾರಕೊಟ್ಟು ನೋಡು" ಎಂದು ಹಿರಿಯರು ಹೇಳುವದುಂಟು. ಕ್ಷುಲ್ಲಕರಿಗೆ ಅಧಿಕಾರ ಸಿಕ್ಕುತ್ತಲೆ, ಅವರು ಹೆಮ್ಮೆಯಿಂದ ಮೆರೆಯುವದುಂಟು. ಸಜ್ಜನರ ವೃತ್ತಿಯು ಇದಕ್ಕೆ ತೀರ ವಿಪರೀತವಿರುತ್ತದೆ. ಅರವಿಂದರು ಯಾವ ಅಧಿಕಾರದ ಮೇಲೆ ಕೆಲಸಮಾಡಿದರೂ ಎಲ್ಲರಿಗೆ ಬೇಕಾಗಿದ್ದರು. ವಿದ್ಯಾಲಯದಲ್ಲಿ ಅಧ್ಯಾಪಕರಿದ್ದಾಗ ವಿದ್ಯಾರ್ಥಿಗಳ ಪಂಚಪ್ರಾಣರಾಗಿದ್ದರು. ಶ್ರೀ ಅರವಿಂದರ ವಿಷಯಕ್ಕೆ ಶಿಷ್ಯವರ್ಗದಲ್ಲಿ ಎಷ್ಟು ಪೂಜ್ಯಬುದ್ಧಿಯಿತ್ತೆಂಬುದು ವ್ಯಕ್ತವಾಗುವ ಪ್ರಸಂಗವು ಮುಂದೆ ಒಮ್ಮೆ ಬಂತು; ೧೯೦೭ರಲ್ಲಿ ಅರವಿಂದರ ಮೇಲೆ ಆದ ಮೊದಲನೆಯ ಖಟ್ಲೆಯ ಕಾಲಕ್ಕೆ ಬಡೋದೆಯ ವಿದ್ಯಾಲಯದ ವಿದ್ಯಾರ್ಥಿಗಳು ಅಧಿಕಾರಿಗಳ ಬೆದರಿಕೆಗೆ ಭಯಪಡದೆ ಸಭೆಗೂಡಿಸಿ, ತಮ್ಮ ಗುರುಗಳ ವಿಷಯಕ್ಕೆ ಪೂರ್ಣ

ಸಹಾನುಭೂತಿಯನ್ನು ವ್ಯಕ್ತಪಡಿಸಿದರು! ಬಡೋದೆಯ ಸಂಸ್ಥಾನದ ಪ್ರಜೆಗಳು ತಮಗೆ ಇಂಥ ಅಧಿಕಾರಿಯು ದೊರೆತ ಬಗ್ಗೆ ಅಭಿಮಾನ ಪಡುತ್ತಿದ್ದರು. ಇನ್ನು ಮಹಾರಾಜರ ವಿಷಯಕ್ಕೆ ಕೇಳಿದರೆ, ಅವರು ಅಲ್ಪಾವಧಿಯೊಳಗೇ ಶ್ರೀ ಅರವಿಂದರನ್ನು ದಿವಾಣರನ್ನಾಗಿ ಮಾಡತಕ್ಕವರಿದ್ದರಂತೆ! ಸಂಸ್ಥಾನಗಳಲ್ಲಿಕೆಲಸಮಾಡುವದು ಬಿಗಿಯಾದದ್ದು. ಯಾಕಂದರೆ ಅಧಿಪತಿಗಳ ಮನಸ್ಸಿನ ಲಹರಿಗಳಿಗನುಸರಿಸಿ ಕೈಕೆಳಗಿನವರ ಯೋಗ್ಯತೆಯು ನಿರಿಳಿತಗಳಾಗುತ್ತಿವೆ. ಆದುದರಿಂದ ಸಂಸ್ಥಾನದಲ್ಲಿ ಕೆಲಸ ಮಾಡುವ ಅನೇಕರಿಗೆ ತಮ್ಮ ಪ್ರತಿಷ್ಠೆಯನ್ನು ಬೆಳಸಿಕೊಳ್ಳಲಿಕ್ಕೆ ಲಾಂಗೂಲಚಾಲನಾದಿ ವಾಮಮಾರ್ಗಗಳ ಅವಲಂಬನ ಮಾಡಬೇಕಾಗುವದು ಇಲ್ಲವೆ ತಮ್ಮ ಮರ್ಯಾದೆಗೆ ಭಂಗ ಬರುವ ಲಕ್ಷಣಗಳು ಕಂಡೊಡನೆ ಆ ಅಧಿಕಾರಕ್ಕೆ ಒದ್ದು ಹೊರಬೀಳಬೇಕಾಗುತ್ತದೆ. ಶ್ರೀ ಅರವಿಂದರು ಸರಲ ಮಾರ್ಗದಿಂದ ಕೆಲಸ ಮಾಡಿ, ತಮ್ಮ ಕಾರ್ಯಕುಶಲತೆಯಿಂದ ರಾಜಪ್ರಜೆಗಳಿಬ್ಬರಿಗೂ ಬೇಕಾಗಿದ್ದರು.

ಶ್ರೀ ಅರವಿಂದರು ಬಡೋದೆಗೆ ಬಂದು ೩-೪ ವರುಷಗಳಾಗಿದ್ದವು. ೨೪ನೆಯ ವರುಷದ ವಯಸ್ಸು, ನೂತನ ತಾರುಣ್ಯ, ದೊಡ್ಡ ಸಂಬಳ; ಅಂದಮೇಲೆ ಸೃಷ್ಟಿಕ್ರಮದಂತೆ ವಿವಾಹದ ಉತ್ಸುಕತೆಯುಂಟಾಗುವದು ಸ್ವಾಭಾವಿಕವಿದೆ. ಶ್ರೀ ಅರವಿಂದರಂಥ ಲಕುಮಿ ಸರಸತಿಯರ ವರಕೃಪೆಗೆ ಪಾತ್ರರಾದ ವರಗಳಿಗೆ ಕನ್ಯಾದಾನ ಮಾಡಲಿಕ್ಕೆ ಒಲ್ಲದ ಕನ್ಯಾಪಿತನಾದರೂ ಆರು? ಶ್ರೀ ಅರವಿಂದರ ಅರ್ಧಾಂಗಿಯಾಗುವ ಭಾಗ್ಯವಿದ್ದ ವಂಗಕನ್ಯೆಯ ಪೂರ್ವ ಸುಕೃತವು ದೊಡ್ಡದೇ ಸರಿ. ಬಂಗಾಲದ ಅಗ್ರಿಕಲ್ಚರಲ್ ಖಾತೆಯ ವರಿಷ್ಠ ಅಧಿಕಾರಿಯ ಕನ್ಯೆಯಾದ ಮೃಣಾಲಿನಿ ಎಂಬವಳು ವಧುವೆಂದು ನಿಶ್ಚಿತವಾಯಿತು. ಮೃಣಾಲಿನಿಯ ವಯಸ್ಸು ೧೫ ವರುಷಗಳದಿತ್ತು. ಇವಳಿಗೆ ಚನ್ನಾಗಿ ಓದು ಬರೆಯಲು ಬರುತ್ತಿತ್ತು. ಮಾವನೂ ಶ್ರೀಮಂತನು. ವಿವಾಹವು ಯಥಾಸಾಂಗವಾಗಿ ವಿಜೃಂಭಣೆಯಿಂದ ಜರಗಿತು.

ವಯಸ್ಸಿನ ಏಳನೆಯ ವರುಷದಿಂದ ಅರವಿಂದರು ಇಂಗ್ಲಂಡದಲ್ಲಿದ್ದವರು; ಹಿಂದೂ ಆಚಾರ ವಿಚಾರಗಳ ಸಂಪರ್ಕವಾಗಿ ಅವು ನೆಲಗೊಳ್ಳುವ ಮುಂಚಿತವಾಗಿಯೇ ಇಂಗ್ಲಂಡದ ವಾಸಾಗಿದ್ದುದು ಅದರಿಂದ ಇಂಗ್ಲಿಷ ಪದ್ಧತಿಯು ನಿತ್ಯದ ವ್ಯವಹಾರಗಳೇ ಅರವಿಂದರ ಪ್ರಿಯವಾಗಿದ್ದವು. ಧೋತರವನ್ನುಡಲಿಕ್ಕೆ ನಾಚಿಕೆ, ಬರಿಗಾಲಿನಿಂದ ನಡೆಯಲಿಕ್ಕೆ ಹೇಸಿಕೆ, ಹೀಗೆ ಅವರು ಹಿಂದುಸ್ಥಾನದ ಆಚಾರವಿಚಾರಗಳಿಂದ ದೂರವಾಗಿದ್ದರು. ಬಂಗಾಲಿಯ ಜ್ಞಾನವು ಎಷ್ಟು ಅಗಾಧವಾಗಿತ್ತೆಂಬದನ್ನು ಹಿಂದೆ ಹೇಳಿದೆ. ಸಂಸ್ಕೃತದ ಪರಿಚಯವೂ ಅದರಂತೆಯೇ ಇತ್ತು. ನಾಸ್ತಿಕತನವು ರೋಮ ರೋಮಗಳಲ್ಲಿ ತುಂಬಿ ಹೋಗಿತ್ತು. ಆರ್ಯಸಂಸ್ಕೃತಿಯ ವಿಚಿತ್ರ ಆಚಾರಗಳನ್ನು ಕಂಡು ಅವರಿಗೆ ನಗೆಬರುತ್ತಿತ್ತು. ಆತ್ಮಾನಾತ್ಮ ವಿಚಾರವೆಂದರೆ ಅದೊಂದು ಹುಚ್ಚರು ಮಾಡಿದ ಮೂರ್ಖತನದ ಪ್ರದರ್ಶನವೆಂದು ಅವರ ಗ್ರಹಿಕೆಯಾಗಿತ್ತು.

ಸುದೈವದಿಂದ ಶ್ರೀ ಅರವಿಂದರ ಈ ಸಂಶಯವು ಬಹಳ ದಿನ ಉಳಿಯಲಿಲ್ಲ. ಆತ್ಮಸೂರ್ಯನ ಅರುಣೋದಯವು ಹೃದಯಾಕಾಶದಲ್ಲಿ ಕ್ರಮವಾಗಿ ಆಗಹತ್ತಿತು. ಪಾಶ್ಚಾತ್ಯ ದೃಷ್ಟಿಯಿಂದ ವಿಚಾರಿಸಿ ಏನೋ ಕೆಲವು ಗೊತ್ತುಮಾಡಿಟ್ಟುಕೊಂಡ ಸಿದ್ಧಾಂತಗಳು ಅನುಭವದ ವರೆಗಲ್ಲಿಗೆ ಹತ್ತದಾದವು ಅವುಗಳಲ್ಲಿ ಹುರುಳಿಲ್ಲೆಂಬುದು ಸ್ವಲ್ಪ ಅನುಭವಕ್ಕೆ ಬರಹತ್ತಿತು. ಮನುಷ್ಯನ ಮನಸ್ಸು ತಿರುಗಲಿಕ್ಕೆ ಕ್ಷುಲ್ಲಕ ಕಾರಣಗಳೂ ಸಾಕಾಗುತ್ತವೆ ಕೆಲವರಿಗೆ ಪ್ರಿಯಜನವಿರಹದಿಂದ ಉಪರತಿಯಾಗುವದು; ಬೇರೆ ಕೆಲವರಿಗೆ ಇಚ್ಛಿತ ಸಾಧ್ಯವಾಗದಿದ್ದರೆ ಮನಸ್ಸು ತಿರುಗುವದು. ಇನ್ನು ಕೆಲವರಿಗೆ ಧನ ನಾಶದಿಂದ ವೈರಾಗ್ಯವು ಬರುವದು ಆಯುಷ್ಯದಲ್ಲಿ ಪ್ರತಿಯೊಬ್ಬನಿಗೆ ವೈರಾಗ್ಯಪರವಿಚಾರಗಳು ಒಂದೆರಡು ಸಾರೆಯಾದರೂ ಬಂದು ಭೆಟ್ಟಿಯಾಗದೆ ಹೋಗುವದಿಲ್ಲ. ಸ್ಮಶಾನವೈರಾಗ್ಯ ಪ್ರಸೂತಿವೈರಾಗ್ಯಾದಿ ಒಂದಿಲ್ಲೊಂದು ಪ್ರಕಾರದ ವಿರಾಗವು ಮನುಷ್ಯನ ಮೇಲೆ ಒಂದೆರಡು ತಾಸು, ಕನಿಷ್ಠ ಒಂದೆರಡು ಮಿನೀಟುಗಳ ವರೆಗಾದರೂ ತನ್ನ ಅಮಲು ನಡಿಸದೆ ಬಿಡುವದಿಲ್ಲ. ಆದರೆ ಬಂದ ಪ್ರಸಂಗದಿಂದ ಬುದ್ಧಿಗಲಿತು ವರ್ತನವನ್ನು ಸುಧಾರಿಸುವ ದೃಢನಿಶ್ಚಯಿಗಳಾದ ಪುಣ್ಯಾತ್ಮರೇ ವಿರಳ. ನಾಯಿಯ ಬಾಲವಂಥ ವೃತ್ತಿಯ ಜನರೇ ಎಲ್ಲ ಕಡೆಯಲ್ಲಿ ಹರಡಿಕೊಂಡಿರುವರು. ಅಜ್ಞಾನಾವಸ್ಥೆಯಲ್ಲಿ ಅಜ್ಞಾನಜನ್ಯ ಅಪಕೃತಿಗಳು ಬೇಕಾದಷ್ಟಾಗಿದ್ದರೂ ಬೋಧವಾದ ಬಳಿಕ ಸಹ ಮೊದಲಿನಂತೆ ಅಧಮ ಮಾರ್ಗದಿಂದ ವರ್ತಿಸುವದೆಂದರೆ ತೀರ ನಿರ್ಲಜ್ಜತನದ ಮಾತು. ಶ್ರೀ ತುಲಸೀದಾಸರಿಗೆ ಪತ್ನಿಯ ಎರಡು ನಿಷ್ಠುರ ವಚನಗಳು ಸನ್ಮಾರ್ಗಕ್ಕೆ ಹಚ್ಚಿದವು. ಶ್ರೀ ಪುರಂದರದಾಸರಿಗೆ ಪತ್ನಿಯ ನತ್ತು ಎಚ್ಚರದ ಮೇಲೆ ತಂದಿತು. ಜಾಣನಿಗೆ ಮಾತಿನ ಪೆಟ್ಟು ಸಾಕು. ಕೋಣನಿಗೆ ಏತರಿಂದ ಹೊಡೆದರೂ ಅಷ್ಟೇ; ಯಾತರಿಂದ ಏನು ಆಗಬೇಕಾಗಿದೆ? ಚಿಟ್ಟೆ ಮೈಮೇಲೆ ಬರಲಿ, ನಾಲ್ಕುಏಟು ಧಳಿಸಿಕೊಳ್ಳಲಿ, ದೇಶಬಾಂಧವರು ಅಧಿಕಾರಿಗಳ ಗುಂಡಿಗೆ ಈಡಾಗಲಿ, ಬೇಕಾದುದು ಆಗಲಿ ತನ್ನ ಮಾರ್ಗವಾದ ಸುಳ್ಳುಪಟವು, ಶಯನಂಚಮಗೆ ತಪ್ಪುವಾತಿಲ್ಲ. ಧಿಕ್ಕಾರವಿರಲಿ, ಈ ಜನರಿಗೆ! ಶ್ರೀ ಅರವಿಂದರು ಬಡೋದೆಯಲ್ಲಿ ಹನ್ನೆರಡು ವರುಷ ಕೆಲಸದ ಮೇಲಿದ್ದರು ಕೆಲದಿನ ವಿಲಾಸದಲ್ಲಿ ಕಳೆದರು; ಹಾಗೇ ಮುಂದೆ ಕಳೆಯಬೇಕೆಂದು ಇಚ್ಛಿಸಿದ್ದರು; ಆದರೆ ಅವರ ಸದಸದ್ವಿವೇಕ ಬುದ್ಧಿಯು ಅವರಿಗೆ ಹಾಗೆ ಮಾಡಗೊಡಲಿಲ್ಲ.

ಸದಸದ್ವಿವೇಕ ಬುದ್ಧಿಯು ಇದ್ದುದರಿಂದಲೇ ಈ ಜಗತ್ತಿನಲ್ಲಿ ಸ್ವಲ್ಪ ಅಂಶದಿಂದಾದರೂ ನ್ಯಾಯವು ಉಳಿದಿದೆ ಮತ್ತು ಮುಂದೆ ಹೆಚ್ಚಾಗುವ ಆಶೆಯಿದೆ. ಮನುಷ್ಯನಲ್ಲಿ ಅದು ಜಾಗೃತವಾಯಿತೆಂದರೆ ಆತನಿಗೆ ಕೂಳು ನೀರುಗಳನ್ನು ಸಹ ಸವಿ ಹತ್ತಿಗೊಡುವದಿಲ್ಲ. ಸ್ವೈರವೃತ್ತಿಯ ಜನರಿಗೆ ಸದಸದ್ವಿವೇಕವು ಒಂದು ಬಲವಾದ ಶತ್ರುವಾಗಿದೆ. ಈ ಜನರು ಇತರ ಪ್ರತಿಪಕ್ಷಿಗಳನ್ನು ವಾದದಲ್ಲಿ ಗೆದೆಯುವರು; ಸಂಪತ್ತಿನಿಂದ ತಣ್ಣಗೆ ಕೂಡ್ರಿಸುವರು; ಕೊಲೆಗಡಕರಿಂದ ಪರಲೋಕಕ್ಕೆ ಕಳಿಸುವರು; ವೈರಿಯು ಎಷ್ಟು

ಸವಿಸಾವದ ಆಪ್ತನಿರಲೊಲ್ಲನೇಕೆ, ಆತನನ್ನು ಇಲ್ಲದಂತೆ ಮಾಡಲಿಕ್ಕೆ ಈ ಜನರು ಹಿಂದೆ ಮುಂದೆ ನೋಡಲಿಕ್ಕಿಲ್ಲ ಆದರೆ ಪ್ರತ್ಯಕ್ಷ ಅವರ ಅಂತಃಕರಣದ ಮೂಲೆಯಲ್ಲಿ ಅಡಗಿಕೊಂಡು, ಹೊತ್ತು ಹೊತ್ತಿನಲ್ಲಿ ತಾಪ ಕೊಡುವ ಈ ಸದಸದ್ವಿವೇಕವನ್ನು ನಾಶ ಮಾಡುವದು ಅವರಿಗೆ ಅಸಾಧ್ಯವಾಗುತ್ತದೆ. ಧಾರ್ಮಿಕ ಗ್ರಂಥಗಳ ಅಥವಾ ರಾಷ್ಟ್ರಧರ್ಮಗಳ ವಾಚನ, ಶ್ರವಣ, ಮನನಗಳಿಂದ ಜಾಗ್ರತವಾದ ವಿವೇಕ ಬುದ್ಧಿಯು ಪೀಡಿಸಹತ್ತುತ್ತದೆ. ಆಗ ಈ ಜನರು ಅದಕ್ಕೆ ಏನಾದರೂ ಹೇಳಿ ಸಮಾಧಾನಮಾಡಲೆತ್ನಿಸುವರು.

ಶ್ರೀ ಅರವಿಂದರು ಬಡೋದೆಯಲ್ಲಿರುವಾಗ ದೇಶದಲ್ಲಿ ಹಲವು ತರದ ಚಳವಳಿಗಳಿಗೆ ಆರಂಭವಾಗಿತ್ತು ಅಧಿಕಾರಿಗಳ ಕಾಟಕ್ಕೆ ಜನರು ಬೇಸತ್ತಿದ್ದರು. (ಹೆಚ್ಚಿನ ವರ್ಣನೆ ಮುಂದಿನ ಪ್ರಕರಣದಲ್ಲಿ ನೋಡಿರಿ) ಇದನ್ನು ಕಂಡು ಅರವಿಂದರಿಗೆ ಸಮಾಧಾನವೆನಿಸಲಿಲ್ಲ. ಅವರಿಗೆ ಬಡೋದೆಯ ಬಡೇಜಾವಿನಲ್ಲಿ ಕಾಲಕಳೆಯುವದು ಸೇರದಾಯಿತು. ವೃತ್ತಪತ್ರಗಳಿಗೆ ಅವರು ಮುಂಚೆ ಲೇಖಗಳನ್ನು ಬರೆಯುತ್ತಿದ್ದರು ಆದರೆ ಯಾವಾಗಾದರೂ ಒಮ್ಮೆ ನಾಲ್ಕಕ್ಷರಗಳನ್ನು ಗೀಚಿ ದೇಶಸೇವೆಯನ್ನು ಮಾಡಿದೆನೆಂಬ ಸಮಾಧಾನವನ್ನು ಹಚ್ಚಿಕೊಳ್ಳಲಿಕ್ಕೆ ಅವರ ಮನಸ್ಸು ಒಪ್ಪಲಿಲ್ಲ ತಪ್ಪು ವಿಚಾರಸರಣಿಯಿಂದ ಮನಸ್ಸಿಗೆ ಸಮಾಧಾನಹಚ್ಚಿಕೊಳ್ಳಲಿಕ್ಕೆ ಅವರಿಗೆ ಬೇಕಾದಷ್ಟು ಅವಕಾಶವಿತ್ತು. ದೊಡ್ಡ ಅಧಿಕಾರವಿದ್ದುದರಿಂದ ಕೈಕೆಳಗಿನ ಜನರ ಮೇಲೆ ಉಪಕಾರ ಮಾಡಿದರೆ ದೇಶಸೇವೆಯಾಯಿತೆಂದು ತಿಳಿಯಲಿಕ್ಕೆ ಬರುವಂತಿತ್ತು. ಆದರೆ ಈ ಯಾವದಕ್ಕೂ ಅವರ ಮನಸ್ಸು ಕೇಳಲಿಲ್ಲ. ಹಗಲು ಹನ್ನೆರಡುತಾಸು ದುಡಿದು ಮತ್ತೆ ಶಿಲಕುಇದ್ದರೆ ಮನೆಗೆ ದಪ್ತರು ತಂದು ××ಯಂತೆ ದುಡಿಯುವಂಥ ಹಾಗೂ ಆಫೀಸಿನ ಕೆಲಸವಾಗಿ ಬಳಿಕ ಕ್ರಿಕೇಟಾದಿ ವಿಲಾಸಗಳಾಗಿ ಉಳಿದ ತಾಸ– ಅರ್ಧ ತಾಸು ಯಾವದೊಂದು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿ ದೇಶಸೇವೆಯನ್ನು ಮಾಡುತ್ತೇವೆಂದು ತಿಳಿಯುವಂಥ ದೇ. ಭ. ಗಳು ಶ್ರೀ ಅರವಿಂದರ ಚರಿತ್ರವನ್ನು ನಿರೀಕ್ಷಿಸಬೇಕು.

೧೯೦೫ನೆಯ ಇಸವಿಯ ಜುಲೈತಿಂಗಳು. ಈ ಕಾಲಕ್ಕೆ ಶ್ರೀ ಅರವಿಂದರು ಬಡೋದೆಯಲ್ಲಿ ವ್ಹಾಯಿಸ ಪ್ರಿನ್ಸಿಪಾಲರಾಗಿದ್ದರು ತಿಂಗಳಿಗೆ ೭೫೦ ರೂ. ಗಳ ಸಂಬಳ; ಸುಂದರಳೂ ಸುಶೀಲಳೂ, ವಿದ್ಯಾವತಿಯೂ ಆದ ತರುಣ ಪತ್ನಿ, ಅಲ್ಲದೆ ಅರವಿಂದರ ವಯಸ್ಸಾದರೋ, ಅದೂ ವಿಲಾಸಕ್ಕೆ ಉತ್ತೇಜನವನ್ನೀಯುವಂಥಾದ್ದು ಇಷ್ಟೇ ಅಲ್ಲ, ಮಹಾರಾಜರ ಪೂರ್ಣ ಕೃಪೆಗೆ ಪಾತ್ರರಾದಂಥವರು; ನಾಳೆ ದಿವಾಣರಾಗತಕ್ಕವರು. ಇಂಥ ಸುಖಪರಂಪರೆಗಳು ಅರವಿಂದರನ್ನು ಮೋಹಿಸಲಿಕ್ಕೆ ಮೇಲಾಟವನ್ನು ನಡಿಸಿದ್ದವು. ತನ್ನ ದೇಶಭಾಂಧವರ ದುಃಖಗಳನ್ನು ಕಂಡು ಕರಗಿದ ಶ್ರೀ ಅರವಿಂದರ ಮನಸ್ಸು ಮೋಹಜಾಲದಲ್ಲಿ ಸಿಕ್ಕಲಿಲ್ಲ; ಬಡೋದೆಯೊಳಗಿನ ಐಷಆರಾಮಿನ ಇರುವಿಕೆಯು ದುಃಖಕರವೆನಿಸಹತ್ತಿತು! ಸುಖದಾಯಕ ವಸ್ತುಗಳಿಂದ ದುಃಖವುಂಟಾಗಹತ್ತಿತು. ಎಂಥ ವಿಚಿತ್ರ ಸ್ಥಿತಿಇದು! ಸಾಮಾನ್ಯರಿಗೆ ಸುಖಕರವೆನಿಸಬಹುದಾದ ಸಂಗತಿಗಳು ಅರವಿಂದರಿಗೆ ದುಃಖದಾಯಕವಾದವು. ಸಾಮಾ

ನ್ಯರು ನಿದ್ರಿತರಾಗಿರುವ ವಿಷಯದಲ್ಲಿ ಅಸಾಮಾನ್ಯರು ಜಾಗ್ರತರಾಗಿರುತ್ತಾರೆ. ಅಸಾಮಾನ್ಯರು ದುರ್ಲಕ್ಷಿಸುವ ವಿಷಯದಲ್ಲಿ ಸಾಮಾನ್ಯರು ಎಚ್ಚರ ತಕ್ಕೊಳ್ಳುತ್ತಿರುತ್ತಾರೆ. ಶ್ರೀ ಅರವಿಂದರು ಯಾವ ಮೋಹಪಾಶಕ್ಕೂ ಒಳಗಾಗದೆ ಅವರು ದಿನೇ ದಿನೇ ಹೆಚ್ಚುತ್ತಿರುವ ಮಾತೃಭೂಮಿಯ ದುರ್ದೆಶೆಯನ್ನು ಕಂಡು, ಕರಗಿದ ಅಂತಃಕರಣದವರಾಗಿ ತಮ್ಮ ಅಧಿಕಾರವನ್ನು ಒದ್ದು, ೭೫೦ ರೂಪಾಯಿಗಳಿಗೆ-ಪರಂಪರೆಯಿಂದ ಪ್ರಾಪ್ತವಾಗುವ ನಾನಾಸುಖಗಳಿಗೆ ತಿಲಾಂಜಲಿಯನ್ನಿತ್ತು ದೇಶಸೇವೆಗೆ ಟೊಂಕ ಕಟ್ಟಿದರು. ಸದಸದ್ವಿವೇಕ ಬುದ್ಧಿಯು ನಿರ್ದೇಶಿಸಿದ ಮಾರ್ಗವನ್ನು ಅವಲಂಬಿಸಿದರು. ಪ್ರೇಯ ಮಾರ್ಗವನ್ನು ಬಿಟ್ಟು ಶ್ರೇಯ ಮಾರ್ಗವನ್ನು ಹಿಡಿದರು. ದೇಶಸೇವೆಯ ಅಸಿಧಾರಾವ್ರತವನ್ನು ಅಂಗೀಕರಿಸಿದರು, ಅಂತಃಕರಣವು ಇಷ್ಟೊಂದು ಕಸವಿಸಿಗೊಂಡುದರಿಂದ ಶ್ರೀ ಅರವಿಂದರು ದೇಶಸೇವೆಗೆ ತಮ್ಮನ್ನು ಅರ್ಪಿಸಿಕೊಂಡರಲ್ಲದೆ ಬರೆ ಲಬ್ಧಪ್ರತಿಷ್ಠಿತರಾಗಬೇಕೆಂದಲ್ಲ. ಕೀರ್ತಿಯ ಅಪೇಕ್ಷೆಯಿಂದ ದೇಶಸೇವಕರಾಗಲಿಚ್ಛಿಸುವವರ ಕೈಯಿಂದ ದೇಶಸೇವೆಯೇ ಆಗುವದಿಲ್ಲ. ಸಾಧ್ಯವು, ಕೀರ್ತಿಯಲ್ಲ, ದೇಶಸೇವೆ; ಕೀರ್ತಿಯು, ಹಿಂಬಾಲಿಸಿ ಬರುವ ನೆರಳಿನಂತಿದೆ. ಸೂರ್ಯನ ಕಡೆಗೆ ಮೋರೆಮಾಡಿ ನಡೆದರೆ ನೆರಳು ಹೇಗೆ ತಾನೇ ಬೆನು ಹತ್ತದೆ ಬಿಟ್ಟೀತು?

---

# ೫. ದೇಶಸೇವೆ

Breathes there the man with soul so dead
Who never to himself hath said,
This is my own, my native land!

Whose heart hath ne'er within him burned,
As home his footsteps he hath turned,
From wandering on a foreign strand!

—*Scott*

ಶ್ರೀ ಅರವಿಂದರು ತಮ್ಮ ಆಯುಷ್ಯದ ಎರಡು ಅವಸ್ಥೆಗಳನ್ನು ಮುಗಿಸಿ, ಮೂರ ನೆಯ ಅವಸ್ಥೆಯಲ್ಲಿ ಪ್ರವೇಶಿಸಿದರು. ಪೂರ್ವ ವಯಸ್ಸಿನಲ್ಲಿದ್ದ ವಿಕ್ಷಿಪ್ತತನವು ಈಗ ಒಂದು ವಿಶಿಷ್ಟ ಸ್ವರೂಪವನ್ನು ಧರಿಸಿತು. ಸಾಮಾನ್ಯರಂತೆ ಉಂಡುಟ್ಟು ಸ್ವಸ್ಥವಾಗಿರುವದನ್ನು ಬಿಟ್ಟು ಅವರು ಲೋಕಸೇವೆಗೆ ಟೊಂಕಕಟ್ಟಿದ್ದು ವಿಕ್ಷಿಪ್ತತನವೇ ಇರುತ್ತದೆ. ತನ್ನ ಪ್ರವೃತ್ತಿಯ ಅಥವಾ ಅಂತಃಕರಣದೊಳಗಿನ ಅಸ್ಫುಟಧ್ವನಿಯ ಸ್ಪಷ್ಟ ಬೋಧವಾಗದ್ದರಿಂದ ಮನುಷ್ಯನು ಹಲವು ಸಾರೆ ಸಾಮಾನ್ಯರಿಗೆ ವಿಚಿತ್ರವಾಗಿ ತೋರುವ ಕೃತಿಗಳನ್ನು ಮಾಡುತ್ತಿರುತ್ತಾನೆ. ಜ್ಞಾನದಿಂದ ಅಂತಃಸ್ಫೂರ್ತಿಯ ಬೋಧವು ಆಯಿತೆಂದರೆ ಮನುಷ್ಯನು ಸರಿಯಾದ ಮಾರ್ಗಕ್ಕೆ ಬರಲಿಕ್ಕೆ ಹತ್ತುವದುಂಟು. ಪ್ರತಿಯೊಬ್ಬನಿಗೆ ಒಂದುತರದ ಅಂತಃಪ್ರೇರಣೆಯಾಗುತ್ತಿರುವದುಂಟು ಆದರೆ ಆ ಪ್ರೇರಣೆಯ ಸರಿಯಾದ ಅರ್ಥವು ತಿಳಿಯದ್ದರಿಂದಲೂ, ಅದನ್ನು ಕೃತಿಯಲ್ಲಿ ಹೇಗೆ ತರಬೇಕೆಂಬ ಜ್ಞಾನವಿಲ್ಲದ್ದರಿಂದಲೂ, ಜ್ಞಾನವಿದ್ದರೂ ಅನೇಕಸಾರೆ ಸತ್ಯವೆಂದು ತಿಳಿದ ಸಂಗತಿಗಳನ್ನು ಆಚರಿಸುವ ನೈತಿಕ ಧೈರ್ಯದ ಅಭಾವವಿರುವದರಿಂದಲೂ ಮನುಷ್ಯನು ಬೆಳಕಿಗೆ ಬರುವದಿಲ್ಲ. ಈಶ್ವರನು ಕೊಟ್ಟ ತನ್ನ ಪಾಲಿನ ಸಂದೇಶವನ್ನು ಜಗತ್ತಿಗೆ ಮುಟ್ಟಿಸುತ್ತಿರುವದಿಲ್ಲ ಅಪೂರ್ಣಾವಸ್ಥೆಯಲ್ಲಿಯೇ ಹೊರಟು ಹೋಗುವನು ಶ್ರೀ ಅರವಿಂದರಿಗೆ ಅವರ ತಂದೆಯು I. C. S. ಕ್ಕೆ ಕಳಿಸಿದರೂ, ಪ್ರಸಂಗವು ಸಿಗುತ್ತಲೆ ಅವರು ತಮ್ಮ ಪ್ರವೃತ್ತಿಯಂತೆ ಇಷ್ಟ ಮಾರ್ಗವನ್ನೇ ಹಿಡಿದರು.

ಶ್ರೀ ಅರವಿಂದರ ಮನಸ್ಸು ತಿರುಗಲಿಕ್ಕೆ ದೇಶದ ಪರಿಸ್ಥಿತಿಯೊಂದೇ ಕಾರಣವೆಂದರೆ ಅದು ಸರಿಯಾಗಲಿಕ್ಕಿಲ್ಲ. ಐಹಿಕ ಭೋಗಗಳ ಮೇಲಿಂದ ಮನಸ್ಸು ಹಾರಲಿಕ್ಕೆ ದೇಶದ ಪರಿಸ್ಥಿತಿಯು ಕಾರಣವಿದ್ದಂತೆ ಅವರಲ್ಲಿ ಉಂಟಾದ ಧರ್ಮಜಿಜ್ಞಾಸೆಯೂ ಒಂದು ಮಹ

ತ್ತದ ಕಾರಣವಿದೆ. ಶ್ರೀ ಅರವಿಂದರು ರಾಜಕಾರಣದ ಸಲುವಾಗಿ ದೇಶಸೇವೆಗೆ ಆರಂಭಿಸ ಲಿಲ್ಲ. ಇದೊಂದು ಆತ್ಮೋನ್ನತಿಯ ಸಾಧನವೆಂದೂ ಜನತಾರೂಪಿಯಾದ ಜನಾರ್ದನನ ಸೇವೆ ಮಾಡಬೇಕೆಂದೂ ದೇಶಸೇವೆಯನ್ನು ಕೈಕೊಂಡರು. ಅವರ ಈ ಕೃತ್ಯದ ಬುಡಕ್ಕೆ ಪ್ರಬಲ ವಾದ ಧಾರ್ಮಿಕ ಭಾವನೆಯೇ ಇರುತ್ತದೆ ಶಾಂತ ವಿಚಾರಾಂತ್ಯದಲ್ಲಿ ಅವರಿಗೆ ವೇದಾಂ ತದ ಮತಗಳು ನಿತ್ಯವೆಂದು ತಿಳಿದು ಬರಹತ್ತಿತು ಆರ್ಯಸಂಸ್ಕೃತಿಯ ಅಭ್ಯಾಸವನ್ನು ಶಾಂತರೀತಿಯಿಂದ ನಡಿಸಿದರು. ಅವರ ಅಂತರಂಗದ ಬದಲಾವಣೆಯಾಗಿದೆ ಎಂಬುದನ್ನು ಸೂಚಿಸಲಿಕ್ಕೆ ಉಡುವು ತೊಡವುಗಳು ವ್ಯತ್ಯಾಸ ಹೊಂದಿದವು. ಯುರೋಪೀಯ ಪದ್ಧ ತಿಯ ಆಚಾರ ವಿಚಾರಗಳ ಸ್ಥಳವನ್ನು ಹಿಂದೀ ಆಚಾರ ವಿಚಾರಗಳು ಆಕ್ರಮಿಸಿದವು. ಧರ್ಮಗ್ರಂಥಗಳ ಮನನ ಮಾಡಬೇಕೆಂದೂ, ನಮ್ಮ ವಾಙ್ಮಯದ ಆಸ್ವಾದವನ್ನು ತಕ್ಕೊ ಳ್ಳಬೇಕೆಂದೂ ಸಂಸ್ಕೃತದ ಅಧ್ಯಯನ ನಡಿಸಿದರು. ಯಾವದೊಂದು ಭಾಷೆಯು ಉತ್ತಮ ರೀತಿಯಿಂದ ಬಾಯಲ್ಲಿ ಕುಳಿತುಕೊಳ್ಳಬೇಕಾದರೆ ಆ ವಾಙ್ಮಯದೊಳಗಿನ ಕೆಲವು ಉದ್ಗ್ರಂ ಥಗಳನ್ನು ಮುಖೋದ್ಗತ ಮಾಡಬೇಕೆಂದು ಇವರ ಮತವಿದ್ದದರಿಂದ ಸ್ವಲ್ಪ ಕಾಲದೊಳಗೆ ವಾಲ್ಮೀಕಿರಾಮಾಯಣದ ಕೆಲವೊಂದು ಭಾಗವನ್ನು ಅಸ್ಖಲಿತವಾಗಿ ಅನ್ನಲಿಕ್ಕೆ ಕಲಿತರು!

ವೇದಾಂತ ತತ್ವಗಳ ಬೋಧವಾದ ಬಳಿಕ ಅವುಗಳಂತೆ ಆಚರಣೆಯು ಅವಶ್ಯವಿ ಲ್ಲವೇ? ಶ್ರೀ ಅರವಿಂದರು ಹೊಟ್ಟೆಗಾಗಿ ದುಡಿದು ದುಡಿದು ಬೇಸರಾದ ಹೊತ್ತಿನಲ್ಲಿ ಮನ ಸ್ಸಿಗೆ ಆರಾಮವೆಂದೇನೂ ವೇದಾಂತದ ಜ್ಞಾನ ಮಾಡಿಕೊಳ್ಳಲಿಲ್ಲ. ಆಯುಷ್ಯದ ಉದ್ದೇಶ ವೇನು? ಹೇಗೆ ನಡೆದರೆ ಸಾರ್ಥಕವಾದೀತು? ಎಂಬುದನ್ನು ತಿಳಿದು ಅದರಂತೆ ಮನಃಪೂರ್ವ ಕವಾಗಿ ಆಚರಿಸಿ ದೇಹಸಾರ್ಥಕ ಮಾಡಿಕೊಳ್ಳುವದೇ ಅವರ ಅಧ್ಯಯನದ ಉದ್ದೇಶವಿತ್ತು; ಮತ್ತು ವಿಚಾರಗಳು ಸ್ಥಿರವಾದ ಬಳಿಕ ಆ ವಿಚಾರಗಳಂತೆ ಆಚಾರವನ್ನಿಡಲಿಕ್ಕೆ ಹಿಂಜರಿ ಯಲಿಲ್ಲ. ಭೌತಿಕ ಸುಖವನ್ನು ಕೃಷ್ಣಾರ್ಪಣ ಮಾಡಿ ಸತ್ಯತತ್ವದಂತೆ ನಡೆಯಹತ್ತಿದರು. ಅರವಿಂದರೂ ವೇದಾಂತಿಗಳು; ನಮ್ಮಲ್ಲಿಯ ಅನೇಕರೂ ವೇದಾಂತಿಗಳು ಅರವಿಂದರು ಶ್ರೀ ಗೀತಾದಿ ಗ್ರಂಥಗಳನ್ನು ಓದಿದರು, ನಮ್ಮಲ್ಲಿಯ ಹಲವರೂ ಅವುಗಳನ್ನು ಓದಿದರು. ಆದರೆ ಇವರ ನಡುವಿನ ಅಭ್ಯಂತರವೆಷ್ಟಿದು! ನೈ! ವೇದಾಂತಿಗಳೆನ್ನಬೇಕು ಅರವಿಂದರಿಗೇ. ದೀಡದಮಡಿಯ ಅನೇಕ ವೇದಾಂತಿಗಳು ಅರ್ಥದ ಅನರ್ಥಮಾಡಿ ಮನಸ್ಸಿನ ಸಮಾಧಾನ ಮಾಡಿಕೊಳ್ಳುತ್ತಾರೆ. ಅರವಿಂದರಂಥವರಿಗೂ ಈ ವರ್ಗಕ್ಕೂ ಕೆಲವು ಸಾಮ್ಯವಿದೆ, ಇಲ್ಲವೆಂಬುವಂತಿಲ್ಲ. ಲೋಕಸೇವೆಯಲ್ಲಿ ಅಥವಾ ಆತ್ಮೋನ್ನತಿಯ ಕಾರ್ಯದಲ್ಲಿ ಶ್ರೀ ಅರ ವಿಂದರಂಥ ವೇದಾಂತಿಗಳು ಮಾನಾಪಮಾನವನ್ನು ತ್ಯಜಿಸಿರುತ್ತಾರೆ, ಸುಖದುಃಖಗಳನ್ನು ಬಿಟ್ಟಿರುತ್ತಾರೆ, ಶಾಂತಿಯನ್ನು ತಳೆದಿರುತ್ತಾರೆ ಮೇಲೆ ಹೇಳಿದಂಥ ವೇದಾಂತಿ ವರ್ಗವೂ ಈ ಗುಣಗಳುಳ್ಳದ್ದಿರುತ್ತದೆ ಆದರೆ ಯಾವಾಗ? ಸದಾಕಾಲವೂ ಈ ವೃತ್ತಿಯಿರುವದಿಲ್ಲ; ಕೇವಲ ಹೊಟ್ಟೆಗಾಗಿ ಯಾವಾಗ ಧನಾರ್ಜನೆಯನ್ನು ಮಾಡಬೇಕಾಗಿರುವುದೋ ಆಗ. ಆಗ ಅಧಿ ಕಾರಿಯು ಅಪಶಬ್ದಗಳನ್ನಾಡಲಿ ಅವರಿಗೆ ನಾಚಿಕೆಯಿಲ್ಲ, ಅಪಮಾನ ಮಾಡಲಿ ದುಃಖವಿಲ್ಲ.

ಏನು ಮಾಡಿದರೂ ಅವರ ಶಾಂತಿ (?) ಗೆ ಭಂಗ ಬರುವದಿಲ್ಲ. ಈ ವರ್ಗದ ವೇದಾಂತಿಗಳಿಗೆ ತತ್ವಜ್ಞಾನದ ಪರಿಭಾಷೆಯು ತುದಿ ನಾಲಿಗೆಯ ಮೇಲೆ ಕುಳಿತಿರುತ್ತದೆ ಆದರೆ ಆ ಜ್ಞಾನವು ತುದಿಯಲ್ಲಿ ಕುಳಿತಿರುವದೇ ಹೊರತು ಗಂಟಲ ಕೆಳಗೆ (ಅಂತಃಕರಣದಲ್ಲಿ) ಇಳಿದಿರುವದಿಲ್ಲ! ಶಾಬ್ದಿಕ ಕೋಟಿಕ್ರಮ ಮಾಡಿ ಸುಳ್ಳು ಸಂಗತಿಯನ್ನು ಸತ್ಯದಂತೆ ನಟಿಸಿ ತೋರಿಸುವರು. ಇಂಥ ವೇದಾಂತಿಗಳಿಂದಲೇ ನಮ್ಮ ಧರ್ಮಕ್ಕೆ ಅವನತಸ್ಥಿತಿಯು ಪ್ರಾಪ್ತವಾಗಿದೆ; ದೇಶವು ಹೀನಸ್ಥಿತಿಗೆ ಬಂದಿದೆ. ಆಚಾರವಿಲ್ಲದ ಉದಾತ್ತ ವಿಚಾರಗಳ ಪ್ರಯೋಜನವೇನು? कलौ वेदान्तिनो भान्ति फाल्गुणे बालका इव ಎಂಬುದೇ ಸತ್ಯ.

ಇಲ್ಲಿಯ ವರೆಗೆ ಶ್ರೀ "ಅರವಿಂದರು" ಎಂದ ಕೂಡಲೆ ಒಂದು ವ್ಯಕ್ತಿಯಷ್ಟೇ ಕಣ್ಣೆದುರಿಗೆ ಬರುತ್ತಿತ್ತು; ಮತ್ತು ಇಲ್ಲಿಯ ವರೆಗಿನ ಅರವಿಂದರ ವರ್ಣನೆಯಲ್ಲಿ ವೈಯಕ್ತಿಕ ಭಾಗವೇ ಹೆಚ್ಚಾಗಿತ್ತು. ಆದರೆ ಇನ್ನು ಮುಂದಿನ ಅರವಿಂದರ ವ್ಯಾಪ್ತಿಯು ಬರೇ ಮೂರೂವರೆ ಮೊಳದ ದೇಹದಲ್ಲಿ (ಬಹಳವಾದರೆ ಅವರ ಮನೆತನದಲ್ಲಿಯಷ್ಟೇ) ಇರದೆ ಇಡೀ ರಾಷ್ಟ್ರದಲ್ಲಿರುತ್ತದೆ. ಶ್ರೀ ಅರವಿಂದರಿಗೆ ತಮ್ಮ ಕ್ಷುದ್ರ ವೈಯಕ್ತಿಕ ಸುಖ, ಮಾನ-ಮಾನ್ಯತೆಗಳಲ್ಲಿ ಗುಂಗಾಗಿ ಇರುವದು ಸೇರಲಿಲ್ಲ. ತಮ್ಮ ಸುಖವೆಂದರೆ ದೇಶದ ಸುಖ, ತಮ್ಮ ಉನ್ನತಿಯೆಂದರೆ ದೇಶದ ಉನ್ನತಿಯೆಂದು ತಿಳಿದು, ಅವರು ಅಖಿಲ ಭಾರತೀಯರಲ್ಲಿ ವಿಲೀನರಾದರು; ಭಾರತೀಯರನ್ನು ತಮ್ಮ ಅಂತಃಕರಣದಲ್ಲಿ ಆದರಿಸಿದರು. ಪ್ರತಿಯಾಗಿ ಭಾರತೀಯರೂ ಅವರನ್ನು ತಮ್ಮ ಹೃದಯಮಂದಿರದಲ್ಲಿ ಪೂಜಿಸಹತ್ತಿದರು. ಇನ್ನು ಮುಂದೆ ಅರವಿಂದರು ಒಂದು ವ್ಯಕ್ತಿಯಾಗಿರದೆ ರಾಷ್ಟ್ರವಾದರು. ದೇಶಬಾಂಧವರಲ್ಲಿ ತಾದಾತ್ಮ್ಯವನ್ನು ಹೊಂದಿದರು. ಆದುದರಿಂದ ಅರವಿಂದರ ಮುಂದಿನ ಚರಿತ್ರದ ಅವಲೋಕನ ಮಾಡುವವರಿಗೆ ಇಡೀ ದೇಶದ ಪರಿಸ್ಥಿತಿಯ ಜ್ಞಾನ ಮಾಡಿಕೊಳ್ಳುವದು ಅವಶ್ಯವಿದೆ. ದೇಶಸೇವಕ ಅರವಿಂದರ ಚರಿತ್ರವೆಂದರೆ ತತ್ಕಾಲೀನ ದೇಶದ ಚರಿತ್ರೆಯು

ಪೀಠಿಕೆಯಲ್ಲಿ ಸೂಚಿಸಿದಂತೆ ಇಂಗ್ಲಿಶ ಭಾಷೆಯ ಪ್ರಸಾರದ ಆರಂಭದ ದಿನಗಳಲ್ಲಿ ಜನರಲ್ಲಿ ಮಾನಸಿಕ ದಾಸ್ಯವು ಹೆಚ್ಚಾಗಿತ್ತು. ಮನಸ್ಸಿನಿಂದ ಇಂಗ್ಲಿಶ ಕೃತಿಗಳ ಅನುಕರಣವು ನಡೆದಿತ್ತು. ಮತ್ತು ಅವರ ಕಾಯಿದೆ ಕಾನೂನುಗಳ ವಿಷಯಕ್ಕೆ ಆದರವಿತ್ತು. "ಹಳೇದೆಲ್ಲ ಹೊಲಸು'' ಎಂಬ ಪ್ರವೃತ್ತಿಯು ಜನರಲ್ಲಿ ಹೆಚ್ಚಾಯಿತು. ದುರ್ಗುಣಗಳಂತೆ ಕೆಲವು ಸುಗುಣಗಳ ಪ್ರವೇಶವೂ ಆಯಿತು. ದೇಶದ ಮೇಲೆ ಪ್ರೇಮ ಮಾಡಬೇಕು, ಸಮಾಜಸೇವೆ ಮಾಡಬೇಕೆಂಬ ಅಸ್ಪಷ್ಟ ಕಲ್ಪನೆಯು ಜನರಲ್ಲಿ ಅಂಕುರಿಸಿತು. ಅಲ್ಲಲ್ಲಿಗೆ ಕೆಲವು ಸಂಘಗಳೂ, ಸಂಸ್ಥೆಗಳೂ ಸ್ಥಾಪಿತವಾದವು. ಸ್ತ್ರೀಯರು ಸುಶಿಕ್ಷಿತರಾಗದ ವಿನಾ ಗತಿಯಿಲ್ಲವೆಂದು ಕೆಲವರು ಕನ್ಯಾಶಾಲೆಗಳನ್ನು ಸ್ಥಾಪಿಸಿದರು. ಸಮಾಜಸೇವಾ ಸಂಘಗಳು ಹೊರಟವು. ಅದು ತೀರ ಆರಂಭದ ಸ್ಥಿತಿಯಿದ್ದುದರಿಂದ ಈ ಸಂಘಗಳಲ್ಲಿ ಕೆಲವು ಚಿರಸ್ಥಾಯಿಗಳಾಗಲಿಲ್ಲ. ಹಾಗೂ ಕಾರ್ಯಕಾರಿಗಳಾಗಲಿಲ್ಲ. ಉತ್ಪನ್ನವಾದವು, ನಷ್ಟವಾದವು.

ದೇಶದಲ್ಲಿ ಪಾಶ್ಚಿಮಾತ್ಯ ಶಿಕ್ಷಣವು ಬೆಳೆದಂತೆ ಜನರೂ ಜಾಗ್ರತರಾಗಹತ್ತಿದರು. ಅತಿ ಪರಿಚಯದಿಂದ ಪಾಶ್ಚಿಮಾತ್ಯರ ಅಂತರಂಗವು ಗೊತ್ತಾಗಹತ್ತಿತು ಆರಂಭಕ್ಕೆ ಯುರೋಪಿಯನರೆಂದರೆ ದೇವರು, ಅವರ ಆಚಾರ ವಿಚಾರಗಳನ್ನು ಅನುಕರಿಸಿದರೇ ನಮ್ಮ ಗತಿ ಎಂದು ತಲೆಗೇರಿದ ಮಬ್ಬು ಕ್ರಮ ಕ್ರಮವಾಗಿ ಕಡಿಮೆಯಾಗಹತ್ತಿತು. ಬ್ರಿಟಿಶರ ಬಣ್ಣದ ಮಾತುಗಳ-ಬಣ್ಣದ ಕೃತಿಗಳ ರಹಸ್ಯವು ಜನರ ಲಕ್ಷ್ಯದಲ್ಲಿ ಚನ್ನಾಗಿ ಬರಹತ್ತಿತು. ಬ್ರಿಟಿಶರು ಇಲ್ಲಿ ಬಂದದ್ದು ಮೋಕ್ಷ ಸಾಧನೆಯ ಉದ್ದೇಶದಿಂದಲ್ಲ, ಅವರು ರಾಜಕಾರಣ ಕುಶಲರಿರುವದರಿಂದ ತಮಗೆ ಬೇಕಾದ ಮಾತನ್ನು ನಮ್ಮ ಕೈಯಿಂದಲೇ ಸವಿಮಾತು ಹೇಳಿ ಹೇಗೆ ಮಾಡಿಸಿಕೊಳ್ಳುತ್ತಾರೆಂಬದು ಜನರ ಧ್ಯಾನಕ್ಕೆ ಬಂತು ಆಗ ದೇಶದ ಸುಧಾರಣೆಯನ್ನು ಮಾಡಬೇಕೆಂದು ಪ್ರಯತ್ನಪಡುವ ಬೇರೆ ಬೇರೆ ಪ್ರಾಂತದ ಕೆಲವು ಸುಶಿಕ್ಷಿತರು ಒತ್ತಟ್ಟಿಗೆ ನೆರೆದು ಸಭೆಗೂಡಿಸಿ ವಿಚಾರ ವಿನಿಮಯ ಮಾಡಬೇಕೆಂದು ಗೊತ್ತುಪಡಿಸಿದರು. ೧೮೮೫ನೆಯ ಇಸವಿಯಲ್ಲಿ ಮುಂಬಯಿಯಲ್ಲಿ ಹೀಗೆ ಎಲ್ಲ ಭಾಗಗಳಿಂದ ಜನರು ಕೂಡಿದರು. ವಿಚಾರ ಮಾಡಿ ದೇಶಕ್ಕೆ ಅವಶ್ಯವಿರುವ ಸಂಗತಿಗಳ ಠರಾವು ಮಾಡಿದರು. ಇದೇ ಕಾಂಗ್ರೇಸ್ಸು. ಇದು ಮುಂದೆ ಪ್ರತಿ ವರುಷ ದೇಶದಲ್ಲಿ ಬೇರೆ ಬೇರೆ ಕಡೆಗೆ ನೆರೆಯುವದು ಗೊತ್ತಾಗಿ ಆ ಕ್ರಮವು ಇಂದಿಗೂ ನಡೆದಿದೆ.

ಇಂಗ್ಲಿಶರಂಥ ರಾಜಕಾರಣಿಗಳು ಇಂಗ್ಲಿಶರೇ ತಮ್ಮ ವಿಷಯಕ್ಕೆ ಜನರಲ್ಲಿರುವ ವಿಶ್ವಾಸವು ಹಾರದಿರಲಿಕ್ಕೆ ಅವರು ಮಾಡಿದ ಎಷ್ಟೋ ಕುಶಲ ಪ್ರಯತ್ನಗಳು ಎಂಥವನ ಬುದ್ಧಿಗೂ ದಂಗು ಬಡಿಸುತ್ತವೆ. ಲಿಟನನಂಥ ಉದ್ದಾಮ ಅಧಿಕಾರಿಯನ್ನು ಕಳಿಸಿ ಒಮ್ಮೆ ಕೆಣಕುವದು; ಬಳಿಕ ರಿಪನನಂಥ ಉದಾರ ಮನುಷ್ಯನನ್ನು ಕಳಿಸಿ ಸಮಾಧಾನ ಮಾಡುವದು ಅವರ ಪದ್ಧತಿಯಾಗಿದೆ. ಜನರಲ್ಲಿರುವ ಹುಳುಕುಗಳನ್ನು ಶೋಧಿಸಿ ತೆಗೆದು ಅದರ ಮೇಲೆ ರಾಜ್ಯಕರ್ತರು ತಮ್ಮ ಇಮಾರತು ನಿಲ್ಲಿಸುವರು. ಹಿಂದೂ ಮುಸಲ್ಮಾನರಲ್ಲಿ ಮನಸ್ಸು ನೆಟ್ಟಗಿರದ್ದನ್ನು ಕಂಡು ಅದರ ಲಾಭ ತಕ್ಕೊಳ್ಳುವದೂ, ಬ್ರಾಹ್ಮಣ-ಬ್ರಾಹ್ಮಣೇತರರಲ್ಲಿ ಅಸಂತೋಷವಿದ್ದರೆ ಅದರ ಉಪಯೋಗ ಮಾಡಿಕೊಳ್ಳುವದೂ ರಾಜಕಾರಣ ಕುಶಲರಾದ ಇಂಗ್ಲಿಶರಿಗೆ ಬಹು ಸುಲಭವಾಗಿದೆ. ದೇಶದ ಸ್ಥಿತಿಯ ವಿಚಾರ ಮಾಡಲಿಕ್ಕೆ ದೇಶದೊಳಗಿನ ಮುಖಂಡರು ಕಾಂಗ್ರೆಸ್ಸು ಸ್ಥಾಪಿಸಿ ಅಲ್ಲಿ ಪ್ರತಿವರುಷ ವಿಚಾರವಿನಿಮಯ ಮಾಡಹತ್ತಿದರು. ಕಾಂಗ್ರೇಸದ ಠರಾವುಗಳನ್ನು ತೆಗೆದು ಕ್ರಮವಾಗಿ ಅವುಗಳ ಭಾಷೆಯು ಹೇಗೆ ಓಜಸ್ವಿಯಾಗುತ್ತ ಹೋಗಿರುವದೆಂಬುದನ್ನು ನಿರೀಕ್ಷಿಸಿದರೆ ಆ ಸಭೆಯು ದಿನದಿನಕ್ಕೆ ಹೇಗೆ ಕಸುವುಳ್ಳದ್ದಾಗುತ್ತ ನಡಿಯಿತೆಂಬದು ಕಂಡು ಬರುವದು.

ಈ ದೇಶಾಭಿಮಾನದ ಗಾಳಿಯು ಆರಂಭಕ್ಕೆ ಇಂಗ್ಲಿಶ ಬಲ್ಲ ಜನರಲ್ಲಿಯೇ ಇತ್ತು. ಕೆಳಗಿನ ವರ್ಗಕ್ಕೆ ದೇಶಾಭಿಮಾನವೆಂದರೆ, ಎಂಥ ವಸ್ತುವಿರುತ್ತದೆಂಬುದರ ಕಲ್ಪನೆಯು ಸಹ ಇದ್ದಿಲ್ಲ. ಸರಕಾರದ ಅಂತರಂಗವು ತಿಳಿಯದ ಕಾರಣ ಸಾಮಾನ್ಯ ಜನರು ಮಬ್ಬಿನಲ್ಲಿಯೇ

ಇದ್ದರು. ಸುಶಿಕ್ಷಿತ ಜನರು ವರ್ತಮಾನ ಪತ್ರಗಳನ್ನು ತೆಗೆದು, ಮಾಸಪತ್ರಿಕೆಗಳನ್ನು ಪ್ರಕಟಿಸಿ, ಪುಸ್ತಕಗಳನ್ನು ಬರೆದು, ವ್ಯಾಖ್ಯಾನಗಳನ್ನು ಕೊಟ್ಟು ಜನರಲ್ಲಿ ನಿಜವಾದ ಜ್ಞಾನದ ಪ್ರಸಾರ ಮಾಡಬೇಕೆಂದು ಹಲವು ವಿಧದಿಂದ ಪ್ರಯತ್ನಿಸಿದರು. ರಾಷ್ಟ್ರೀಯ ಸಭೆಯಲ್ಲಿ ದಿನದಿನಕ್ಕೆ ಶಕ್ತಿಯು ಹೆಚ್ಚಾಗಹತ್ತಿತು. ರಾಷ್ಟ್ರ ಸಭಾಸ್ಥಾಪಕರಾದ ಮೊದಲಿನ ತಲೆಯ ಜನರು, ಹೊಸದಾಗಿ ರಾಷ್ಟ್ರ ಕಾರ್ಯಕ್ಕೆ ಆರಂಭಿಸಿದ ನೂತನ ಉತ್ಸಾಹದ ತರುಣರ ಮುಂದೆ ನಿಸ್ತೇಜರಾಗಿ ಕಾಣಹತ್ತಿದರು. ವರುಷದಲ್ಲಿ ಒಂದುಸಾರೆ ರಾಷ್ಟ್ರೀಯ ಸಭೆಯಲ್ಲಿ ಸರಕಾರದ ಹತ್ತರ ಬೇಡಿಕೊಳ್ಳುವ ವಿಷಯಗಳ ಠರಾವು ಪಾಸು ಮಾಡಿ ಸ್ವಸ್ಥವಾಗಿ ಇಡೀ ವರುಷ ಕುಳಿತುಕೊಳ್ಳುವ ಪದ್ಧತಿಯು ತರುಣರಿಗೆ ಸೇರದಾಯಿತು. ವೃದ್ಧರ ಮಾರ್ಗಕ್ಕೂ ತರುಣರ ಮಾರ್ಗಕ್ಕೂ ಅಂತರ ಬರಹತ್ತಿತು. ತರುಣ ಪಕ್ಷಕ್ಕೆ ವೀರ ಪಕ್ಷವೆಂದೂ, ವೃದ್ಧರ ಪಕ್ಷಕ್ಕೆ ಮಂದ ಪಕ್ಷವೆಂದೂ ಹೆಸರುಗಳು ಸಿಕ್ಕವು. ದೇಶದ ಉತ್ಕರ್ಷವೇ ಎಲ್ಲರ ಸಾಧ್ಯವಾಗಿದ್ದರೂ ಮಾರ್ಗ ಭೇದಗಳಾಗಹತ್ತಿದವು. ವೀರಪಕ್ಷದ ಮತಗಳು ಜನರಿಗೆ ಹೆಚ್ಚು ಸೇರಹತ್ತಿದವು. ಜನರಲ್ಲಿ ಹೆಚ್ಚು ಜಾಗ್ರತಿಯಾಗಹತ್ತಿತು.

ಇದು ಸರಕಾರಕ್ಕೆ ಹೇಗೆ ಸೇರಬೇಕು? ಜನರಲ್ಲಿಯಾಗುವ ದೇಶಾಭಿಮಾನದ ಪ್ರಸಾರವೆಂದರೆ ಅದು ಬ್ರಿಟಿಶರ ಚಿರಸ್ಥಾಯಿತ್ವಕ್ಕೆ ಭಂಗ ತರುವಂಥ ಸಂಗತಿ. ತಮ್ಮ ದೇಶದಲ್ಲಿ ತಾವೇ ಬಾಧ್ಯಸ್ಥರಿರಲಿಕ್ಕೆ ಬೇಕು. ಪರಗೃಹಸ್ಥನು ಬಂದು ಮನೆಯಲ್ಲಿ ಅಧಿಕಾರ ನಡಿಸಿದರೆ ಯಾರಿಗೆ ಸೇರೀತು? ಮನೆಯ ಮಾಲಕನು ಮಬ್ಬಿನಲ್ಲಿರುವವರೆಗೇ ಪರಗೃಹಸ್ಥನ ಆಟವಷ್ಟೇ. ಮನೆಯ ಯಜಮಾನನಿಗೆ, "ಇದು ತನ್ನ ಮನೆ, ಅಧಿಕಾರ ನಡಿಸುವಾತನು ಪರನು. ಹಾಲು ಆಗಲಿ, ಹೊಡೆದಾಡಲಿ, ಬಡಿದಾಡಲಿ ಈ ಮನೆಯು ಅಣ್ಣ ತಮ್ಮಂದಿರಲ್ಲಿರಲಿ; ಇಂದಿಲ್ಲ ನಾಳೆಯಾದರೂ ನಮ್ಮ ಕೈಗೆ ಬಂದೀತು. ಪರ ಮನುಷ್ಯನ ಕೈಯಲ್ಲಿ ಅದು ಹೋದರೆ ತಿರುಗಿ ಬರುವ ಬಗೆ ಹೇಗೆ" ಎಂಬುವ ವಿಚಾರಗಳು ಬರಹತ್ತಿದರೆ ಮನೆಯಲ್ಲಿ ಆ ಪರ ಮನುಷ್ಯನ ಕಾಲು ಹೇಗೆ ಸ್ಥಿರವಾಗಿ ನಿಂತೀತು? ಇಂಥ ಸಮಯದಲ್ಲಿ ಆ ಪರಗೃಹಸ್ಥನ ಕರ್ತವ್ಯವೇನು ಉಳಿದೀತು? ಅರ್ಥಾತ್ ಅಣ್ಣ-ತಮ್ಮಂದಿರಲ್ಲಿ ನ್ಯಾಯ ಹಚ್ಚುವದು, ಅಥವಾ ಅವರೆಲ್ಲರನ್ನೂ ಯಾವದೊಂದು ಮೋಹದಲ್ಲಿ ತೊಡಕಿಸಿ ಮಬ್ಬಿನಲ್ಲಿರಿಸುವದು ಇದೇಯಲ್ಲವೇ? ಇಂಗ್ಲಿಶ ರಾಜಕಾರಣಪಟುಗಳಾದರೂ ಈ ಯುಕ್ತಿಯನ್ನು ಮಾಡದೆ ಹೇಗೆ ಬಿಟ್ಟಾರು? ಆರಂಭದಲ್ಲಿ ಕಾಂಗ್ರೆಸ್ಸಿನಲ್ಲಿ ಹಿಂದೂ ಮುಸಲ್ಮಾನರೆಲ್ಲರೂ ಒಕ್ಕಟ್ಟಾಗಿಯೇ ಇದ್ದರು. ಮುಂದೆ ಮುಸಲ್ಮಾನರಿಗೆ ಸರಕಾರದ ಸ್ವಲ್ಪ ಮುಸಲತ್ತು ಸಿಕ್ಕಿತು ಮೊದಲೇ ಹಿಂದೂ ಮುಸಲ್ಮಾನರಿಗೆ ಹೊಂದುವದಿಲ್ಲ. ಅವರಲ್ಲಿ ಸರಕಾರದ ಫೂಟ ಸಿಕ್ಕ ಬಳಿಕ ಕೇಳುವದೇನು! ಹಿಂದೂ ಮುಸಲ್ಮಾನರಲ್ಲಿ ಕೆಲವು ಕಡೆಗೆ ದಂಗೆಗಳಾದವು. ಮುಸಲ್ಮಾನರು ಕಾಂಗ್ರೆಸ್ಸಿನಿಂದ ವಿಭಕ್ತರಾಗಿ ತಮ್ಮದೊಂದು ಬೇರೆ ಒಲೆ ಹೂಡಿದರು. ಇದೇ ಮುಸಲೀಮ ಲೀಗವು. ಸರಕಾರದ

ದರಬಾರದಲ್ಲಿ ಮುಸಲ್ಮಾನರು ತುಂಬಹತ್ತಿದರು. ಪಾಪ ಮುಸಲ್ಮಾನರು! ಸರಕಾರವು ತಮ್ಮನ್ನು ನಿಜವಾಗಿಯೇ ಪ್ರೀತಿಸುತ್ತದೆಂದು ತಿಳಿದರು! ಆದರೆ ಭವಿಷ್ಯತ್ ಕಾಲವು ನಿಜವಾದ ನ್ಯಾಯಾಧೀಶನಲ್ಲವೇ?

ಮುಸಲ್ಮಾನರು ಕಾಂಗ್ರೆಸ್ಸಿನ ಹೊರಗೆ ಹೋದ ಮಾತ್ರಕ್ಕೆ ಅದು ಕಟ್ಟಾಗಲಿಲ್ಲ. ಮುಂದೆ ಹಾಗೇ ನಡೆಯಿತು. ಯಥಾಪ್ರಕಾರ ಲೋಕಸೇವೆಯ ಕೆಲಸವನ್ನು ಮಾಡಿತು. ತರುಣ ಪಕ್ಷದ ವರ್ಚಸ್ಸು ದೇಶದಲ್ಲಿ ಹೆಚ್ಚಾಗಹತ್ತಿತು. ಈ ಪಕ್ಷದ ವರ್ಚಸ್ಸು ಹೆಚ್ಚಾಗಲಿಕ್ಕೆ ಪರ್ಯಾಯದಿಂದ ಸರಕಾರದವರೂ ಬಹಳ ಸಹಾಯ ಮಾಡಿದರು.

ದೇಶದಲ್ಲಿ ರೇಲ್ವೆಗಳು ಹೆಚ್ಚಾಗಿ ದೇಶದ ವ್ಯಾಪಾರಕ್ಕೆ ಅನುಕೂಲವಾಗದೆ ಧಾನ್ಯಾದಿ ಜನರ-ಆಹಾರದ ಪದಾರ್ಥಗಳು ಪರದೇಶಕ್ಕೆ ಹೋಗಲಿಕ್ಕೆ ಸಹಾಯವಾಯಿತು; ಪ್ಲೇಗು ಮುಂತಾದ ರೋಗಗಳ ಪ್ರಸಾರನಾಗಿ ಜನರ ಪೀಡೆಯು ಹೆಚ್ಚಾಯಿತು. ಇಂಗ್ಲೀಶ ಕಲಿತ ಜನರಿಗೆ ಆರಂಭಕ್ಕೆ ದೊಡ್ಡ ದೊಡ್ಡ ಸಂಬಳಗಳುಳ್ಳ ನೌಕರಿಗಳು ಸಿಕ್ಕವು. ಅದರಿಂದ ಈ ಜನರು ತಮಗೆ ದೇಶದ ಪರಿಸ್ಥಿತಿಯ ಯಥಾರ್ಥ ಜ್ಞಾನವಿದ್ದರೂ ಸರಕಾರದ ಪಿಂಡದಿಂದ ಬಾಯಿ ಕಟ್ಟಿದ್ದರಿಂದ ಅದನ್ನು ಜನರಿಗೆ ಹೇಳಲಿಕ್ಕೆ ಸಮರ್ಥರಾಗಲಿಲ್ಲ. ವ್ಯಾಪಾರ ಉದ್ಯೋಗದ ಎಲ್ಲ ದಾರಿಗಳನ್ನು ಬಂದು ಮಾಡಿ ನೌಕರಿಯ ಒಂದೇ ಒಂದು ದಾರಿಯನ್ನು ತೆರವಿಟ್ಟಿದ್ದರಿಂದ ಆ ಮಾರ್ಗದ ಮೇಲೆ ವಿಶೇಷ ದಟ್ಟಣೆಯಾಯಿತು. ಮುಲ್ಕೀ ಪರೀಕ್ಷೆಯವನಿಂದ B. A. ಆದವನ ವರೆಗೂ ಎಲ್ಲರಿಗೂ ಒಂದೇ ದಾರಿ-ನೌಕರಿ. ದಿನದಿನಕ್ಕೆ ಇಂಗ್ಲೀಶ ಬಲ್ಲ ಜನರು ಹೆಚ್ಚಾದರು. ನೌಕರಿಯ ಸ್ಥಳಗಳು ವಿಶೇಷ ಬೆಳೆಯಲಿಲ್ಲ. ಇದರಿಂದಲೂ ಜನರಲ್ಲಿ ಒಂದು ತರದ ಅಸಂತೋಷವುಂಟಾಯಿತು. B. A., M. A. ಆಗುವವರೆಗೆ ಸಾಯುವತನಕ ಕಲಿಯಬೇಕು, ಕಡೆಗೆ ತಕ್ಕಂತೆ ಪ್ರತಿಫಲವೇನೂ ಸಿಗುವಂತೆಯಿಲ್ಲ. ಹೆಂಡರು ಮಕ್ಕಳ ಹೊಟ್ಟೆ ತುಂಬಬೇಕಾದರೆ ಕಣ್ಣೀರು ಕಪಾಳಕ್ಕೆ ಬರಹತ್ತಿದವು. ಸ್ವತಂತ್ರ ಉದ್ಯೋಗ ಮಾಡುವದೆಂದರೆ ಪರದೇಶದ ಮಾಲಿನ ದಲಾಲಿ ಮಾಡುವ ವ್ಯಾಪಾರಿ ಅಥವಾ ಡಾಕ್ಟರರಾಗಬೇಕು, ಇಲ್ಲವೆ ಆ ಅಸಡ್ಡಾಳ ಕಾಯಿದೇ ಪುಸ್ತಕದ ಇಲ್ಲದ ಕಲಮು ಹುಡುಕಿ ಅಣ್ಣ ತಮ್ಮಂದಿರ ನ್ಯಾಯಗಳಿಗೆ ಪುಟ ಕೊಟ್ಟು, ಹಿಂಪೇ ಕೂಳಿನಿಂದ ಜೀವಿಸಬೇಕು. ಇದರಿಂದ ಸುಶಿಕ್ಷಿತ ವರ್ಗದಲ್ಲಿ ಅಸಮಾಧಾನ ಉಂಟಾಯಿತು. ದೇಶದಲ್ಲಿ ೧೦೦ಕ್ಕೆ ೫ ರಂತೆಯಾದರೂ ನೌಕರ ಜನರು ಇರುವರೋ ಇಲ್ಲವೋ ಸಂಶಯವೇ ಇದೆ. ಈ ಜನರ ಸಲುವಾಗಿ ಬೇಕಾಗುವ ಶಿಕ್ಷಣವೇ ಎಲ್ಲರಿಗೆ ಕೊಡಹತ್ತಿದ್ದರೆ ಹೀಗಾಗದೆ ಏನು ಮಾಡೀತು? ೯೫ ಜನಕ್ಕೆ ಅವಶ್ಯಕವಾದ ಕಲಾಕೌಶಲ್ಯಾದಿಗಳ ಶಿಕ್ಷಣದ ವ್ಯವಸ್ಥೆಯೇ ಇಲ್ಲ.

ಹಲವು ತರದ ವ್ಯಸನಗಳೂ, ಚೈನೀ ವಸ್ತುಗಳೂ, ದುಂದುಗಾರಿಕೆಯೂ ಜನರಲ್ಲಿ ಹೆಚ್ಚಾಗಹತ್ತಿತು. ಆಹಾರದ ಪದಾರ್ಥಗಳು ತುಟ್ಟಿಯಾದವು. ಹೈನವು ಕಡಿಮೆಯಾಯಿತು. ಸಾಂಸಾರಿಕ ಭಾರವನ್ನು ಹೇಗೆ ಸಾಗಿಸಬಹುದೆಂಬ ಚಿಂತೆಯಿಂದ ಸಾಮಾನ್ಯ

ಜನರು ಕ್ಷೀಣರಾಗಹತ್ತಿದರು. ಮನೆತನಕ್ಕೆ ಒಬ್ಬನು ದುಡಿದರೆ ಹಿಂದಕ್ಕೆ ಹತ್ತು ಜನರ ಸಂಸಾರವು ಸುಖವಾಗಿ ಸಾಗುತ್ತಿತ್ತು. ಆಲ್ಲಿ ಈಗ ಹೆಂಡರು ಮಕ್ಕಳೂ ಕೂಡಿ ದುಡಿದರೂ ಹೊಟ್ಟೆತುಂಬವದು ಕಠಿಣವಾಗಿದೆ. ಹೀಗಾಗಿ ಶಾರೀರಿಕ ಹ್ರಾಸವು ಹೆಚ್ಚಾಯಿತು. ಎಲ್ಲಿ ನೋಡಿದಲ್ಲಿ ಅಕಾಲದಲ್ಲಿ ಬಂದ ತಾರುಣ್ಯದ ನಾಶ ಮಾಡಿ ಸಪ್ಪನ್ನ ಮೋರೆ ಮಾಡಿ ಕೊಂಡು ತಿರುಗುವ ಸುದಾಮರಾಯರೇ ಕಾಣುವರು. ಹೀಗೆ ಶಾರೀರಿಕ ಮತ್ತು ಮಾನ ಸಿಕ ಹ್ರಾಸವು ದೇಶದಲ್ಲಿ ಹೆಚ್ಚಾಗಿ ಒಂದು ತರದ ಅಸಂತೋಷವು ದೇಶವನ್ನೆಲ್ಲ ವ್ಯಾಪಿ ಸಿತು.

" राजा कालस्य कारणम् " ದೇಶದ ಪರಿಸ್ಥಿತಿಗೆ ಬಹ್ವಂಶಗಿಂದ ರಾಜನೇ ಕಾರಣ ನೆಂಬುದನ್ನು ಜನರು ಮರೆತಿದ್ದರು. ಅದನ್ನು ವೀರಪಕ್ಷದವರು ವೀರತನದಿಂದ ತಿಳಿಸ ಹತ್ತಿದರು. ವೀರಪಕ್ಷದ ಉದಯಕಾಲವೆಂದರೆ ಕರ್ಝನ ಸಾಹೇಬರ ಇಲ್ಲಿಯ ಆಳಿ ಕೆಯ ಅಂತ್ಯಕಾಲವು. ಕರ್ಝನ ಸಾಹೇಬರು ಬಹು ಉಪದ್ವ್ಯಾಪೀ ವ್ಹಾಯಿಸರಾಯರು. ತಮ್ಮ ಆಳಿಕೆಯಲ್ಲಿ ಹಿಂದೂ ಜನರ ಅಪಮಾನವನ್ನು ಹಲವು ತರದಿಂದ ಮಾಡಿದರು. ಯುನಿವ್ಹರ್ಸಿಟಿ ಕಮಿಶನದಿಂದ ವಿದ್ಯಾಲಯಗಳ ಕಾರ್ಯಕ್ಷೇತ್ರವನ್ನು ಸಂಕುಚಿತ ಮಾಡಿದರು. ಪ್ರೆಸ ಆಕ್ಟಿಸಿಂದ ಲೇಖಕರ ಸ್ವಾತಂತ್ರ್ಯ ಹರಣ ಮಾಡಿದರು ಹೀಗೆ ಒಂದೇ, ಎರಡೇ, ಅನೇಕ ಕೃತ್ಯಗಳಿಂದ ಬಹುಜನ ಸಮಾಜಕ್ಕೆ ಅಪ್ರಿಯರಾದರು. ಇವರು ಮಾಡಿದ ಎಲ್ಲ ಕೃತ್ಯಗಳಲ್ಲಿ ಜನರನ್ನು ಹೆಚ್ಚು ರೊಚ್ಚಿಗೆಬ್ಬಿಸಲಿಕ್ಕೆ ಕಾರಣವಾದದ್ದು ವಂಗ ದೇಶದ ಭಂಗವು.

ವಂಗ ದೇಶದ ಭಂಗಮಾಡುವದರಲ್ಲಿ ಸರಕಾರದ ಒಂದು ಅಂತಸ್ಥ ಧೋರಣ ವಿತ್ತು. ಬಂಗಾಲದಲ್ಲಿ ಇತರ ಪ್ರಾಂತಗಳಿಗಿಂತ ಹೆಚ್ಚು ವಿದ್ಯಾ ಪ್ರಸಾರವಾಗಿತ್ತು. ಜನ ರಲ್ಲಿ ಜಾಗ್ರೃತಿಯಾಗಿತ್ತು. ಯಾಕಂದರೆ ಬ್ರಿಟಿಶರ ಪರಿಚಯವು ಆರಂಭಕ್ಕೆ ಬಂಗಾಲಿಗಳಿಗೇ ಆಗಿದೆ. ಬಂಗಾಲಿಗಳಲ್ಲಿ ಉಂಟಾದ ನವಜೀವನಜ್ಯೋತಿಯು ದಿನೇ ದಿನೇ ಹೆಚ್ಚು ಪ್ರಜ್ವಲಿತ ವಾಗಹತ್ತಿತು. ಇದು ಅಧಿಕಾರಿಗಳಿಗೆ ಹೇಗೆ ಸಹನವಾಗಬೇಕು? ಅವರು ಈ ಜ್ಯೋತಿ ಯನ್ನು ದೊಡ್ಡದು ಮಾಡಬೇಕೆಂದು ಎಣಿಕೆ ಹಾಕಹತ್ತಿದರು. ( ನಿಜವಾಗಿ ಅದು ದೊಡ್ಡ ದಾಯಿತು!) ಈ ನಾತವು ಬಂಗಾಲಿಗಳಿಗೆ ಬಡಿಯಿತು. ಈ ಕಾಲಕ್ಕೆ ಕರ್ಝನ್ ಸಾಹೇಬರು ವ್ಹಾಯಿಸರಾಯರು, ಅವರು ಬಲು ಸಕ್ಕರೆಯ ಮಾತಿನವರು. ಗೋಖಲೆಯಂಥವರನ್ನು ತಮ್ಮ ಸವಿಮಾತಿನಿಂದ ಬಲೆಯಲ್ಲಿ ಹಿಡಿದಂಥವರು. ಬಂಗಾಲ ವಿಭಾಗದ ಅವಶ್ಯಕತೆಯು ಮೇಲೆ ಬಣ್ಣದ ಮಾತುಗಳಿಂದ ತುಂಬಿದ ವ್ಯಾಖ್ಯಾನಗಳನ್ನು ಕೊಟ್ಟರು. ಮುಸಲ್ಮಾನರನ್ನು ಅನು ಕೂಲ ಮಾಡಿಕೊಳ್ಳಲಿಕ್ಕೆ ಹೆಣಗಿದರು ಒಬ್ಬ ಲೆಫ್ಟಿನಂಟಸಿಂದ ಇಡೀ ಬಂಗಾಲದ ಕೆಲಸ ನೋಡುವದಾಗುವದಿಲ್ಲವೆಂಬ ನೆಪದಿಂದ ಈ ವಿಭಾಗವು ಮಾಡಲ್ಪಡುತ್ತದೆಂದು ಅಧಿಕಾ ರಿಗಳು ಪ್ರತಿಪಾದಿಸುತ್ತಿದ್ದರು.

ಜನರ ಮನಸ್ಸಿಗೆ ಇದು ಎಳ್ಳಷ್ಟೂ ಬರಲಿಲ್ಲ ಪೂರ್ವ ಬಂಗಾಲವನ್ನು ಆಸಾಮುಕ್ಕೆ ಕೂಡಿಸುವದು ಗೊತ್ತಾಗಿತ್ತು. ಆಸಾಮುವು ಅಶಿಕ್ಷಿತರ ಪ್ರಾಂತವು. ಆದಕಾರಣ ಆಸಾಮುದ ಕೆಂಚರೊಡನೆ ಕೂಡುವದು ಪೂರ್ವ ಬಂಗಾಲಿಗಳಿಗೆ ಸೇರಲಿಲ್ಲ. ಕೆಲವು ಜನರಿಗೆ ಕಲಕತ್ತೆಯನ್ನು ಬಿಟ್ಟು ತಮ್ಮ ರಾಜಧಾನಿ ಡಾಕಾ ಪಟ್ಟಣವಾದದ್ದನ್ನು ನೋಡಿ ಕೆಡಕೆನಿಸಿತು. ಅನೇಕ ಶ್ರೀಮಂತರಿಗೆ ತಮ್ಮ ಹೊಲ ಮನೆಗಳು ಎರಡೂ ಭಾಗಗಳಲ್ಲಿ ಬರುತ್ತಿದ್ದುದರಿಂದ ನ್ಯಾಯಕೋರ್ಟಿಗೆ ಹೋಗುವದಾದಲ್ಲಿ ಕಲಕತ್ತೆ ಹಾಗೂ ಡಾಕಾಗಳೆಂಬ ಎರಡೂ ಕಡೆಗೆ ಓಡಾಡಬೇಕಾಗಹತ್ತಿತು. ಕಲಕತ್ತೆಯು ದೊಡ್ಡ ವ್ಯಾಪಾರದ ಸ್ಥಳವೂ ಹಲವು ಆಟನೋಟಗಳ ಆಗರವೂ ಆದುದರಿಂದ ಒಂದು ಕಾರ್ಯ ನಿಮಿತ್ತವಾಗಿ ಕಲಕತ್ತೆಗೆ ಹೋದರೆ ಎರಡು ಮೂರು ಕೆಲಸಗಳನ್ನು ಏಕಕಾಲಕ್ಕೆ ಮಾಡಿಕೊಳ್ಳಲಿಕ್ಕೆ ಬರುತ್ತಿತ್ತು ಡಾಕಾಕ್ಕೆ ನ್ಯಾಯಕೋರ್ಟಿಗೆ ಹೋದರೆ ಪರ್ಯತ್ತಿನ ಆಟನೋಟಗಳ ಸಲುವಾಗಿ ಕಲಕತ್ತೆಗೆ ಬರಬೇಕಾಗಹತ್ತಿತು ಹೀಗೆ ಒಂದಿಲ್ಲೊಂದು ರೀತಿಯಿಂದ ಶ್ರೀಮಂತರಿಂದ ಬಡವರ ವರೆಗೆ ಎಲ್ಲರೂ ಕೆಣಕಲ್ಪಟ್ಟರು. ಆಗ ಜನರು ದೊಡ್ಡ ಸಭೆಗಳನ್ನು ನೆರಿಸಿ, ಠರಾವು ಪಾಸು ಮಾಡಿ, ಸರಕಾರಕ್ಕೆ ವಂಗದೇಶದ ಭಂಗ ಮಾಡಬಾರದೆಂದು ಬೇಡಿಕೊಂಡರು ಆದರೆ ಎಲ್ಲವೂ ನಿರರ್ಥಕವಾಯಿತು. ಸುಡುವದರಲ್ಲಿ ಹುಲ್ಲು ಹಾಕುವಂತೆ ಕರ್ಝನ ಸಾಹೇಬರು ಬಂಗಾಲಿಗಳು ಕೈಲಾಗದ ಹೇಡಿಗಳೆಂದು ದೂಷಿಸಿದರು. ವರಿಷ್ಠ ಅಧಿಕಾರಿಯೇ ಪ್ರಜಾಪೀಡನೆಗೆ ಅನುಕೂಲವಿದ್ದ ಬಳಿಕ ಕೆಳಗಿನ ಅಧಿಕಾರಿಗಳಿಗೆ ಕೇಳುವವರಾರುಳಿವರು? ಕೋತಿಯ ಕೈಯಲ್ಲಿ ಕೊಳ್ಳಿ ಕೊಟ್ಟಂತೆಯಾಯಿತು. ವಂಗೀಯರು ೭೦ ಸಾವಿರ ಸಹಿಗಳ ದೊಡ್ಡ ಹೊರೆಯನ್ನು ಬಂಗಾಲದ ವಿಭಾಗ ಮಾಡಬಾರದೆಂಬ ಬಗ್ಗೆ ಸರಕಾರಕ್ಕೆ ಕಳಿಸಿದರು. ಎಲ್ಲವೂ ವ್ಯರ್ಥ. ೧೯೦೫ನೆಯ ಇಸವಿಯ ೧೬ನೆಯ ಅಗಸ್ಟವು ಸಮಿಪಿಸಿತು ದೇಶದಲ್ಲಿ ಒಂದೇ ಗೊಂದಲವೆದ್ದಿತು. ಸರಕಾರದವರು ೧೬ನೆಯ ಅಗಸ್ಟಕ್ಕೆ ಬಂಗಾಲದ ವಿಭಾಗವಾಯಿತೆಂದು ಪ್ರಕಟಿಸಿದರು. ಬಂಗಾಲಿಗಳು ಅವಕ್ಕೂ ಮುಂಚಿತವಾಗಿಯೇ ಅಂದರೆ ೭ನೆಯ ಅಗಸ್ಟಕ್ಕೆ ಸಭೆ ಮಾಡಿ ಸರಕಾರದವರು ತಮ್ಮ ಮಾತಿಗೆ ಮಾನ ಕೊಡದಿದ್ದರೆ ಬ್ರಿಟಿಶ ಮಾಲಿಗೆ ಬಹಿಷ್ಕಾರ ಹಾಕುವದನ್ನು ನಿಶ್ಚಯಿಸಿ ಸಾವಿರಾರು ಜನರು ಹಾಗೆ ಆಣೆ ಇಟ್ಟುಕೊಂಡರು. ೧೬ನೆಯ ಅಗಸ್ಟವು ರಾಷ್ಟ್ರೀಯ ಸೂತಕದ ದಿನವೆಂದು ಎಲ್ಲರೂ ಪಾಲಿಸಹತ್ತಿದರು. ಪ್ರತಿಯೊಂದು ಊರಲ್ಲಿ ಎಲ್ಲ ಜನರು ಅಂದು ಒಟ್ಟಿಗೆ ಕೂಡಿ ಬೊಕ್ಕನೆತ್ತಿಯಿಂದ ಪಾದರಕ್ಷೆಗಳಿಲ್ಲದೆ ಗಂಗೆಯ ಧಡಕ್ಕೆ ಹೋಗಿ ಸ್ನಾನ ಮಾಡಿ ಉಪವಾಸದಿಂದಿರುತ್ತಿದ್ದರು. ಈ ಕ್ರಮವು ಮುಂದೆ ಬಂಗಾಲದ ವಿಭಾಗಣೆಯು ರದ್ದು ಆಗುವವರೆಗೆ ನಡೆದಿತ್ತು.

ಸರಕಾರದವರ ಕಲ್ಪನೆಯೇನು, ಈ ಜನರಲ್ಲಿ ಶಸ್ತ್ರಾಸ್ತ್ರಗಳಿಲ್ಲ; ಇವರಿಗೆ ಪರರಾಷ್ಟ್ರಗಳ ಸಹಾಯವಿಲ್ಲ, ಇವರಲ್ಲಿ ಒಕ್ಕಟ್ಟು ಸಹ ಇಲ್ಲ; ಒಂದು ಜಾತಿಯವರು ಮತ್ತೊಂದು ಜಾತಿ

ಯ ವಿರುದ್ಧವಾಗಿ ಎಗ್ಗು ಇಲ್ಲದೆ ಟಾಟಿಯನ್ನು ಹೇಳಲಿಕ್ಕೆ, ಅವರನ್ನು ಮುರಿಯಲಿಕ್ಕೆ ಸಹ ಸಹಾಯವಾಡುವರು ಅಂಥ ಬಳಿಕ ನಮ್ಮ ಮನಸ್ಸಿಗೆ ಬಂದುದನ್ನು ಯಾಕೆ ಮಾಡದೇ ಬಿಡ ಬೇಕು? ಎಂಬ ವಿಚಾರವಿತ್ತು. "ಇಂದು ನಾವು ಯಾವದೊಂದನ್ನು ಮಾಡುವದು ಗೊತ್ತು ಮಾಡಿ ಜನರು ಬೇಡೆಂದೊಡನೆ ಬಿಟ್ಟರೆ ಅವರು (ಜನರು) ಏರಿ ಕೂಡ್ರುವರೆಂದು" ಸರಕಾರವು ತಿಳಿದಿತ್ತು. ಹೀಗೆ, ಸರಕಾರವು ಮಾಡಿಯೇ ತೀರೇನೆಂಬ ಹಟಕ್ಕೆ ಬಿತ್ತು, ಜನರು ಸರಕಾರದ ವರಿಂದ ಇದನ್ನು ರದ್ದು ಮಾಡಿಸೇ ಬಿಟ್ಟೇವೆಂಬ ಆಗ್ರಹಕ್ಕೆ ಬಿದ್ದರು. ತಿರಗಿಮುರಗಿ ಜನರು ಮಾಡುವದೇನು, ಬೈಲು ಸ್ಥಳ ನೋಡಿ ಸಭೆಗೂಡಿಸುವದು, ಆವೇಶಪೂರ್ಣ ನಾಲ್ಕು ವ್ಯಾಖ್ಯಾನಗಳನ್ನು ಕೊಡುವದು, ಕೆಲವು ಠರಾವುಗಳನ್ನು ಪಾಸು ಮಾಡುವದು, ಆಯಿತು, ಮತ್ತೇನು? ಇದರಿಂದ ಆಗಬೇಕಾದುದೇನು? ಇಷ್ಟು ದಿನ ಕಾಂಗ್ರೆಸ್ಸು ಕೂಡಿತು. ಅಲ್ಲಿ ಪಾಸಾದ ಠರಾವುಗಳೆಂದರೆ ಸರಕಾರದ ಅನ್ಯಾಯಗಳ ಪಟ್ಟಿಯೇ ಎಂದು ಹೇಳಬಹುದು. ಅನೇಕ ಠರಾವುಗಳಾದವು. ವಕ್ತೃತ್ವಪೂರ್ಣ ಭಾಷಣಗಳಾದವು. ಪರಿಣಾಮವೇನಾಯಿತು?

ದೃಶ್ಯ ಪರಿಣಾಮವಿಲ್ಲದಿದ್ದರೂ ಕೆಲವು ಲಾಭಗಳಾದವು ಸುಳ್ಳಲ್ಲ. ಬಂಗಾಲಿಗಳು ಇನ್ನೂ ಹೆಚ್ಚು ಜಾಗೃತಿಯನ್ನು ಮಾಡಲಿಕ್ಕೆ ಟೊಂಕ ಕಟ್ಟಿದರು. ರಾಜರ ಸಿಂಹಾಸನವು ಪ್ರಜೆಗಳ ಸಂತೋಷವೆಂಬ ನೆಲಗಟ್ಟಿನ ಮೇಲೆ ಕಟ್ಟಲ್ಪಟ್ಟಿರುತ್ತದೆ ರಾಜರಿಗೆ ಎಚ್ಚರದಮೇಲೆತರಲಿಕ್ಕೆ ಲೋಕಜಾಗೃತಿಯೇ ಬಲವಾದ ಉಪಾಯವು. ಈ ಕಾರ್ಯಕ್ಕಾಗಿ ಬಂಗಾಲದಲ್ಲಿ ಬೇರೆ ಬೇರೆ ಪ್ರಕಾರದ ಕರ್ತೃತ್ವ ಶಕ್ತಿಯುಳ್ಳಂಥ ಪುರುಷರು ತಮ್ಮ ತಮ ಒಲವಿನಂತೆ ವಿವಿಧ ಕಾರ್ಯಗಳಲ್ಲಿ ಆಸಕ್ತರಾದರು ಬಾಬೂ ಸುರೇಂದ್ರನಾಥರು ಸ್ಫುರಣ ಗೊಡುವ ವಕ್ತೃತ್ವದಿಂದಲೂ, ಬ್ರಹ್ಮಬಂಧೋಪಾಧ್ಯಾಯರು ತೇಜಸ್ವಿಯಾದ ಲೇಖಗಳಿಂದ ಲೂ, ಅಶ್ವಿನೀಕುಮಾರರು ತಮ್ಮ ಪ್ರತ್ಯಕ್ಷ ಕೃತಿಯಿಂದಲೂ ಬಂಗಾಲ ದೇಶದ ಉದ್ಧಾರಕ್ಕೆ ಹೆಣಗಹತ್ತಿದರು. ಬಂಗಾಲಿಗಳ ಅಂತಃಕರಣದಲ್ಲಿ ತೊಳಗಿ ಬೆಳಗುತ್ತಿದ್ದ ಈ ನವಜೀವನ ಜ್ಯೋತಿಗೆ ಇತರ ಪ್ರಾಂತದ ಮುಖಂಡರು ತಮ್ಮ ಅಂತಃಕರಣಸ್ಥ ಜ್ಯೋತಿಗಳನ್ನು ಹಚ್ಚಿ ತಮ್ಮ ತಮ್ಮ ಪ್ರಾಂತಗಳನ್ನು ಪ್ರಕಾಶಿತ ಮಾಡಿದರು. ಹೀಗಾಗಿ ಇಡೀ ಹಿಂದುಸ್ಥಾನವು ನವ ಚೈತನ್ಯದಿಂದ ತನ್ನ ಉದ್ಧಾರಕ್ಕೆ ಯತ್ನಿಸಹತ್ತಿತು. ಈ ಯಜ್ಞಕರ್ಮದಲ್ಲಿ ಶ್ರೀ ಅರವಿಂದ ಘೋಸರವರೂ ಬಹು ದೊಡ್ಡ ಭಾಗವನ್ನು ತಕ್ಕೊಂಡಿದ್ದರು. ಅದರ ವರ್ಣನವು ಯಥಾಕ್ರಮವಾಗಿ ಮುಂದೆ ಬರುವದು.

ವೃತ್ತಪತ್ರಗಳು ಜನರಿಗೆ ಎಚ್ಚರಿಸಹತ್ತಿದವು. ವ್ಯಾಖ್ಯಾನಕಾರರು ಸ್ಫೂರ್ತಿಗೊಡಹತ್ತಿದರು. ಹೀಗೆ ವಾಙ್ಮಯಸೇವೆಯು ಬಹುವಿಧವಾಗಿ ಸಾಗಿತು. ಮೊದಲು ಕಲ್ಪನೆ, ಆಮೇಲೆ ವಿಚಾರ, ಬಳಿಕ ಕೃತಿ ಈ ಕ್ರಮದಂತೆ ಮೊದಲು ವಾಙ್ಮಯಸೇವೆಯಿಂದ ಮುಖಂಡರು ಜನರಲ್ಲಿ ಹೊಸ ಕಲ್ಪನೆಗಳನ್ನು ಪಸರಿಸಿದರು; ಮಾನಸಿಕ ದಾಸ್ಯವಿಮೋಚನ ಮಾಡಿದರು. ಬ್ರಿಟಿಶ ಸರಕಾರದ ಬಣ್ಣದ ಮಾತುಗಳ ಮಬ್ಬಿಗೆ, ಬಣ್ಣದ ಸುಧಾರಣೆಗಳ ಮೋಹಕ್ಕೆ ಸಿಕ್ಕು ಗತಿ

ನಾಣಿಪ ಜನರಿಗೆ ಎಚ್ಚರಿಸಿದರು. ಪಾಶ್ಚಿಮಾತ್ಯರಂತೆ ತಮಗೂ ಶಿಕ್ಷಣ ಸಿಕ್ಕರೆ ಬೇಕಾದಂಥ ಹೊಸ ಶೋಧಗಳನ್ನು ಮಾಡುವ ಯೋಗ್ಯತೆಯು ತಮ್ಮ ಜನರಲ್ಲಿರುವದೆಂಬುದನ್ನು ಸಿದ್ಧಪಡಿಸಿದರು "ಶೋಧಗಳನ್ನು ಮಾಡಿದರೆ ಇಂಗ್ಲೀಶರೇ ಮಾಡಬೇಕು: ಆಳುವವರು ಯುರೋಪಿಯರು, ಆಳಿಸಿಕೊಳ್ಳತಕ್ಕವರು ತಾವು" ಎಂಬ ಮುಂತಾದ ಆತ್ಮವಿನಾಶಕ ಕಲ್ಪನೆಗಳನ್ನು ಬಹು ವಿಧದ ಉಪಾಯಗಳಿಂದ ಜನರೊಳಗಿಂದ ಓಡಿಸಿಬಿಟ್ಟರು. ಹುಡುಗರು ರಾಜಕಾರಣದಲ್ಲಿ ಭಾಗ ತಕ್ಕೊಳ್ಳುವರೆಂಬ ನಿಮಿತ್ತದಿಂದ ಸರಕಾರೀ ಶಾಲೆಗಳೊಳಗಿಂದ ಅವರಿಗೆ ಅರ್ಧ ಚಂದ್ರವು ಸಿಗಹತ್ತಿತು. ಆಗ ಈ ಸಂಧಿಯನ್ನು ಸಾಧಿಸಿ ರಾಷ್ಟ್ರೀಯ ಶಾಲೆಗಳು ಹೊರಟವು ಈ ಶಾಲೆಗಳು ಸರಕಾರೀ ಶಾಲೆಗಳಿಂದ ಬಹಿಷ್ಕೃತರಾದ ವಿದ್ಯಾರ್ಥಿಗಳನ್ನು ತಕ್ಕೊಳ್ಳುವದಕ್ಕಾಗಿಯೇ ಮಾತ್ರ ಸ್ಥಾಪಿಸಲ್ಪಟ್ಟಿದ್ದಿಲ್ಲ ಹೊಸ ಮಾದರಿಯ ನವಜೀವನದಾಯಿಯಾದ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕೆಂಬ ಉದ್ದೇಶವು ಅವರಲ್ಲಿ ಮುಖ್ಯವಾಗಿತ್ತು. ಸರಕಾರೀ ಶಾಲೆಗಳಲ್ಲಿ ಕಲಿಯುವದರಿಂದ ಮಕ್ಕಳಲ್ಲಿ ಮಾನಸಿಕ ದೌರ್ಬಲ್ಯವುಂಟಾಗುವದು; ಶಾರೀರಿಕ ಅವನತಿಯಾಗುವದು. ಈ ದೋಷಗಳನ್ನು ತೆಗೆದುಹಾಕುವದು ಈ ರಾಷ್ಟ್ರೀಯ ಶಾಲೆಗಳ ಉದ್ದೇಶವಿತ್ತು. ರಾಜಾ ಸುಬೋಧಚಂದ್ರ ಮಲಿಕ ಎಂಬ ಶ್ರೀಮಂತ ಗೃಹಸ್ಥನು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಕಾರ್ಯಕ್ಕೆ ಆರಂಭ ಮಾಡಿದನು. ರಾಷ್ಟ್ರೀಯ ಶಿಕ್ಷಣ ಮಂಡಲವು ಸ್ಥಾಪಿಸಲ್ಪಟ್ಟು ವಿದ್ಯಾಲಯವು ಹೊರಟಿತು. ಶ್ರೀ ಅರವಿಂದ ಘೋಷರು ಈ ವಿದ್ಯಾಲಯದ ಆಚಾರ್ಯ (Principal) ರಾದರು.

ವಾಙ್ಮಯಾತ್ಮಕ ಸೇವೆ ಮಾಡಿ ಜನರ ಬೌದ್ಧಿಕ ದಾಸ್ಯವನ್ನು ನಾಶಮಾಡಿದ ಬಳಿಕ ಮುಖಂಡರು ಇತರ ಕಾರ್ಯಗಳನ್ನು ಕೈಕೊಂಡರು. ಸ್ವದೇಶೀ ವಸ್ತುಗಳ ಪ್ರಚಾರವು ದೇಶದಲ್ಲಿ ಹೆಚ್ಚಾಗಹತ್ತಿದ್ದರಿಂದ ಅನೇಕ ದೇಶೀ ಉದ್ಯೋಗಗಳು ಹೊರಟವು. ಔದ್ಯೋಗಿಕ ಉನ್ನತಿಯ ಕಡೆಗೆ ಜನರ ಲಕ್ಷ್ಯವು ಹೆಚ್ಚಾಗಹತ್ತಿತು. ದೇಶೀ ಸಕ್ಕರೆ, ದೇಶೀ ಅರಿವೆ, ದೇಶೀ ಬಳಿ ಹೀಗೆ ಆಯುಷ್ಯಕ್ಕೆ ಹತ್ತುವ ಎಲ್ಲ ವಸ್ತುಗಳನ್ನು ಇಲ್ಲಿಯೇ ತಯಾರಿಸುವ ಕಾರಖಾನೆಗಳನ್ನು ತೆಗೆಯಲಿಕ್ಕೆ ಕಂಪನಿಗಳು ಹೊರಟವು. ಜನರಲ್ಲಿ ಮಾನಸಿಕ ದೌರ್ಬಲ್ಯವಂತೆ ಶಾರೀರಿಕ ದೌರ್ಬಲ್ಯವೂ ಹೆಚ್ಚಾಗುತ್ತಲಿದ್ದುದರಿಂದ ಅದನ್ನು ತಡೆಯಲಿಕ್ಕೆ ವ್ಯಾಯಾಮ ಶಾಲೆಗಳು ಹೊರಟವು. ಜಾತ್ರೆಗಳಲ್ಲಿ ಕುಸ್ತಿಗಳಿಗೆ ಪ್ರಾಧಾನ್ಯವು ಬರಹತ್ತಿತು. ತರುಣರು ಸ್ವಯಂಸೇವಕರಾಗಿ ಜನರಿಗೆ ಅನುವು ಆಪತ್ತುಗಳಲ್ಲಿ ಸಹಾಯ ಮಾಡಲಿಕ್ಕೆ ಸಂಘಗಳನ್ನು ಸ್ಥಾಪಿಸಿದರು. ಊರ ಜಗಳಗಳು ಹೊರಗೆ ಹೋಗಬಾರದೆಂದು ಗ್ರಾಮ ಪಂಚಾಯತಿಗಳ ಸ್ಥಾಪನೆಗೆ ಅನೇಕರು ಯತ್ನಿಸಿದರು. ಹೀಗೆ ಎಲ್ಲ ದಿಕ್ಕಿನಿಂದಲೂ ದೇಶದೊಳಗೆ ಜಾಗೃತಿಯಾಗಿ ಸುಧಾರಣೆಯಾಗಹತ್ತಿತು. ಬಾರಿಸಾಲ ಜಿಲ್ಲೆಯಲ್ಲಿಯ ಒಂದು ಸಂಘದ ಉದಾಹರಣೆಯನ್ನು ಇಲ್ಲಿ ಕೊಡಬಹುದು ಅಲ್ಲಿ "ಸ್ವದೇಶ ಬಾಂಧವ ಸಮಿತಿ" ಎಂಬ ಸಂಘವು ಹೊರಟಿತು. ಅದರ ೧೫೦ ಶಾಖೆಗಳು ಬೇರೆ ಬೇರೆ ಕಡೆಯಲ್ಲಿ ಹೊರಟವು ಊರೂರಿಗೆ ಹೋಗಿ

ಉಪದೇಶ ಮಾಡಲಿಕ್ಕೆ ನೂರು ಕಾಯಂ ಉಪದೇಶಕರನ್ನಿಟ್ಟಿದ್ದರು ನೂರಾರು ಸಭೆಗಳನ್ನು ಮಾಡಿ ಜನರಿಗೆ ಪರಿಸ್ಥಿತಿಯು ಜ್ಞಾನಮಾಡಿಕೊಟ್ಟರು ಪರದೇಶೀ ಸಕ್ಕರೆಗೆ ಬಹಿಷ್ಕಾರ ಹಾಕಿದರು. ತಮ್ಮ ಭಾಗದಲ್ಲಿ ಹೆಂಡದ ವ್ಯಸನವು ಉಳಿಯಬಾರದೆಂದು ಅವಿಶ್ರಾಂತ ಶ್ರಮಬಟ್ಟರು. ಇದರಿಂದ ಸರಕಾರದ ೨೦ ಸಾವಿರದ ಹಾನಿಯಾಯಿತಂತೆ! ಸ್ವದೇಶೀ ವ್ರತವನ್ನು ಮುರಿದ ೯೦ ಜನರಿಗೆ ಬಹಿಷ್ಕೃತ ಮಾಡಿದರು ಇಷ್ಟು ಅಧಿಕಾರವು ಬೆಳೆದಿತ್ತು. ಪಂಚರ ವತಿಯಿಂದ ಅನೇಕ ವ್ಯಾಜ್ಯಗಳನ್ನು ತೀರಿಸಿದರು. ಅಲ್ಪ ಖರ್ಚಿನಲ್ಲಿ ಸರಿಯಾದ ನ್ಯಾಯವು ಸಿಗುತ್ತಿದ್ದುದರಿಂದ ಜನರು ಇಲ್ಲಿಯೇ ತಮ್ಮ ನ್ಯಾಯಗಳನ್ನು ತೀರಿಸಿಕೊಳ್ಳಲಿಕ್ಕೆ ಬರುತ್ತಿದ್ದರು. ಇಲ್ಲಿ ತೀರಿಸಲ್ಪಟ್ಟ ವ್ಯಾಜ್ಯಗಳಲ್ಲಿ ಒಂದು ೯೦ ಸಾವಿರದ್ದು, ಮತ್ತೊಂದು ೬೫ ಸಾವಿರದ್ದು ಇತ್ತು. ಹೀಗೆ ಸರಕಾರದ ಕೋರ್ಟುಗಳ ಮೇಲಿನ ಪತ್ತು ಕಡಿಮೆಯಾಗಹತ್ತಿತು.

ಕಲಕತ್ತೆಯಲ್ಲಿ ೧೯೦೬ರಲ್ಲಿ ನೆರೆದ ಪಿತಾಮಹ ದಾದಾಭಾಯಿ ನವರೋಜಿಗಳ ಅಧ್ಯಕ್ಷತೆಯ ಕೆಳಗೆ ಆದ ರಾಷ್ಟ್ರೀಯ ಸಭೆಯಲ್ಲಿ ತರುಣ ವೀರ ಪಕ್ಷದ ಜಯವಾಗಿ ಸ್ವರಾಜ್ಯವು ಹಿಂದುಸ್ತಾನದ ಧ್ಯೇಯವೆಂದು ನಿಶ್ಚಿತವಾಯಿತು. ಸ್ವರಾಜ್ಯಸಂಪಾದನೆಯ ಸಲುವಾಗಿ ಬಹಿಷ್ಕಾರ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣಗಳೆಂಬ ಉಪಾಯಗಳಿಂದ ಕಾರ್ಯಕ್ಕೆ ಹತ್ತಬೇಕೆಂದು ಗೊತ್ತಾಯಿತು. ಈಗಿನ ಅಸಹಕಾರವು ಹಿಂದಕ್ಕೆ ಹೊರಟ ಬಹಿಷ್ಕಾರ ಯೋಗದ ತಿದ್ದಿಬೆಳಿಸಿದ ಹೊಸ ಆವೃತ್ತಿಯೆಂದೇ ಹೇಳಬಹುದು. ಈ ಠರಾವುಗಳನ್ನು ಪಾಸು ಮಾಡಿಕೊಳ್ಳಲಿಕ್ಕೆ ವೃದ್ಧ ಕಾಂಗ್ರೆಸ ಭಕ್ತರೊಡನೆ ವೀರಪಕ್ಷದವರಿಗೆ ಬಹು ಕಲಿತನದಿಂದ ಕಾದಬೇಕಾಯಿತು. ವೀರಪಕ್ಷದ ಅಗ್ರಣಿಗಳಾದ ಲೋಕಮಾನ್ಯ ತಿಲಕರ ಸಂಗಡ ಬಂಗಾಲದ ವತಿಯಿಂದ ಬೆಂಬಲಕ್ಕಾಗಿ ಬಿಪಿನಚಂದ್ರಪಾಲರೂ. ಅರವಿಂದ ಘೋಸರೂ ಪ್ರಾಮುಖ್ಯವಾಗಿ ಇದ್ದರು.

ವಂಗ–ಭಂಗದ ನಿಮಿತ್ತದಿಂದ ದೇಶದಲ್ಲಿ ಉತ್ಪನ್ನವಾದ ರಾಷ್ಟ್ರೀಯತ್ವದ ಭಾವನೆಯು ಹಾ ಹಾ ಅನ್ನುವದರಲ್ಲಿ ದೇಶವನ್ನೆಲ್ಲ ವ್ಯಾಪಿಸಿತು. ಜನರು ಸ್ವಾವಲಂಬಿಗಳಾಗಹತ್ತಿದರು. ಪರದೇಶಿ ಮಾಲಿನ ಮೇಲೆ ಬಹಿಷ್ಕಾರವನ್ನು ಹಾಕಿದ್ದರಿಂದ ಯುರೋಪದವರ ಹೊಟ್ಟೆಯ ಮೇಲೆ ಕಾಲು ಬಂತು. ಜನರಲ್ಲಿ ಆತ್ಮ ವಿಶ್ವಾಸವು ಉಂಟಾದುದರಿಂದ ಸರಕಾರೀ ಅಧಿಕಾರಿಗಳಿಗೆ ಮೊದಲಿಗಿದ್ದ ಮಾನವು ಕಡಿಮೆಯಾಗಹತ್ತಿತು. ಸರಕಾರೀ ನೌಕರಿಗೆ ಮೊದಲಿಗಿದ್ದ ಮಾನವು ಹೋಗಿ ನೌಕರೀ ಮಾಡುವದು ಹೀನತನದ ಲಕ್ಷಣವೆಂದು ಜನರ ಗ್ರಹಿಕೆಯಾಗಹತ್ತಿತು ಇದು ಸರಕಾರಕ್ಕೆ ಹೇಗೆ ಸೇರಬೇಕು? ಜನರು ತಮ್ಮ ಹೊರ್ತು ಗತಿಯಿಲ್ಲವೆಂದು ನಂಬಿ ತಮ್ಮ ಮೇಲೆ ವಿಶ್ವಾಸದಿಂದ ಹೀಗೇ ಗುಲಾಮರಾಗಿರಬೇಕೆಂದು ಸರಕಾರದ ಇಚ್ಛೆ ಇದಕ್ಕೆ ವಿಪರೀತವಾಗಿ ಅವರು ಜನರೂ ಸ್ವಾವಲಂಬಿಗಳಾಗಿ ಸ್ವಾತಂತ್ರ್ಯಾಪೇಕ್ಷೆಯುಳ್ಳವರಾದರೆ ಸರಕಾರದ ಮನಸ್ಸಿಗೆ ಹೇಗೆ ಬರಬೇಕು?

ರಾಷ್ಟ್ರೀಯತ್ವದ ಜ್ಯೋತಿಯನ್ನು ನೊಂದಿಸಲಿಕ್ಕೆ ಅಧಿಕಾರಿಗಳು ದಬ್ಬಾಳಿಕೆಯನ್ನು ಆರಂಭಿಸಿದರು. ಭೇದ ನೀತಿಯನ್ನು ಉಪಯೋಗಿಸಿ ಮುಸಲ್ಮಾನರನ್ನು ತಮ್ಮ ಪಕ್ಷಕ್ಕೆ ಎಳೆಯಲಿಕ್ಕೆ ನೋಡಿದರು. ೧೯೦೬ರ ಮಾರ್ಚ ತಿಂಗಳಲ್ಲಿ ಆದ ಬಾರಿಸಾಲದ ಪ್ರಾಂತಿಕ ಸಭೆಯನ್ನು ಚದರಿಸಿದರು. ಸುರೇಂದ್ರ ಬಾಬುಗಳಂಥ ಪ್ರಸಿದ್ಧ ಮುಖಂಡರಿಗೆ ಕೋರ್ಟಿನ ಅಪಮಾನ ಮಾಡಿದ ನಿಮಿತ್ತದಿಂದ ೨೦೦ ರೂ. ಗಳ ದಂಡಮಾಡಿದರು. ವಂದೇ ಮಾತರಂ ಎಂದು ಗರ್ಜಿಸಿದ್ದಕ್ಕಾಗಿ ವಿದ್ಯಾರ್ಥಿಗಳಿಗೆ ಸಾಲೆಯಿಂದ ಹೊರಗೆ ಹಾಕಿದರು, ಫಟಕಿಯ ಶಿಕ್ಷೆಯನ್ನು ಕೊಟ್ಟರು. ಪಿಶಾಚಿಗಳಿಗೆ ರಾಮನಾಮದ ಶ್ರವಣದಿಂದ ನಡಗು ಹುಟ್ಟುವಂತೆ ಈ ವಂದೇಮಾತರಮ್‌ದ ಗರ್ಜನೆಯಿಂದ ಅಧಿಕಾರಿಗಳ ತಲೆ ತಿರುಗುತ್ತಿತ್ತು. ಅಧಿಕಾರಿಗಳು ಇಷ್ಟು ಅಸಮ್ಮತಿಯನ್ನು ತೋರಿಸಿದ್ದರಿಂದ ಈ ಶಬ್ದಕ್ಕೆ ಒಂದು ತರದ ಗೌರವವು ಬಂತು. ದೇಶದಲ್ಲಿ ಎಲ್ಲ ಕಡೆಗೆ ವಂದೇ ಮಾತರಮ್‌ದ ಘೋಷವು ನಡೆಯಿತು ಅದಕ್ಕೆ ಮಂತ್ರದ ಸ್ವರೂಪವು ಬಂತು. ವೇದದ ಸಾರಸರ್ವಸ್ವವು ಹೇಗೆ ಓಂಕಾರದಲ್ಲಿ ಬರುವದೋ ಹಾಗೆ ರಾಜಕಾರಣದ ರಹಸ್ಯವು ವಂದೇಮಾತರಮ್‌ದಲ್ಲಿ ಬಂತು ಈ ಶಬ್ದವು ರಾಜಕಾರಣದೊಳಗಿನ ಪ್ರಣವಮಂತ್ರವಾಯಿತು!

ರಾಜಕೀಯ ಸಭೆಗಳನ್ನು ಬಂದುಮಾಡಿದರು. ಪ್ರೆಸ್ಸುಗಳನ್ನು ಜಪ್ತಮಾಡಿದರು. ಯಾಕಂದರೆ ಅವು ಜನರ ಆಕಾಂಕ್ಷೆಗಳಿಗೆ ಮೂರ್ತಸ್ವರೂಪವನ್ನು ಕೊಡುತ್ತವೆ "ಮೂಲೇ ಕುಠಾರಃ" ಎಂಬಂತೆ ಪ್ರೆಸ್ಸುಗಳನ್ನೇ ನಾಶಮಾಡಿದರೆ ಆಯಿತೆಂದು ಅಧಿಕಾರಿಗಳು ತಿಳಿದರು. ಸಂಪಾದಕರ ಮೇಲೆ ರಾಜದ್ರೋಹದ ಆರೋಪಗಳನ್ನು ಹೊರಿಸಿ ಖಟ್ಲೆಮಾಡಹತ್ತಿದರು. ಯಾವ ಪೋಲೀಸರನ್ನು ದೇಶದ ಸಂರಕ್ಷಣೆಗೆ ನೇಮಿಸುವದುಂಟೋ ಅಂಥ ಪೋಲೀಸರನ್ನೇ ದೇಶದ ಅಭ್ಯುದಯದ ಸಲುವಾಗಿ ಆತ್ಮಯಜ್ಞಮಾಡಿದ ನಿಸ್ವಾರ್ಥಿಗಳಾದ ಮುಖಂಡರನ್ನು ಕಾಡಲಿಕ್ಕೆ ಸರಕಾರದವರು ಉಪಯೋಗಿಸಹತ್ತಿದರು ಮತ್ತು ನಿರ್ಲಜ್ಜರೂ ಸ್ವಾಭಿಮಾನಶೂನ್ಯರೂ, ತಮ್ಮ ಗೇಣು ಹೊಟ್ಟೆಗಾಗಿ ದೇಶದ್ರೋಹದ ಮಹಾಪಾತಕವನ್ನು ಮಾಡಲಿಕ್ಕೆ ಹೇಸದವರೂ ಆದಂಥ ಅಧಮ ಅಧಿಕಾರಿಗಳು ಪರಿಪರಿಯಿಂದ ಪ್ರಜಗಳನ್ನು ಪೀಡಿಸುವದರಲ್ಲಿ ಆನಂದಬಡಹತ್ತಿದರು!

ಬಂಗಾಲಿಗಳು ಅಧಿಕಾರಿಗಳ ಈ ನಿಂದ್ಯವರ್ತನಕ್ಕೆ ಉತ್ತರವೆಂದು ತಮ್ಮ ಅಂಗೀಕೃತಕಾರ್ಯವನ್ನು ಇಮ್ಮಡಿ ಉತ್ಸಾಹದಿಂದ ಮುಂದೆ ಸಾಗಿಸಿದರು. ಒಬ್ಬ ಸಂಪಾದಕನು ಹೋದರೆ ಆ ಸ್ಥಳಕ್ಕೆ ಮತ್ತೊಬ್ಬ ಸಂಪಾದಕನು ಕೂಡಲೆ ಬರುತ್ತಿದ್ದನು. ಒಮ್ಮೆ ೧೪ ವರುಷದ ಹುಡುಗನು ಡಿಕ್ಲೇರೇಶನದ ಸಲುವಾಗಿ ಮ್ಯಾಜಿಸ್ಟ್ರೇಟರ ಕಡೆಗೆ ಹೋಗಿ ಪರವಾನಗಿ ಬೇಡಿದನು! ಈ ಕಾಲಕ್ಕೆ ಬಂಗಾಲದಲ್ಲಿ ವೃತ್ತಪತ್ರಗಳಿಗೆ ಉಕ್ಕು ಬಂದಿತ್ತು. ಸ್ಫೂರ್ತಿದಾಯಕ ವಿಚಾರಗಳಿಂದ ತುಂಬಿ ತುಳುಕುವ ವೃತ್ತಪತ್ರಗಳೂ, ಮಾಸಪತ್ರಿಕೆಗಳೂ ತೆರಪಿಲ್ಲದೆ ಹೊರಡುತ್ತಿದ್ದವು.

ರಾಷ್ಟ್ರೀಯ ವಿದ್ಯಾಲಯದ ಆಚಾರ್ಯರಾಗಿ ಕಲಕತ್ತೆಯಲ್ಲಿ ಶ್ರೀ ಅರವಿಂದ ಘೋಸರು ಕೆಲಸಮಾಡಹತ್ತಿ ೪-೬ ತಿಂಗಳು ಆಗಿದ್ದಿಲ್ಲ. ಇಷ್ಟರಲ್ಲಿ ಇವರ ಕೀರ್ತಿ ಸುಗಂಧವು ದೇಶದ ಎಲ್ಲ ಭಾಗಗಳಲ್ಲಿ ಪಸರಿಸಿತು. ಬಂಗಾಲದ ರಾಷ್ಟ್ರೀಯ ಪಕ್ಷದ ಪ್ರಮುಖ ಪತ್ರವಾದ ವಂದೇಮಾತರಮ್‌ದ ೧೨ನೆಯ ದಸಂಬರ ೧೯೦೬ರ ಸಂಚಿಕೆಯಲ್ಲಿ ಶ್ರೀ ಅರವಿಂದರು ತಮ್ಮ ಸಂಪಾದಕವರ್ಗದಲ್ಲಿ ಒಬ್ಬರಾಗಿರುವರೆಂದು ಪ್ರಕಟಿಸಲ್ಪಟ್ಟಿತು. ಈ ಕಾಲಕ್ಕೆ ಶ್ರೀ ಅರವಿಂದ ಬಾಬುಗಳು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಿಲ್ಲ. ಆದರೂ ಶ್ರೀ ಅರವಿಂದರ ಸಂಬಂಧವನ್ನು ಜೋಡಿಸಿಕೊಳ್ಳಲಿಕ್ಕೆ ವಂದೇಮಾತರಂದಂಥ ಪ್ರಖ್ಯಾತ ಪತ್ರವು ಇಷ್ಟು ಆತುರವಾಗಿದ್ದುದರ ಮೇಲಿಂದ ಬಾಬೂ ಮಹಾಶಯರ ಯೋಗ್ಯತೆಯೂ ಕೀರ್ತಿಯೂ ಎಷ್ಟು ಬೆಳೆಯಿತೆಂಬುದು ಸಹಜವಾಗಿ ವ್ಯಕ್ತವಾಗುತ್ತದೆ. ರಾಷ್ಟ್ರೀಯ ಪಕ್ಷದ ವಿಚಾರಗಳನ್ನು ದೇಶದಲ್ಲಿ ಹರಡುವದಕ್ಕಾಗಿ ಒಂದು ಜಾಯಿಂಟ ಸ್ಟಾಕ ಕಂಪನಿಯು ಹೊರಟು ತದ್ವಾರವಾಗಿ ಈ ಪತ್ರವು ನಡಿಸಲ್ಪಡುತ್ತಿತ್ತು. ಇದರ ಸಂಪಾದಕತ್ವವು ಸುಪ್ರಸಿದ್ಧಲೇಖಕರೂ ಅಸದೃಶ ವಕ್ತೃತ್ವಶಾಲಿಗಳೂ ಆದ ಬಿಪಿನ ಚಂದ್ರಪಾಲ ಹಾಗೂ ಬಾಬು ಶ್ಯಾಮಸುಂದರ ಚಕ್ರವರ್ತಿಗಳೆಂಬವರ ಕಡೆಗೆ ಇತ್ತು. ಇವರ ಜೊತೆಗೆ ಶ್ರೀ ಅರವಿಂದರಂಥ ಪ್ರತಿಭಾಶಾಲಿಗಳಾದ ಲೇಖಕರೂ ಇರಬೇಕೆಂದು ನೆನಿಸಿ ಚಾಲಕರು ಹಾಗೆ ಪ್ರಕಟಿಸಿದ್ದರು. ಆದರೆ ಆಗ ಶ್ರೀ ಅರವಿಂದರು ಸಮ್ಮತಿಸದಿದ್ದರೂ ಮುಂದೆ ಎಪ್ರಿಲ ೧೫ನೆಯ ತಾರೀಖಿಗೆ ಆ ಕೆಲಸಕ್ಕೆ ಒಪ್ಪಿಕೊಂಡರು. ಆಗಾಗ್ಗೆ ಸ್ಫೂರ್ತಿದಾಯಕ ಲೇಖಗಳನ್ನು ಬರೆದು ಜನರನ್ನು ಚೇತರಿಸಹತ್ತಿದರು. ಇವರಿಗೆ ಇಂಗ್ಲಿಶವು ಮಾತೃಭಾಷೆ, ಇದಲ್ಲದೆ ಸಂಸ್ಕೃತ, ಗ್ರೀಕ, ಲ್ಯಾಟಿನ, ಫ್ರೆಂಚ ಮತ್ತು ಜರ್ಮನ್ ಭಾಷೆಗಳಲ್ಲಿ ನಿಷ್ಣಾತರು. ಇಂಥ ಅಗಾಧ ಪಂಡಿತರು ಬರೆದ ಲೇಖಗಳನ್ನು ಓದಿ ಯಾರು ತಾನೇ ತಲೆದೂಗರು? ಲಂಡನ್ ಟಾಯಿಮ್ಸದಂಥ ವಿರುದ್ಧ ಪಕ್ಷದ ಪತ್ರವು ಸಹ ವಂದೇಮಾತರಂದ ಲೇಖಗಳನ್ನು ಕಂಡು ತಲೆದೂಗಿತು! ವಂದೇಮಾತರಂದ ಸುಂದರವಾದ ಮಾರ್ಮಿಕ ಲೇಖಗಳು ಜನರ ಚಿತ್ತವನ್ನು ಕೂಡಲೆ ಆಕರ್ಷಿಸುತ್ತಿದ್ದವು. ಅದರೊಳಗಿನ ಸ್ಫೂರ್ತಿದಾಯಕ ವಿಚಾರಗಳು ಜನರಲ್ಲಿ ಚೈತನ್ಯವನ್ನುಂಟು ಮಾಡದೆ ಬಿಡುತ್ತಿದ್ದಿಲ್ಲ. ಸಾವಿರಾರು ವಾಚಕರು ದಿನಾಲು ಈ ಪತ್ರವು ಯಾವಾಗ ಕೈಗೆ ಬಂದೀತೆಂದು ಆತುರರಾಗಿರುತ್ತಿದ್ದರು. ಇದರ ಲೋಕಪ್ರಿಯತೆಯೇ ಇದಕ್ಕೆ ಮುಳುವಾಯಿತು. ಅಲ್ಪ ಕಾಲದೊಳಗೆ ಸರಕಾರದ ಕಣ್ಣಲ್ಲಿ ಇದು ಅಳುಕಹತ್ತಿತು.

ರಾಷ್ಟ್ರೀಯ ಪಕ್ಷದ ಮುಖಂಡರನ್ನು ಹಿಡಿದು ಶಿಕ್ಷಿಸಿ, ಜನರಲ್ಲಿ ಒಂದು ತರದ ಅಂಜಿಕೆಯನ್ನುಂಟುಮಾಡಿ ತಮ್ಮ ವರ್ಚಸ್ಸು ಕೂಡ್ರಿಸಬೇಕೆಂದು ಸರಕಾರದವರು ಮುಂದಾಳುಗಳನ್ನು ಹಿಡಿಯುವ ಮಹಾ ಸತ್ರವನ್ನು ಆರಂಭಿಸಿದರು. ಇದರಲ್ಲಿ ಶ್ರೀ ಅರವಿಂದರಂಥ ಲೋಕಪ್ರಿಯ ಮುಖಂಡರ ಪಾಳಿಯು ಬಂದರೆ ಆಶ್ಚರ್ಯವೇನು? ವಂದೇಮಾತರಂದ ತಾ|| ೨೭ನೆಯ ಜುಲೈ ೧೯೦೭ರ ಸಂಚಿಕೆಯಲ್ಲಿ ಯುಗಾಂತರವೆಂಬ ಪತ್ರಿಕೆಯ ಮೇಲೆ

ಯಾವ ಲೇಖದ ಸಲುವಾಗಿ ಖಟ್ಲೆಯಾಗಿತ್ತೋ ಆ ಲೇಖದ ಸಾರಾಂಶವು ಕೊಡಲ್ಪಟ್ಟಿತ್ತೆಂದೂ, ೨೧ನೆಯ ತಾರೀಖಿನ ಸಂಚಿಕೆಯಲ್ಲಿ "ಹಿಂದುಸ್ಥಾನವು ಹಿಂದೂ ಜನರ ಸಲುವಾಗಿ" ( India for Indians ) ಎಂಬ ಲೇಖವು ಬರೆಯಲ್ಪಟ್ಟಿತ್ತೆಂದೂ ಆರೋಪವಿಟ್ಟು, ಪೋಲಿಸರು ಈ ಪತ್ರದ ಮೇಲೆ ಖಟ್ಲೆಯನ್ನು ಹಾಕಿದರು. ಅಗಸ್ಟ ೬ನೆಯ ತಾರೀಖಿನ ದಿವಸ ಆಫೀಸಿಗೆ ಜಪ್ತಿಯು ಬಂತು. ಪೋಲಿಸರು ಕಾರ್ಯಾಲಯ ( Office ) ದ ಸಂದಿಗೊಂದಿಗಳನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ತಪಾಸ ಮಾಡಿದರು. ಒಂದೆರಡು ಗಾಡಿ ತುಂಬ ಕಾಗದಗಳನ್ನು ಜಪ್ತಮಾಡಿ ಒಯ್ದರು!

ಮೇಲೆ ಹೇಳಿದ ಆರೋಪಿತ ಲೇಖಗಳನ್ನು ಶ್ರೀ ಅರವಿಂದ ಬಾಬುಗಳೇ ಬರೆದರೆಂಬ ಸಂಶಯದಿಂದ ವಾರಂಟು ಹೊರಟಿತು, ತಾ. ೨೦ನೆಯ ಅಗಸ್ಟಕ್ಕೆ ಶರೆ ಹಿಡಿದರು. ಬಳಿಕ ೨೫೦೦ ರೂಪಾಯಿಗಳ ಜಾಮೀನಿನ ಮೇಲೆ ಬಿಡುಗಡೆಯಾಯಿತು. ೨೬ನೆಯ ಅಗಸ್ಟಕ್ಕೆ ನ್ಯಾಯವಿಚಾರಣೆಗೆ ಆರಂಭವಾಯಿತು. ಕೆಲವರ ಸಾಕ್ಷಿಗಳಾದವು, ಆದರೆ ಅವುಗಳಿಂದ ಈ ಲೇಖಗಳನ್ನು ಶ್ರೀ ಅರವಿಂದರೇ ಬರೆದರೆಂದು ಸಿದ್ಧವಾಗಲಿಲ್ಲ. ಕಾರಣ ಬಿಪಿನಪಾಲರನ್ನು ಸರಕಾರದವರು ತಮ್ಮ ಪತಿಯಿಂದ ಸಾಕ್ಷಿಗೆ ಕರೆದರು. ಆದರೆ ಪಾಲರು ಇಂಥ ಅನ್ಯಾಯದ ಖಟ್ಲೆಯಲ್ಲಿ ಸಾಕ್ಷಿ ಹೇಳಲಿಕ್ಕೆ ತಮ್ಮ ಮನೋದೇವತೆಯು ಒಪ್ಪುವದಿಲ್ಲವೆಂದು ಹೇಳಿದರು. ಆಗ ಮ್ಯಾಜಿಸ್ಟ್ರೇಟರು ಸಿಟ್ಟಾಗಿ ಪಾಲರ ಮೇಲೆ ಖಟ್ಲೆ ಮಾಡುವದಕ್ಕೆ ಅಪ್ಪಣೆ ಕೊಟ್ಟರು; ಅದರಲ್ಲಿ ಅವರಿಗೆ ೬ ತಿಂಗಳ ಕೈದಿನ ಶಿಕ್ಷೆಯಾಯಿತು! ಶ್ರೀ ಅರವಿಂದ ಬಾಬುಗಳ ನ್ಯಾಯ ವಿಚಾರಣೆಯು ಮುಂದೆ ಸಾಗಿ ತಾ. ೨೩ನೆಯ ಸಪ್ಟೆಂಬರದ ದಿವಸ ನಿರ್ದೋಷಿಗಳೆಂದು ತೀರ್ಪು ಸಿಕ್ಕಿತು.

ಸರಕಾರದವರ ಅವಕೃಪೆಗೆ ಪಾತ್ರರಾದ ಶ್ರೀ ಅರವಿಂದರನ್ನು ರಾಷ್ಟ್ರೀಯ ವಿದ್ಯಾಲಯದಲ್ಲಿ ಉಳಿಯಗೊಟ್ಟರೆ ಸಂಸ್ಥೆಗೆ ಬಾಧೆ ಬರುವದೋ ಏನೋ ಎಂಬ ಶಂಕೆಯು ಚಾಲಕವರ್ಗದಲ್ಲಿ ಸೇರಿತು. ಸ್ವತಂತ್ರ ಪದ್ಧತಿಯಿಂದ ಶಿಕ್ಷಣವನ್ನು ಕೊಡಬೇಕೆಂದು ರಾಷ್ಟ್ರೀಯ ವಿದ್ಯಾಲಯವು ಸ್ಥಾಪಿಸಲ್ಪಟ್ಟಿದ್ದರೂ ಕೆಲವು ಶ್ರೀಮಂತ ಆಶ್ರಯದಾತರು ಅರವಿಂದರನ್ನು ಇಟ್ಟುಕೊಳ್ಳಲಿಕ್ಕೆ ಅನುಮಾನಿಸಹತ್ತಿದರು! ಇಂಥ ಪರಿಯಿಂದ ಇಲ್ಲಿ ಇರುವದಕ್ಕಿಂತ ಬಿಟ್ಟುಹೋಗುವದು ಲೇಸೆಂದು ಬಗೆದು ಶ್ರೀ ಅರವಿಂದರು ತಮ್ಮ ಸ್ಥಳದ ರಾಜೀನಾಮೆಯನ್ನು ಕೊಟ್ಟರು.

೭೫೦ ರೂ ಗಳ ಸಂಬಳವನ್ನು ಬಿಟ್ಟು ಕೇವಲ ಹೊಟ್ಟೆಗೆ ಬೇಕಾಗುವಷ್ಟು ಪ್ರತಿತಿಂಗಳಿಗೆ ಸಿಗುವ ಫಲವನ್ನು ಮಾತ್ರ ತಕ್ಕೊಂಡು ಕೆಲಸ ಮಾಡಲಿಕ್ಕೆ ಒಪ್ಪಿದ ಶ್ರೀ ಅರವಿಂದ ಬಾಬುಗಳು ತಿಂಗಳೊಂದಕ್ಕೆ ಸಿಗುವ ತಮಗೆ ಈ ಕೆಲಸವನ್ನು ಬಿಡಬೇಕಾಯಿತೆಂದು ನಿರುತ್ಸಾಹಿಗಳಾಗಲಿಲ್ಲ. ಬಡೋದೆಯ ಬಡೇಜಾಪಿನೊಳಗಿಂದ ಅವರನ್ನು ಯಾವ ರಾಷ್ಟ್ರಧರ್ಮವು ಎಳೆದುತಂದಿತ್ತೋ ಅದರ ಪ್ರಚಾರವನ್ನು ವಿದ್ಯಾಲಯದಲ್ಲಿ ಆಚಾರ್ಯರಾಗಿಯೇ ಮಾಡಲಿಕ್ಕೆ ಬರುತ್ತದೆಂತಲ್ಲ. ಈ ಧರ್ಮವನ್ನು ಜನರಲ್ಲಿ ಹಲವು ರೀತಿಯಿಂದ ಹರಡಲಿಕ್ಕೆ ಬರುತ್ತದೆ.

ರಾಷ್ಟ್ರೀಯ ವಿದ್ಯಾಲಯದೊಳಗಿಂದ ಹೊರಟ ಬಳಿಕ ಅವರು ವಂದೇಮಾತರಂದ ಸಂಪಾದಕ ವರ್ಗದಲ್ಲಿ ಸೇರಿ ಕೆಲಸ ಮಾಡಹತ್ತಿದರು. ಶ್ರೀ ಅರವಿಂದರು ಮೊದಲು ನೂರಾರು ವಿದ್ಯಾರ್ಥಿಗಳ ಶಿಕ್ಷಕರಾಗಿದ್ದರೆ ಈಗ ಸಾವಿರಾರು ಶಿಷ್ಯರ ಆಚಾರ್ಯರಾದರು; ಮೊದಲು ನ್ಯಾಶನಲ್ ಕಾಲೇಜದ ಒಂದು ಪುಟ್ಟ ಕೋಣೆಯ ನಾಲ್ಕು ಗೋಡೆಗಳ ಅವಕಾಶದೊಳಗೆ ಕುಳಿತು ಅಧ್ಯಾಪನ ಕಾರ್ಯವನ್ನು ಮಾಡುತ್ತಿದ್ದರೆ, ಈಗ ನಿಸರ್ಗಸಿದ್ಧ ಮೇರೆಗಳಿಂದ ಮರ್ಯಾದಿತವಾದ ಭರತಖಂಡದ ಕಿಂಬಹುನಾ ಜಗತ್ತಿನ ವಿಶಾಲವಾದ ರಂಗಭೂಮಿಯ ಮೇಲೆ ನಿಂತು ತಮ್ಮ ಗಂಭೀರವಾಣಿಯಿಂದ ಮಾನವ ಕುಟುಂಬಕ್ಕೆ ಉದ್ಧರಿಸಲು ಸಮರ್ಥವಾದ ಉದಾತ್ತ ತತ್ವಗಳ ಉಪದೇಶ ಮಾಡಹತ್ತಿದರು.

ನಿರ್ದೋಷಿಯೆಂದು ನಿರ್ಣಯವು ಸಿಕ್ಕಬಳಿಕ ಶ್ರೀ ಅರವಿಂದರು ಪುನಶ್ಚ ಹರಿಃ ಓಂ ಎಂದು ಮತ್ತೆ ಕಾರ್ಯಕ್ಕೆ ಹತ್ತಿದರು. ರಾಷ್ಟ್ರಸೇವೆಯ ಇಕ್ಕಟ್ಟಾದ ಕಣಿವೆಯ ಮಾರ್ಗವನ್ನು ಸಾಗುವದರಲ್ಲಿ ಸಹಕಾರಿಗಳಾದ ಕೆಲವು ಮಿತ್ರರ ವಿಯೋಗವಾಯಿತು. ಬಿಪಿನಚಂದ್ರ ಪಾಲರಿಗೆ ಶಿಕ್ಷೆಯಾಯಿತು. ಬ್ರಹ್ಮಬಾಂಧವೋಪಾಧ್ಯಾಯರು ದಿವಂಗತರಾದುದರಿಂದ ಚಿರವಿರಹದ ಪ್ರಸಂಗವು ಬಂತು. ಮತ್ತೆ ಕೆಲವು ಮಿತ್ರರು ಸರಕಾರದ ಅವಕೃಪೆಗೆ ಈಡಾದರು. ಹೀಗೆ ದೊಡ್ಡ ದೊಡ್ಡ ಮುಂದಾಳುಗಳು ಒಂದಿಲ್ಲೊಂದು ತರದಿಂದ ಇಲ್ಲದಂತಾಗಲು ಬಂಗಾಲದ ತರುಣ ಪಕ್ಷದ ಮುಖಂಡತನವು ಶ್ರೀ ಅರವಿಂದರ ಕಡೆಗೆ ಬಂತು. ನವಂಬರದಲ್ಲಿ ಕೂಡಿದ ಜಿಲ್ಹಾ ಪರಿಷತ್ತಿಗೆ ಮಿದನಾಪ್ಪುರಕ್ಕೆ ರಾಷ್ಟ್ರೀಯ ಪಕ್ಷದ ಪತಿಯಿಂದ ಶ್ರೀ ಅರವಿಂದರು ಹೋಗಿದ್ದರು. ಮಂದಪಕ್ಷದವರು ವೀರಪಕ್ಷದ ತೇಜಸ್ಸನ್ನು ತಾಳಲಾರದೆ ಆ ಸಭೆಯೊಳಗಿಂದ ಪಲಾಯನ ಹೇಳಿಸಿದರು. ರಾಷ್ಟ್ರೀಯ ಪಕ್ಷದ ಮೇಲೆ ಸರಕಾರದ ಕಣ್ಣು ಬಹಳವಿತ್ತು. ಸರಕಾರಕ್ಕೆ ಬೇಡಾದ ಈ ಪಕ್ಷದ ಸಂಗಡ ಕೂಡಿ ನಡೆಯಲಿಕ್ಕೆ ಮಂದ ಪಕ್ಷದವರು ಅಂಜುತ್ತಿದ್ದರು. ಮಂದ ಪಕ್ಷದವರು ಪರಿಷತ್ತನ್ನು ಬಿಟ್ಟುಹೋದರೂ, ವೀರ ಪಕ್ಷದವರು ಅದನ್ನು ಯಶಸ್ವಿಯಾಗಿ ಕೊನೆಗಾಣಿಸಿದರು. ಇದರ ಶ್ರೇಯಸ್ಸು ಶ್ರೀ ಅರವಿಂದರಿಗಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ.

ಮುಸಲ್ಮಾನರನ್ನು ಒಡೆದು ನೋಡಿತು; ಕೆಲವು ಜನರಿಗೆ ಶಿಕ್ಷೆ ಕೊಟ್ಟು ನೋಡಿತು. ಏನು ಮಾಡಿದರೂ ಜನರು ಮಣಿಯದಿದ್ದುದನ್ನು ಕಂಡು ಸರಕಾರದವರು ಮತ್ತೊಂದು ಯುಕ್ತಿಯನ್ನು ಯೋಜಿಸಿದರು. ಮಂದ ಪಕ್ಷದವರ ಬೆನ್ನು ಚಪ್ಪರಿಸಿ, ಅವರನ್ನು ತಮ್ಮ ವಿಶ್ವಾಸದಲ್ಲಿ ತಕ್ಕೊಂಡು ತರುಣ ವೀರಪಕ್ಷವನ್ನು ಬಗ್ಗು ಬಡಿಯಬೇಕೆಂದು ಸರಕಾರದವರು ಹಂಚಿಕೆ ಹಾಕಿದರು. ಮಂದಪಕ್ಷದ ಬುದ್ಧಿಮಾಂದ್ಯದಿಂದ ಈ ಯುಕ್ತಿಗೆ ಯಶಸ್ಸು ಬಂತು. ರಾಷ್ಟ್ರೀಯ ಸಭೆಯಲ್ಲಿ ವೀರಪಕ್ಷದ ವರ್ಚಸ್ಸು ಹೆಚ್ಚಾಗುತ್ತಲಿದ್ದುದು ಮಂದಪಕ್ಷಕ್ಕೆ ಸೇರಲಿಲ್ಲ. ಮಂದಪಕ್ಷದವರು ರಾಷ್ಟ್ರೀಯ ಸಭೆಯನ್ನು ಸ್ಥಾಪಿಸಿದ್ದೇನೋ ನಿಜ. ಆದರೆ ರಾಷ್ಟ್ರದ ಆಕಾಂಕ್ಷೆಗಳು ವೃದ್ಧಿಂಗತವಾದಂತೆ ತಮ್ಮ ಧೋರಣವನ್ನಿಡಲಿಕ್ಕೆ ಮಂದಪಕ್ಷದವರು ಹೆದರಹತ್ತಿದರು. ಸರಕಾರದ ಹತ್ತರ ವಿನಂತಿ ಮಾಡಿಕೊಂಡು, ಠರಾವುಗಳನ್ನು ಮಾಡಿ ಕಳಿ-

ಕಳಸಿ ಜನರಿಗೆ ಬೇಸರಿಕೆ ಬಂದಿತ್ತು. ವಿನಂತಿ ಮಾಡಿಕೊಂಡರೆ ತಮ್ಮ ಕೈಯೊಳ ನಗಿ ಅಧಿಕಾರವನ್ನು ಯಾರೂ ಕೊಡುತ್ತಿರುವದಿಲ್ಲ. ಅದಕ್ಕೆ ಸ್ವಾವಲಂಬನದ ಮಾರ್ಗದಿಂ ದಲೇ ಯತ್ನಿಸಬೇಕೆಂದು ತರುಣರು ಅನ್ನುತ್ತಿದ್ದರು. ರಾಷ್ಟ್ರೀಯ ಪಕ್ಷದ ಈ ಮತಗಳು ಮಂದ ಪಕ್ಷದವರಿಗೆ ಸೇರಲಿಲ್ಲ. ಮಂದರ ಮಾರ್ಗಕ್ರಮಣ ಪದ್ಧತಿಯು ಮಂದವಿತ್ತು. ಮಂದ ಮಂದವಾಗಿ ಸಾಗುವದು ವೀರರಿಗೆ ಸೇರದಾಯಿತು. ಮಂದವಾಗಿ ನಡೆದರೆ ಉದ್ದಿಷ್ಟಸ್ಥಾನಕ್ಕೆ ಹೋಗಲಿಕ್ಕೆ ಕಾಲಾವಧಿಯು ಬಹಳ ಬೇಕು. ಕಾರಣ ಕಾಲು ಬೇಗ ಎತ್ತುವದು ಅವಶ್ಯವೆಂದು ವೀರಪಕ್ಷದ ಮತವಿತ್ತು. ಈ ಮಾತು ಮಂದಪಕ್ಷದ ಕೆಲವು ಜನರಿಗೆ ಸರಿಯಾಗಿ ತೋರು ತ್ತಿದ್ದರೂ ಸರಕಾರದ ಭೀತಿಯಿಂದ ಅವರು ಅದಕ್ಕೆ ಒಪ್ಪುತ್ತಿದ್ದಿಲ್ಲ ಸರಕಾರದ ಭೀತಿಗೆ ಭಯಪಟ್ಟು ಧ್ಯೇಯಚ್ಯುತರಾಗಬೇಕೇ— ರಾಷ್ಟ್ರದ ಘಾತಕ್ಕೆ ಕಾರಣರಾಗಬೇಕೇ ಅಥವಾ ಬಂದದನ್ನು ಸಹಿಸಿ ಸರ್ವಭೂತ ಹಿತವನ್ನು ಸಾಧಿಸಬೇಕೇ ಎಂಬುದೇ ರಾಷ್ಟ್ರೀಯ ಪಕ್ಷದ ಕಣ್ಣೆದುರಿನ ಮುಖ್ಯ ಪ್ರಶ್ನವಾಗಿತ್ತು. ಹಾಗೂ ಅವರು ಧ್ಯೇಯ ಸಿದ್ಧಿಯ ಸಲುವಾಗಿ ಸರ್ವಸ್ವದ ತ್ಯಾಗಕ್ಕೆ ಸಿದ್ಧರಾಗಿದ್ದರು. ಮತ್ತು ಅದರಂತೆ ಬಂದ ಕಷ್ಟಗಳನ್ನು ಸಂತೋಷದಿಂದ ಸಹಿಸಿದರು.

೧೯೦೭ ರಲ್ಲಿ ರಾಷ್ಟ್ರೀಯ ಸಭೆಯು ನಾಗಪುರಕ್ಕೆ ನೆರೆಯಬೇಕೆಂದು ಮೊದಲು ಗೊತ್ತಾಗಿತ್ತು. ಆದರೆ ಅಲ್ಲಿ ರಾಷ್ಟ್ರೀಯ ಪಕ್ಷದ ಬಹುಮತವಿದ್ದುದು ಕಂಡು ಬಂತು. ರಾಷ್ಟ್ರೀಯ ಸಭೆಯ ಚಾಲಕತ್ವವು ಪರಂಪರೆಯಿಂದ ಮಂದಪಕ್ಷದ ಕೈಯೊ ಳಗಿದ್ದದರಿಂದ ಅವರು ಕೂಡಲೆ ನಾಗಪೂರದಿಂದ ಸುರತಕ್ಕೆ ಸಭೆಯನ್ನು ಕೂಡಿಸಬೇ ಕೆಂದು ಗೊತ್ತು ಮಾಡಿದರು. ಸುರತದಲ್ಲಿ ಫಿರೋಜಶಹಾ ಮೇಥಾ ಇವರ ವರ್ಚಸ್ಸು ಹೆಚ್ಚು ಇತ್ತು. ೧೯೦೭ರ ಡಿಸೆಂಬರ ತಿಂಗಳು ಬಂತು ರಾಷ್ಟ್ರೀಯ ಸಭೆಯು ನೆರೆಯುವ ದಿವಸಗಳು ಸಮೀಪಿಸ ಹತ್ತಿದವು ದೇಶದೊಳಗಿನ ಎರಡೂ ಪಕ್ಷದ ಜನರು ತಮ್ಮ ತಮ್ಮ ಮುಖಂಡರನ್ನು ಮುಂದೆ ಮಾಡಿಕೊಂಡು ಸಭೆಗೆ ಬಂದರು ಅಲ್ಲಿ ಅಧ್ಯಕ್ಷರನ್ನು ಆರಿಸುವ ನಿಮಿತ್ತವಾಗಿ ನ್ಯಾಯವು ಹೊರಟು ಹಟದಲ್ಲಿ ಅದರ ಪರ್ಯವಸಾನವಾಯಿತು. ಲಾಲಾ ಲಜಪತರಾಯರು ಮಧ್ಯಸ್ಥಿಕೆಯನ್ನು ಮಾಡಿದರು; ಆದರೆ ಅವರ ಉಪಯೋಗವಾಗಲಿಲ್ಲ. ಮೇಥಾ ಪ್ರಭೃತಿಗಳ ಮುಖಂಡರ ದುರಾಗ್ರಹದಿಂದ ಕಾರ್ಯಹಾನಿಯಾಯಿತು ವೀರಪಕ್ಷ ದವರು ಲೋಕಮಾನ್ಯ ತಿಲಕರ ನೇತೃತ್ವದ ಕೆಳಗೆ ಹೋರಾಡಿದರು. ಬಿಪಿನಪಾಲರು ತುರಂಗಕ್ಕೆ ಹೋದುದರಿಂದ ಶ್ರೀಅರವಿಂದರು ಬಂಗಾಲಿಯ ವೀರಪಕ್ಷದ ಪತಿಯಿಂದ ಲೋಕ ಮಾನ್ಯರ ಬೆಂಬಲಕ್ಕೆ ಇದ್ದರು ಮೊದಲು ಶಾಬ್ದಿಕ ಕಲಹಕ್ಕೆ ಆರಂಭವಾಗಿ ಕಡೆಗೆ ಕೈಗೆ ಕೈ ಹತ್ತುವ ಪ್ರಸಂಗವು ಬಂತು ಅನುಯಾಯಿಗಳೊಳಗೆ ಈ ಕಲಹವು ಸ್ವಲ್ಪ ವಿಕೋ ಪಕ್ಕೆ ಹೋಯಿತು; ಕೆಲವರು ಒಳಿತಾಗಿ ಪೆಟ್ಟು ತಿಂದರು. ಹೀಗೆ ಕಾಂಗ್ರೆಸ್ಸೆಂಬ ಯುದ್ಧ ನೌಕೆಯು ಕಲಹ (ಒಳ ಜಗಳಗಳ) ಗಳೆಂಬ ಬಂಡೆಗಲ್ಲಿಗೆ ಅಪ್ಪಳಿಸಿ ಒಡೆಯಿತು. ಸರಕಾ ರದ ಇಚ್ಛೆಯು ಸಫಲವಾಯಿತು. ಭೇದ ನೀತಿ ನಿಪುಣರಾದ ಅಧಿಕಾರಿಗಳು ಗೆದ್ದರು!

ಅಧಿಕಾರಿಗಳ ವಿಜಯವೆಂದರೆ ರಾಷ್ಟ್ರದ ಪರಾಜಯವು. ವೀರ ಪಕ್ಷವು ಏಕಾಕಿಯಾಗಿ ಸರಕಾರದ ಅಳವಿನೊಳಗೆ ಸಿಕ್ಕಿತು.

ಸುರತದ ದುಃಖಪರ್ಯವಸಾಯಿಯಾದ ರಾಷ್ಟ್ರೀಯ ಸಭೆಯು ಮುಗಿಯಿತು. ಶ್ರೀ ಅರವಿಂದ ಘೋಷರು ತಮ್ಮ ಮತಗಳ ಪ್ರಸಾರಾರ್ಥವಾಗಿ ಮಹಾರಾಷ್ಟ್ರ ಮಧ್ಯಪ್ರಾಂತಗಳಲ್ಲಿ ದೂರ ದೂರಿನ ಪ್ರವಾಸ ಮಾಡಿದರು. ದೇಶಸೇವೆಯು ಸುಮ್ಮನೆ ಆಗುವದಿಲ್ಲ. ಇದೊಂದು ಅಸಿಧಾರಾವ್ರತವಿದೆ. ಖಡ್ಗದ ಧಾರೆಯ ಮೇಲೆ ಮಾಡುವ ಕಸರತ್ತು ಇದೆ. ಉಗ್ರವಾದ ತಪಶ್ಚರ್ಯವಿದೆ ಆತ್ಮಯಜ್ಞ ಮಾಡಿದವರಿಗೇ ಇದು ಸಾಧ್ಯವಾಗುತ್ತಿರುತ್ತದೆ. ಶ್ರೀ ಅರವಿಂದರು ಮೊದಲೇ ಅಶಕ್ತರು. ಆದರೂ ದೇಹದ ಪರಿವೆಯಿಲ್ಲದೆ ಕಷ್ಟಕರವಾದ ಪ್ರವಾಸಗಳನ್ನು ಮಾಡಿ ಜನರಲ್ಲಿ ಜಾಗೃತಿಯನ್ನು ಮಾಡಿದರು. ಶ್ರೀ ಅರವಿಂದರಂತೆ ರಾಷ್ಟ್ರೀಯ ಪಕ್ಷದ ಎಲ್ಲ ಮುಖಂಡರೂ ಲೋಕಜಾಗೃತಿಯ ಕೆಲಸಕ್ಕೆ ಹತ್ತಿದರು

ಮಂದ ಪಕ್ಷದವರು ವೀರ ಪಕ್ಷದವರಿಂದ ಸಿಡಿದು ಹೋದದ್ದು ಸರಕಾರಕ್ಕೆ ಅನುಕೂಲವಾಯಿತು. ತರುಣ ಪಕ್ಷದ ಮಾರ್ಗಗಳು ಸೇರದಿದ್ದರೆ ಮಂದ ಪಕ್ಷದವರು ಸುಮ್ಮನೆ ಕೂಡ್ರಬೇಕಾಗಿತ್ತು ಮಂದ ಪಕ್ಷದವರಿಗೆ ಹೇಗೆ ದೇಶದ ಹಿತವೇ ಸಾಧ್ಯವಾಗಿತ್ತೋ ಅದರಂತೆ ವೀರಪಕ್ಷದವರಿಗೂ ದೇಶದ ಕಲ್ಯಾಣವೇ ಬೇಕಾಗಿತ್ತು ವೀರ ಪಕ್ಷದವರ ವಿರುದ್ಧ ಸಿಕ್ಕ ಸಿಕ್ಕ ಟೀಕೆಗಳನ್ನು ಬರೆದು ಮಂದ ಪಕ್ಷದವರು ಘೋರತರದ ಪಾಪಮಾಡಿದರು ಕೆಲವು ಮಂದ ಪಕ್ಷದ ವೃತ್ತಪತ್ರಕಾರರು ವೀರಪಕ್ಷದವರೆಂದರೆ ಬಂಡುಗಾರರೆಂದು ಸಹ ಸಂಶಯ ತಕ್ಕೊಂಡರು! ಸರಕಾರಕ್ಕೆ ಬೇಕಾದದ್ದು ಇದೇ ಮಾತು. ಅದನ್ನು ನಮ್ಮ ಜನರೇ ಮಾಡಿಕೊಟ್ಟ ಬಳಿಕ ಅವರದೇನು ಹೋಗುತ್ತದೆ? ನಮ್ಮ ಜನರು ಚಾಡಬುರುಕರಾಗಿ ತಮ್ಮವರ ವಿರುದ್ಧವಾಗಿ ಅಧಿಕಾರಿಗಳ ಪ್ರೀತಿಯನ್ನು ಸಂಪಾದಿಸುವ ಇಚ್ಛೆಯಿಂದ ಹೇಡಿತನದ ಕೃತ್ಯವನ್ನು ಮಾಡಹತ್ತಿದರೆ ದೇಶಕ್ಕೆ ಊರ್ಜಿತಸ್ಥಿತಿಯು ಹೇಗೆ ಬರಬೇಕು? ಒಂದೇ ಹಡಗದಲ್ಲಿ ಕುಳಿತ ಜನರ ಹಾಗೆ ಹಿಂದುಸ್ಥಾನವಾಸಿಗಳ ಸ್ಥಿತಿಯಿದೆ. ಹಿಂದೂ ಇರಲಿ, ಮುಸಲ್ಮಾನನಿರಲಿ, ಯಾರೇ ಇರಲಿ, ಪರಸ್ಪರರ ಹಿತವು ಪರಸ್ಪರರನ್ನೇ ಅವಲಂಬಿಸಿದೆ. ಹೀಗಿದ್ದು ತಾವು ಕುಳಿತ ಹಡಗಕ್ಕೆ ತೂತು ಕೆಡಹುವ ಆತ್ಮವಂಚಕ ಕೃತ್ಯವನ್ನು ಮಾಡಿದರೆ ಅದರಿಂದ ಯಾರ ಹಾನಿಯಾಗುವದು? ನಮ್ಮೊಳಗಿನ ಒಡಕಿನ ಲಾಭ ತಕ್ಕೊಂಡು ವೀರ ಪಕ್ಷದ ಮೇಲೆ ಸರಕಾರದವರು ಬಿಚ್ಚುಗತ್ತಿಯನ್ನೆತ್ತಿದರು.

ಅದು ಸರಕಾರದ ಅನುಕೂಲ ವೇಳೆ. ವೀರಪಕ್ಷವನ್ನು ಮುರಿಯಲಿಕ್ಕೆ ಮತ್ತೊಂದು ನೆವವೂ ಸಿಕ್ಕಿತು ಶಾಂತತೆಯ ಮಾರ್ಗದಿಂದಲೇ ತಮ್ಮ ಇಚ್ಛಿತವನ್ನು ಸಾಧ್ಯಮಾಡಿಕೊಳ್ಳುವದೆಂದು ಮಂದ ಪಕ್ಷದವರಂತೆ ವೀರ ಪಕ್ಷದ ಮತವಿದೆ ಇಂದಿನವರೆಗೆ ಆ ಮಾರ್ಗದಿಂದಲೇ ಅವರು ನಡೆಯುತ್ತ ಬಂದರು. ಆದರೂ ಸರಕಾರದವರು ಇಲ್ಲದ ಆರೋಪಗಳನ್ನು ಹೊರಿಸಿ ಜನರನ್ನು ಶಿಕ್ಷಿಸುವದನ್ನು ಕಂಡು ಕೆಲವು ತರುಣರ ತಲೆ ತಿರುಗಿತು.

ಅವರಿಗೆ ವೀರ ಪಕ್ಷದ ಶಾಂತತೆಯು ಮಾರ್ಗವು ರುಚಿಸಲಿಲ್ಲ. ಶಸ್ತ್ರಧಾರಣದ ವಿನಾ ಕಾರ್ಯ ಸಿದ್ಧಿಯಿಲ್ಲವೆಂದು ಗ್ರಹಿಸಿ ಈ ಜನರು ತಮ್ಮ ಉದ್ಯೋಗಕ್ಕೆ ಹತ್ತಿದರು. ಕದ್ದು ಮುಚ್ಚಿ ಕೆಲಸ ನಡೆಯಿತು. ಜೀವದಹಂಗು ಇಲ್ಲದ ಕೆಲವು ತಲೆತಿರುಕ ತರುಣರು ಬಾಂಬಿನ ಪ್ರಯೋಗದಿಂದ ಯುರೋಪಿಯನರ ಕೊಲೆಗಳನ್ನು ಮಾಡಹತ್ತಿದರು. ಇವರ ಈ ನಿಂದ್ಯ ಕರ್ಮದ ಫಲಗಳನ್ನು, ಪಾಪ ರಾಷ್ಟ್ರೀಯ ಪಕ್ಷದ ವೀರರಿಗೆ ಅನುಭವಿಸ ಬೇಕಾಯಿತು!

ಶ್ರೀ ಅರವಿಂದ ಘೋಷರು ಕಾಂಗ್ರೆಸ್ಸು ಮುಗಿಸಿಕೊಂಡು, ಪ್ರವಾಸ ಮಾಡಿ ವ್ಯಾಖ್ಯಾನಗಳನ್ನು ಕೊಟ್ಟು, ಕಲಕತ್ತೆಗೆ ಬಂದು ಸ್ವಲ್ಪ ವಿಶ್ರಾಂತಿಯನ್ನು ತಕ್ಕೊಳ್ಳುತ್ತಿದ್ದರು. ಅಷ್ಟರಲ್ಲಿ ಭಾವೀ ಗಂಡಾಂತರದ ಸುದ್ದಿಗಳು ಅವರ ಕಿವಿಯ ಮೇಲೆ ಬರಹತ್ತಿದವು ಸಹಕಾರಿ ಭಗಿನಿಯಾದ ಸಿಸ್ಟರ ನಿವೇದಿತೆಯು ಶ್ರೀ ಅರವಿಂದರಿಗೆ ಎಲ್ಲಿಗಾದರೂ ಹೋಗಲಿಕ್ಕೆ ಆಗ್ರಹ ಮಾಡಿದಳು ಆದರೆ ತಾನು ನಿರ್ದೋಷಿಯಿರುವದರಿಂದ ಎಳ್ಳಷ್ಟೂ ಭಯಪಡುವದಿಲ್ಲ; ಬಂದದ್ದು ಬರಲಿ ಎಂದು ಸಂಕಟವನ್ನು ಎದುರುಗೊಳ್ಳಲಿಕ್ಕೆ ಸಿದ್ಧರಾದರು!

೧೯೦೮ನೆಯ ಇಸವಿಯು, ಅದು ಪೇಶಿ ಚಳವಳಿಯ ಅತ್ಯುತ್ಕರ್ಷದ ಕಾಲವು. ಅದರಂತೆ ಸರಕಾರದ ರೋಷಿನ ಕಾಲವಾದರೂ ಆಗಿತ್ತು. ಇಂದು ಯಾರ ಮೇಲೆ ಪೋಲೀಸರ ಕೃಪಾದೃಷ್ಟಿಯು ಬಿದ್ದು ಬಾಡಿಗೆಯಿಲ್ಲದ ಮನೆಯು ದಾನವು ಲಭಿಸುವದೆಂಬ ನಿಯಮವಿದ್ದಿಲ್ಲ. ಪ್ಯೈ ಕೈಯಿಂದ ಪುಷ್ಟವಾಗಿರುವದೂ ಈ ಕಾಲಕ್ಕೆ ಅಪರಾಧವಾಗಿತ್ತು. ಎಲ್ಲಿ ನೋಡಿದಲ್ಲಿ ಗುಪ್ತ ಪೋಲೀಸರು ಬೆರೆತುಕೊಂಡಿದ್ದರು ಅವರಿಂದ ಅಪರಾಧಿ ನಿರಪರಾಧಿಗಳು ಕೂಡಿಯೇ ಗೋಳಾಡಿಸಲ್ಪಟ್ಟರು.

೧೯೦೮ನೆಯ ಇಸವಿಯ ಮೇ ತಿಂಗಳ ಎರಡು ದಿನಗಳು ಗತಿಸಿದ್ದವು ಮೂರನೆಯ ದಿನದ ಆರಂಭವನ್ನು ಸೂಚಿಸಲಿಕ್ಕೆ ಭಗವಾನ್ ಸೂರ್ಯನಾರಾಯಣನು ಇನ್ನೂ ಕ್ಷಿತಿಜದ ಮೇಲೆ ಕೂಡ ಬಂದಿದ್ದಿಲ್ಲ. ಶ್ರೀ ಅರವಿಂದ ಬಾಬುಗಳು ಇನ್ನೂ ಹಾಸಿಕೆಯಲ್ಲಿದ್ದರು. ಅಷ್ಟರಲ್ಲಿ ರಾಜದೂತರು ಸಶಸ್ತ್ರರಾಗಿ ಶ್ರೀ ಘೋಷರವರ ಮನೆಯನ್ನು ಮುತ್ತಿದರು. ಮುಖ್ಯಾಧಿಕಾರಿಗಳು ಮನೆಯನ್ನು ಹೊಕ್ಕರು ಒಬ್ಬ ಶಿಪಾಯಿಯು ಅಲ್ಲಿ ನಿಂತಿದ್ದ ಶ್ರೀ ಅರವಿಂದರ ತಂಗಿಯಾದ ಸರೋಜಿನಿಯ ಎದೆಗೆ ಪಿಸ್ತೂಲು ಆಸಿಸಿದನು! ಪೋಲೀಸರು ಶಯನಗೃಹವನ್ನು ಹೊಕ್ಕು, ಶ್ರೀ ಅರವಿಂದರನ್ನು ಹೆಡಮುಡಿಗಟ್ಟಿ ತಕ್ಕೊಂಡು ಹೋದರು!

ಮುಜಫರಪುರದಲ್ಲಿ ಕೆಲವು ತಲೆತಿರುಕರು ಬಾಂಬಿನಿಂದ ಇಬ್ಬರು ಯುರೋಪಿಯನ ಸ್ತ್ರೀಯರನ್ನು ಕೊಂದಿದ್ದರು. ಇವರಲ್ಲಿ ಶ್ರೀ ಅರವಿಂದ ಘೋಷರ ಅಂಗವಿತ್ತೆಂದೂ, ದರೋಡೆಗಳಿಗೆ ಸಹಾಯ ಮಾಡುವರೆಂದೂ ಪೋಲೀಸರು ಸಂಬಂಧ ಜೋಡಿಸಿದರು. ಈ

ಖೂನೀ ಪ್ರಕರಣದಲ್ಲಿ ಸುಮಾರು ೩೯ ಜನ ಆರೋಪಿತರಿದ್ದರು. ಅವರಲ್ಲಿ ಕೆಲವರಿಗೆ ಮೊಗಮೀಸೆಗಳು ಸಹ ಒಡೆದಿದ್ದಿಲ್ಲ. ಸಣ್ಣವರೇನು, ದೊಡ್ಡವರೇನು, ಪೋಲೀಸರಿಗೆ ಯಾರ ಸಂಶಯು ಬಂತು, ಯಾರು ಚಳವಳಿಯಲ್ಲಿ ಹೆಚ್ಚಾಗಿ ಭಾಗ ತಕ್ಕೊಳ್ಳುವದು ಕಂಡು ಬರುತ್ತಿತ್ತು, ಅಂಥ ಎಲ್ಲರ ಸಂಬಂಧವನ್ನು ಒಂದಿಲ್ಲೊಂದು ತರದಿಂದ ಜೋಡಿಸಿ, ಅಪರಾಧಿ ನಿರಪರಾಧಿಗಳದೊಂದು ಹಿಂಡು ಕೋರ್ಟಿನ ಮುಂದೆ ನಿಲ್ಲಿಸಿದರು. ಮೇ ತಿಂಗಳ ೧೮ ನೆಯ ತಾರೀಖಿಗೆ ನ್ಯಾಯ ವಿಚಾರಣೆಗೆ ಆರಂಭವಾಯಿತು ಶ್ರೀ ಅರವಿಂದರನ್ನು ಅಲ್ಲಿಪುರದ ಜೇಲಿಗೆ ಒಯ್ದರು. ಅಲ್ಲಿ ಏಕಾಂತವಾಸದ ಶಿಕ್ಷೆಯನ್ನೂ ನ್ಯಾಯ ನಿರ್ಣಯವಾಗುವ ಮುಂಚಿತವಾಗಿಯೇ ಕೆಲವು ದಿನ ಅನುಭವಿಸಬೇಕಾಯಿತು!

ಆರಂಭಕ್ಕೆ ನ್ಯಾಯ ವಿಚಾರಣೆಯು ಅಲ್ಲಿಪುರದ ಮ್ಯಾಜಿಸ್ಟ್ರೇಟರಾದ ಮಿ. ಬಿರ್ಲೆ ಎಂಬವರ ಮುಂದೆ ನಡೆಯಿತು. ಕನ್ನಯ್ಯಾಲಾಲ ದತ್ತ ಮತ್ತು ಸತ್ಯೇಂದ್ರನಾಥ ಬೋಸ ಎಂಬೀರ್ವ ಆರೋಪಿಗಳು ಪೋಲಿಸರ ಮಾಫೀ ಸಾಕ್ಷಿದಾರನ ಕೊಲೆಯನ್ನು ಮಾಡಿದರು. ಅರ್ಥಾತ್ ಇವರಿಗೆ ದೇಹಾಂತ ಶಿಕ್ಷೆಯು ವಿಧಿಸಲ್ಪಟ್ಟಿತು ಆದರೆ ಸತ್ಯೇಂದ್ರನು ಹಾಯ ಕೋರ್ಟಿಗೆ ಅಪೀಲು ಮಾಡಿದ್ದರಿಂದ ಮೊದಲಿಗೆ ಕನ್ನಯ್ಯಾಲಾಲನ ದೇಹಾಂತ ಶಿಕ್ಷೆಯು ಅಮಲಿನಲ್ಲಿ ಬಂತು ಕನ್ನಯ್ಯಾಲಾಲನ ಮೃತ ದೇಹಕ್ಕೆ ಅಗ್ನಿಸಂಸ್ಕಾರವನ್ನು ಮಾಡುವದಕ್ಕಾಗಿ ಪರವಾನಿಗಿ ಸಿಕ್ಕಿತು. ಜನರು ಆತನ ದೇಹವನ್ನು ಬಹುಆದರದಿಂದ ದಹನ ಮಾಡಿದರು. ಸಾವಿರಾರು ಜನರು ಸೂತಕದ ವೇಷದಿಂದ ದಹನ ಭೂಮಿಗೆ ಹೋಗಿದ್ದರು, ಸುಗಂಧ ದ್ರವ್ಯಗಳ ಮಧ್ಯದಲ್ಲಿ ಆತನ ದೇಹವನ್ನಿಟ್ಟು, ಪೂಮಾಲೆಗಳಿಂದ ಸತ್ಕರಿಸಿ ಚಿತೆಯನ್ನು ಹೊತ್ತಿಸಿದರು ಸತ್ಯೇಂದ್ರನ ಅಪೀಲು ರದ್ದಾಗಿ ಮೊದಲಿನ ಶಿಕ್ಷೆಯೇ ನಿಶ್ಚಿತವಾಯಿತು. ಈತನ ಮೃತ ಶರೀರಕ್ಕೆ ಅಗ್ನಿ ಸಂಸ್ಕಾರಮಾಡಲಿಕ್ಕೆ ಆಪ್ತರಿಗೆ ಪರವಾನಿಗಿಯು ಸಿಗಲಿಲ್ಲ! ಮಿ. ಬಿರ್ಲೆಯವರು ವಿಚಾರಣೆ ಮಾಡಿ ಒಬ್ಬ ಆರೋಪಿಯನ್ನು ದೋಷಮುಕ್ತವಾಗಿ ಮಾಡಿ, ಖಟ್ಲೆಯನ್ನು ಸೆಶನ್ ಕಮಿಟ್ ಮಾಡಿದರು.

ಶ್ರೀ ಅರವಿಂದ ಘೋಷರು ಲಕ್ಷ್ಮಿಯ ತ್ಯಾಗಮಾಡಿ ದಾರಿದ್ರಲಕ್ಷ್ಮಿಯ ಪಾಣಿಗ್ರಹಣ ಮಾಡಿದ್ದರಿಂದ ಈ ಖಟ್ಲೆಯಕಾಲಕ್ಕೆ ಆರ್ಥಿಕ ಕೊರತೆಯುಂಟಾಯಿತು. ಬಾಬುಗಳವರು ಸೆರೆಮನೆಯಲ್ಲಿದ್ದುದರಿಂದ ಇತ್ತ ಹೊರಗೆ ಖಟ್ಲೆಯ ವ್ಯವಸ್ಥೆಯನ್ನು ಮಾಡಲಿಕ್ಕೆ ಯಾರೂ ಇಲ್ಲ! ಬ್ಯಾರಿಸ್ಟರುಗಳಿಗೆ ಕೊಡಲಿಕ್ಕೆ ದುಡ್ಡು ಇಲ್ಲದುದರಿಂದ ಅವರ ತಂಗಿಯಾದ ಸರೋಜಿನಿದೇವಿಯು ಚಿಂತೆಯಲ್ಲಿ ಬಿದ್ದಳು. ಆಗ ಸಾಮಾಜಿಕರಿಗೆ ಉದ್ದೇಶಿಸಿ ಅವಳೊಂದು ವಿನಂತಿಪತ್ರವನ್ನು ಪ್ರಕಟಿಸಿದ್ದಳು. ನಿಸ್ವಾರ್ಥಿಗಳೂ, ದೇಶಸೇವಕರೂ ಆದ ಅರವಿಂದ ಬಾಬುಗಳ ಕಾರ್ಯಕ್ಕೆ ಇಂಥ ಸಮಯದಲ್ಲಿ ಸಹಾಯಮಾಡಲಿಕ್ಕೆ ಒಲ್ಲದ ಪಾಪಿಯಾದರೂ ಯಾರು? ಮಗುವು ಸೃಷ್ಟಿಯನ್ನು ಕಂಡು ಆತ್ಮಭಾವನ್ನು ಬಿಟ್ಟು ಆನಂದಿತವಿರುವವರೆಗೆ ಅದರ ಚಿಂತೆಯನ್ನು ಯಾರು ವಹಿಸುವರು? ಸ್ವಾರ್ಥಪರಭಾವನೆಯು ಹೆಚ್ಚಾಗುತ್ತ ನಡೆದಂತೆ ಪರರ ಜವಾಬುದಾರಿಯು ಕಡಿಮೆಯಾಗುತ್ತ ಹೋಗುವದು. ಇರಲಿ, ಸಾಕಷ್ಟು

ದುಡ್ಡು ಕೂಡಿತು. ಹಾಗೂ ಶ್ರೀಯುತ ಸಿ. ಆರ್. ದಾಸರಂಥ ಅಗಾಧ ಕಾಯದೆ ಪಂಡಿತನು ಸ್ವಯಂಪ್ರೇರಣೆಯಿಂದ ದೇಶಸೇವಕ ಅರವಿಂದರನ್ನು ಉಳಿಸಿಕೊಳ್ಳಲಿಕ್ಕೆ ಒಂದು ಕಾಸು ಸಹ ತಕ್ಕೊಳ್ಳದೆ ಮುಂದೆ ಬಂದನು!

ಅಲಿಪುರದ ಸೆಶನ್ ಕೋರ್ಟಿನಲ್ಲಿ ಬೀಚಕ್ರಾಫ್ಟ ಎಂಬ ನ್ಯಾಯಾಧೀಶರ ಮುಂದೆ ಈ ಖಟ್ಲೆಯು ನಡೆಯಿತು. ನ್ಯಾಯವಿಚಾರಣೆಗೆ ೨೩ನೆಯ ಅಕ್ಟೋಬರಕ್ಕೆ ಆರಂಭವಾಗಿ ಸರಕಾರದ ವತಿಯಿಂದ ಪ್ರಸಿದ್ಧ ಬ್ಯಾರಿಸ್ಟರರಾದ ನಾರ್ಟನ ಎಂಬವರಿದ್ದು ಅವರಿಗೆ ಆಶುತೋಷ ವಿಶ್ವಾಸ ಎಂಬವರು ಸಹಾಯ ಮಾಡುತ್ತಿದ್ದರು. ಸ್ವಯಂಸ್ಫೂರ್ತಿಯಿಂದ ಮುಂದೆ ಬಂದ ಶ್ರೀಯುತ ದಾಸರು ಶ್ರೀ ಅರವಿಂದರ ಪಕ್ಷವನ್ನು ವಹಿಸಿದ್ದರು. ಸರಕಾರೀ ವಕೀಲರಾದ ಆಶುತೋಷ ವಿಶ್ವಾಸ ಎಂಬವರಿಗೆ ಕೆಲವು ಗುಪ್ತ ಪತ್ರಗಳು ಬಂದವು. ಅವುಗಳಲ್ಲಿ, ಈ ಖಟ್ಲೆಗೆ ಆರೋಪಿಗಳ ವಿರುದ್ಧ ಸರಕಾರಕ್ಕೆ ಸಹಾಯ ಮಾಡಬಾರದೆಂಬದೂ, ಒಂದು ವೇಳೆ ಹಾಗೆ ಮಾಡಿದ್ದಾದರೆ ಜೀವಕ್ಕೆ ಎರವಾಗಬೇಕಾದೀತೆಂಬದೂ ಬರೆದಿತ್ತು. ಈ ಪತ್ರಗಳು ಬಂದ ನಂತರ ಕೆಲವು ದಿನಗಳು ಗತಿಸಿದವು. ಮುಂದೆ ೧೯೦೮ನೆಯ ಇಸವಿಯ ೧೦ನೆಯ ಫೆಬ್ರುವರಿಗೆ ಆಶುತೋಷರ ಕೊಲೆಯಾಯಿತು.

ಈ ಮುಜಫ್ಫರಪುರದ ಖೂನಿ ಖಟ್ಲೆಯು ಮುಂದೆ ಅನೇಕ ದಿವಸಗಳ ವರೆಗೆ ಸಾಗಿದರೂ ಶ್ರೀ ಅರವಿಂದರ ಆರೋಪದ ನಿರ್ಣಯವು ಇದೇ ಕೋರ್ಟಿನಲ್ಲಿ ಆಯಿತು. ೧೫ ದಿವಸಗಳವರೆಗೆ ಸರಕಾರದ ಪಕ್ಷವನ್ನು ನಾರ್ಟನರು ಮಂಡಿಸಿದರು. ಆದರೆ ಸಿ ಆರ್ ದಾಸರು ೮ ದಿನಗಳ ತನಕ ಶ್ರೀ ಅರವಿಂದರ ಪಕ್ಷವನ್ನು ಮಂಡಿಸಿ ಸರಕಾರದ ಪಕ್ಷವನ್ನು ಸಪ್ರಮಾಣವಾಗಿ ಖಂಡಿಸಿದರು. ಶ್ರೀಯುತ ದಾಸರವರು ಈ ಕಾಲಕ್ಕೆ ಮಾಡಿದ ವಕ್ತೃತ್ವಪೂರ್ಣ ಭಾಷಣಗಳು ಭಾಷೆಯ ದೃಷ್ಟಿಯಿಂದಲೂ, ರಸಪರಿಪಾಕದ ದೃಷ್ಟಿಯಿಂದಲೂ ವಾಙ್ಮಯದಲ್ಲಿ ಅಜರಾಮರವಾಗಿ ಉಳಿಯುವಂತಿವೆ. ಅಸ್ಸೆಸರರು ಎರಡೂ ಪಕ್ಷಗಳನ್ನು ಕೇಳಿಕೊಂಡು ವಿಚಾರಮಾಡಿ ಶ್ರೀ ಅರವಿಂದ ಬಾಬುಗಳು ನಿರಪರಾಧಿಗಳೆಂದು ತಮ್ಮ ಅಭಿಪ್ರಾಯವನ್ನಿತ್ತರು (೧೩ನೆಯ ಎಪ್ರಿಲ ೧೯೦೯). ನ್ಯಾಯಾಧೀಶರು ಮುಂದೆ ಒಂದು ತಿಂಗಳವರೆಗೆ ಮೌನಧಾರಣ ಮಾಡಿ ಮೇ ತಿಂಗಳಲ್ಲಿ ಶ್ರೀ ಅರವಿಂದರವರು ಪೂರ್ಣ ನಿರ್ದೋಷಿಗಳೆಂದು ತೀರ್ಪುಕೊಟ್ಟರು! ಈ ಖಟ್ಲೆಯ ಉಳಿದ ಕೆಲವು ಆರೋಪಿಗಳು ಹಾಯಕೋರ್ಟಿಗೆ ಕಳಿಸಲ್ಪಟ್ಟರು, ಅಲ್ಲಿ ಅವರ ನ್ಯಾಯವಿಚಾರಣೆಯಾಗಿ ಹದಿನಾಲ್ಕು ಮಂದಿ ಮಾತ್ರ ದೋಷಿಯೆಂದು ನಿರ್ಣಯವಾಯಿತು! ಎತ್ತ ೩೯ ಜನರು, ಎತ್ತ ೧೪ ಜನರು! ಯಾರ ಪಾಪವನ್ನು ಯಾರು ಅನುಭವಿಸಬೇಕು?

ಶ್ರೀ ಅರವಿಂದ ಬಾಬುಗಳಂಥ ಧಾರ್ಮಿಕ ವೃತ್ತಿಯ ಸಜ್ಜನರು ಕೊಲೆಗಳಂಥ ಹೇಯ ಕೃತ್ಯಗಳಿಗೆ ಎಂದಾದರೂ ಅನುಕೂಲವಿರುವದುಂಟೇ? ಸುಳ್ಳು ಆರೋಪದ ಸಲುವಾಗಿ ಒಂದು ವರುಷದ ವರೆಗೆ ಕಾರಾಗೃಹವಾಸವನ್ನು ಸುಮ್ಮಸುಮ್ಮನೆ ಅನುಭವಿಸಬೇ

ಕಾಯಿತು. ಸೆರೆಮನೆಯಿಂದ ಬಂದ ಬಳಿಕ ಶ್ರೀ ಅರವಿಂದರು ಅಪ್ತರಾದ ಕೃಷ್ಣಕುಮಾರ ಘೋಷರಲ್ಲಿ ವಿಶ್ರಾಂತಿಯನ್ನುತಕ್ಕೊಂಡರು ಶ್ರೀ ಅರವಿಂದ ಘೋಷರ ಆಗಮನದಿಂದ ರಾಷ್ಟ್ರೀಯ ಪಕ್ಷದ ಜನರಿಗೆ ಹೇಳಲಾರದಷ್ಟು ಆನಂದವಾಯಿತು. ಯಾಕೆಂದರೆ ಲೋಕಮಾನ್ಯ ತಿಲಕರೇ ಮುಂತಾದ ವೀರಪಕ್ಷದ ಅಧ್ವರ್ಯುಗಳು ಸರಕಾರದ ಆತಿಥ್ಯವನ್ನು ಸ್ವೀಕರಿಸಲಿಕ್ಕೆ ಕಾರಾಗೃಹಕ್ಕೆ ಹೋಗಿದ್ದರು. ವೀರಪಕ್ಷದ ಅನುಯಾಯಿಗಳಿಗೆ ಮಾರ್ಗದರ್ಶಕರಾರೂ ಉಳಿದಿದ್ದಿಲ್ಲ ದಳವಾಯಿಯನ್ನು ಕಳಕೊಂಡ ಸೈನ್ಯದಂತೆ ಸ್ಥಿತಿಯಾಗಿತ್ತು, ಯಾರ ಧ್ವಜದ ಕೆಳಗೆ ಏಕತ್ರರಾಗಬೇಕು, ಯಾರ ಆಜ್ಞೆಗಳನ್ನು ಮನ್ನಿಸಿ ಕಾರ್ಯ ಮಾಡಬೇಕೆಂಬುದು ತಿಳಿಯದ ಕಾರಣ ಅವರು ಗೊಂದಲದಲ್ಲಿ ಬಿದ್ದಿದ್ದರು. ಇಂಥ ಸಮಯದಲ್ಲಿ ಶ್ರೀ ಅರವಿಂದರು ಬಂದುದರಿಂದ ದೇಶಕ್ಕೆ ಹೇಗೆ ತಾನೇ ಆನಂದವಾಗದೆ ಇದ್ದೀತು ! ಶ್ರೀ ಅರವಿಂದರು ದೋಷಮುಕ್ತರಾದ ಸುದ್ದಿಯು ತಂತಿಯಿಂದ ದೇಶದಲ್ಲೆಲ್ಲ ಪಸರಿಸಿತು. ಹಲವು ಕಡೆಗೆ ದೊಡ್ಡ ದೊಡ್ಡ ಸಭೆಗಳಾಗಿ, ಜನರು ತಮ್ಮ ಆನಂದವನ್ನು ವ್ಯಕ್ತಪಡಿಸಹತ್ತಿದರು. ಸರಕಾರಕ್ಕೆ ಬೇಡಾದ ಮನುಷ್ಯನ ವಿಷಯಕ್ಕೆ ಆದರವನ್ನು ವ್ಯಕ್ತಪಡಿಸುವದು ಕೂಡ ಆ ಕಾಲಕ್ಕೆ ಬಲು ಬಿಗಿಯಾಗಿತ್ತು. ಆದರೆ ಜನರ ಅಂತಃಕರಣಗಳು ಉಕ್ಕೇರಿದವು ಹುಣ್ಣಿಮೆಯ ದಿನ ಮೋಡಗಳು ಸಮುದ್ರಕ್ಕೆ ಉಕ್ಕು ಬರಬಾರದೆಂದು ಅಷ್ಟು ಬರುವ ಕ್ಷುಲ್ಲಕ ಪ್ರಯತ್ನಗಳನ್ನು ಮಾಡಿದರೂ ಅವರ ಉಪಯೋಗವೇನಾಗಬೇಕಾಗಿದೆ?

# ೬. ಯೋಗಸಾಧನ.

कर्मिभ्यश्चाधिकोयोगी तस्माद्योगी भवार्जुन ।

*    *    *    *

योगी युंजीत सततं आत्मानं रहसिस्थितः ।

—श्रीमद्भगवद्गीता.

ಪಿತಾಮಹ ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯ ಕೆಳಗೆ ಆದ ರಾಷ್ಟ್ರೀಯ ಸಭೆಯಲ್ಲಿ ನಿಶ್ಚಿತವಾದ ಸ್ವರಾಜ್ಯದ ಧ್ಯೇಯವನ್ನು ಪೂರ್ಣಮಾಡಲಿಕ್ಕೆ ವೀರಪಕ್ಷವು ಆತ್ಮಯಜ್ಞವನ್ನು ಮಾಡಿತು, ಆದರೆ ವೀರಪಕ್ಷದ ಅನುಕರಣವನ್ನು ಇತರರು ಮಾಡಲಿಲ್ಲ. ಶ್ರೀ ಭಗವತೀ ಸ್ವಾತಂತ್ರ್ಯತಾದೇವಿಯ ಉಪಾಸನೆಯು ಸಹಜವಾದ ಮಾತಲ್ಲ. ಭಕ್ತರಿಗೆ ಪ್ರಸನ್ನಳಾಗುವ ಮುಂಚೆ ಅವಳು ಅವರ ಪರೀಕ್ಷೆ ಮಾಡುವಳು. ಸ್ವರಾಜ್ಯಾಮೃತವನ್ನು ಸಂಪಾದಿಸಲಿಕ್ಕೆ ರಾಜಕಾರಣೋದಧಿಯ ಮಂಥನವು ಭರದಿಂದ ನಡೆಯಿತು. ಅಮೃತಸಿದ್ಧಿಯಾಗುವ ಮೊದಲು ಹಾಲಾಹಲವು ಸತ್ವಪರೀಕ್ಷಣೆಗಾಗಿ ಹೊರಬೀಳುತ್ತಿರುತ್ತದೆ. ವಿಶ್ವಾಮಿತ್ರನ ತಪಶ್ಚರ್ಯಕ್ಕೆ ಮಧ್ಯದಲ್ಲಿ ಅನೇಕ ವಿಘ್ನಗಳು ಬಂದವು. ಅರ್ಜುನನಿಗೆ ಪಾಶುಪತಾಸ್ತ್ರವನ್ನು ದೊರಕಿಸುವ ಮೊದಲು ಶಬರ ವೇಷಧಾರಿಯಾದ ಶಂಕರನಿಂದ ಪೈಮುರಿ ಥಳಿಸಿಕೊಳ್ಳಬೇಕಾಯಿತು. ಅಂತೂ ಯಾವದೊಂದು ಮಹಾಕಾರ್ಯದ ಸಿದ್ಧಿಯಾಗುವ ಮುಂಚೆ ಮಧ್ಯದಲ್ಲಿ ಸಂಕಟಗಳು ಬರುವದು ನಿಶ್ಚಿತವಾದದ್ದು. ಈ ಸಂಕಟಗಳಿಗೆ ಸಾಧಕನು ಭಯಪಟ್ಟು ಮಾರ್ಗಬಿಟ್ಟರೆ ಸಿದ್ಧಿಯು ದೊರೆಯಲಾರದು. ಸಪ್ಪಗಡದ ಬಂದುವನ್ನು ಸಹಿಸಿ ತನ್ನ ಧ್ಯೇಯದ ಕಡೆಗೆ ಲಕ್ಷ್ಯವಿಟ್ಟು ಕಾರ್ಯ ಮಾಡಿದರೆ ಯಾವದು ತಾನೇ ಅಸಾಧ್ಯವು?

ಸ್ವರಾಜ್ಯಕಾಂಕ್ಷಿಗಳಾದ ಭಾರತೀಯರ ಸತ್ವಪರೀಕ್ಷೆಯ ಕಾಲವು ಬಂತು. ಅವರು ಪರೀಕ್ಷೆಯಲ್ಲಿ ಪೂರ್ಣವಾಗಿ ತೇರ್ಗಡೆ ಹೊಂದಲಿಲ್ಲ. ಜಗತ್ತಿನಲ್ಲಿ ಬಿತ್ತಿದ್ದನ್ನು ಬೆಳಕೊಳ್ಳಬೇಕೆಂಬ ನ್ಯಾಯವಿದೆ. ಪೇಟೆಯಲ್ಲಿ ಒಂದು ಆಣೆಯನ್ನು ಕೊಟ್ಟು ನಾಲ್ಕು ಆಣೆಯ ಜಿನಸನ್ನು ಬೇಡಿದರೆ ಹೇಗೆ ಸಿಕ್ಕೀತು? ಸ್ವಾತಂತ್ರ್ಯದೇವಿಯ ಪರೀಕ್ಷೆಯಲ್ಲಿ ಪೂರ್ಣವಾಗಿ ಪಾಸಾಗದ್ದರಿಂದ ಅವರ ಗುಣಕ್ಕೆ ತಕ್ಕಂತ ಅಷ್ಟೇ ಫಲವು ದೊರೆಯಿತು, ಮೋರ್ಲೆ ಮಿಂಟೋ ಸುಧಾರಣೆಗಳೆಂಥ ದೀಡದಮಡಿಯ ಬೆಲೆಯ ಸುಧಾರಣೆಗಳು ಅಮಲಿನಲ್ಲಿ ಬಂದವು. ಆಶೆಬುರುಕ ಮಂದ ಪಕ್ಷದವರು ಇಂಥ ಗೀಳು ಸುಧಾರಣೆಗಳನ್ನು ಅಪ್ಪಿಕೊಂಡರು. ವೀರಪಕ್ಷದವರು ಅವುಗಳನ್ನು ತಿರಸ್ಕರಿಸಿ ತಮ್ಮ ಇಷ್ಟಧ್ಯೇಯದ ಕಡೆಗೆ ಸಾಗಿದರು. ಆದರೆ ಸರಕಾರದವರು ಇವರ ಬೆನ್ನು ಬಿಡಲಿಲ್ಲ.

ದೇಶದಲ್ಲಿ ವೀರಪಕ್ಷದ ಮುಖಂಡರನ್ನು ಉಳಿಯಗೊಡುವಂತಿಲ್ಲೆಂಬ ಹಟ ತೊಟ್ಟಂತೆ ಸರಕಾರದ ಕೃತಿಯು ನಡೆಯಿತು. ಲೋಕಮಾನ್ಯರಿಗೆ ೬ ವರ್ಷದ ಶಿಕ್ಷೆ ಕೊಟ್ಟು ಮಂಡಲೆಗೆ ಕಳಿಸಿದರು. ಲಜಪತರಾಯರು ಗಡಿದಾಟಿಸಲ್ಪಟ್ಟರು. ಬಿಪಿನಪಾಲರು ಶಿಕ್ಷೆಯನ್ನು ಅನುಭವಿಸಿ ಬಂದನಂತರ ಇಲ್ಲಿರುವದರಿಂದ ಕಾರ್ಯಕ್ಕೆ ಅನುಕೂಲವಾಗುವದಿಲ್ಲೆಂದು ಇಂಗ್ಲಂಡಕ್ಕೆ ಪಯಣ ಬೆಳೆಸಿದರು. ತಲೆತಿರುಕ ತರುಣರ ಮೂರ್ಖತನದ ಕೃತಿಗಳಿಂದ ವೀರಪಕ್ಷದ ಮುಖಂಡರನ್ನು ಹಿಡಿಯಲಿಕ್ಕೆ ಸರಕಾರಕ್ಕೆ ಅನುಕೂಲವಾಯಿತು. ಮುಂದಾಳುಗಳ ಅವಸ್ಥೆಯು ಹೀಗಾದಬಳಿಕ ಅನುಯಾಯಿ ವರ್ಗದ ಗೋಳು ಎಷ್ಟೆಂದು ಹೇಳಬೇಕು? ಶ್ರೀ ಅರವಿಂದ ಘೋಷರು ಕಾರಾಗೃಹದಿಂದ ಬರುವಷ್ಟರಲ್ಲಿ ಇಷ್ಟೆಲ್ಲ ಸ್ಥಿತಿಯಾಗಿತ್ತು. ದೇಶದಲ್ಲಿ ಎಲ್ಲ ಕಡೆಗೆ ಘೋರ ಶಾಂತತೆಯು ಪಸರಿಸಿತ್ತು. ವಂದೇ ಮಾತರಂದ ಪ್ರಣವೋಚ್ಚಾರವನ್ನು ಮಾಡಲಿಕ್ಕೆ ಜನರು ಅಂಜಹತ್ತಿದ್ದರು. ೧೯೦೯ರಲ್ಲಿ ಕಾರಾಗೃಹದಿಂದ ಬಂದಬಳಿಕ ಶ್ರೀ ಅರವಿಂದರ ಕಡೆಗೆ ಇಡೀ ಹಿಂದುಸ್ಥಾನದ ವೀರಪಕ್ಷದ ಮುಖಂಡತನವು ಬಂತು; ಈ ಜವಾಬದಾರಿಯ ಸ್ಥಾನಕ್ಕೆ ತಕ್ಕಂತೆ ಉತ್ಸಾಹದಿಂದ ಕಾರ್ಯಕ್ಕೆ ಆರಂಭಿಸಿದರು. ಕರ್ಮಯೋಗಿನ್ ಎಂಬ ವಾರಪತ್ರಿಕೆಯಲ್ಲಿ ಲೇಖಗಳನ್ನು ಬರೆಯಹತ್ತಿದರು. ದೇಶದಲ್ಲಿ ತಿರುಗಾಡಿ ರಾಷ್ಟ್ರಧರ್ಮದ ಗೀತೋಪದೇಶ ಮಾಡಹತ್ತಿದರು. ಶ್ರೀ ಅರವಿಂದರು ಹೋದ ಸಭೆಗಳಿಗೆ ಹಾಜರಿರಲಿಕ್ಕೆ ಮಂದಪಕ್ಷದ ಜನರು ಅಂಜಹತ್ತಿದರು. ಕೆಲವು ಪ್ರೆಸ್ಸಿನವರು ಇವರ ವ್ಯಾಖ್ಯಾನಗಳನ್ನು ಮುದ್ರಿಸಲಿಕ್ಕೆ ಬೆದರಹತ್ತಿದರು! ಸೋಡಚೀಟಿ, ಅಮಲದಾರರ ಮುಕ್ಕಾಮುಗಳನ್ನು ಮುದ್ರಿಸಲಿಕ್ಕೆ ಸವಿಗಲಿತಂಥ, ಹೊಟ್ಟೆಗಾಗಿ ಪ್ರೆಸ್ಸ-ಪತ್ರಿಕೆಗಳನ್ನು ನಡಿಸುವಂಥ ಜನರು ಶ್ರೀ ಅರವಿಂದಘೋಷರ ತೇಜಸ್ವಿಗಳಾದ ವಿಚಾರಗಳನ್ನು ಮುದ್ರಿಸಲಿಕ್ಕೆ ಹೇಗೆ ಧೈರ್ಯಗೊಂಡಾರು? ಜನರು ತಮ್ಮ ಕರ್ತವ್ಯವನ್ನು ಮರೆತರೂ ಶ್ರೀ ಅರವಿಂದರು ಎದೆಗುಂದದೆ ಅವ್ಯಾಹತವಾಗಿ ಕಾರ್ಯವನ್ನು ನಡಿಸಿದರು. ಸರಕಾರದಿಂದ ಪ್ರೇರಿತರಾದ ಚಾಡಬುರುಕ ಚಾರರು ನೆಳಲಿನಂತೆ ಅರವಿಂದರ ಬೆನ್ನು ಬಿಡಲಿಲ್ಲ. ಆದರೆ ಇದಕ್ಕೆ ಸೊಪ್ಪು ಹಾಕದೆ ಶ್ರೀ ಅರವಿಂದರು ಕಾರ್ಯತತ್ಪರರಾಗಿದ್ದರು.

ಆದರೆ ಶ್ರೀ ಅರವಿಂದರ ಇತ್ತಿತ್ತಲಾಗಿನ ಕರ್ತವ್ಯಗಳ ಭಾವನೆಯಲ್ಲಿ ರಾಜಕಾರಣದಕಿಂತಲೂ ಧರ್ಮದ ಪ್ರಮಾಣವು ಬಹಳ ಹೆಚ್ಚಿತ್ತು. ರಾಜಕಾರಣವನ್ನು ಧಾರ್ಮಿಕ ದೃಷ್ಟಿಯಿಂದ ನಡಿಸಬೇಕೆಂದು ಮನಗಂಡು ಅವರು ಹಾಗೆ ಉಪದೇಶಿಸಹತ್ತಿದರು. ಶರೆಮನೆಯಿಂದ ಬಂದ ಕೂಡಲೆ ಉತ್ತರಪಾರಾದಲ್ಲಿ ಆದ ಉಪನ್ಯಾಸದಲ್ಲಿ ಶ್ರೀ ಅರವಿಂದರು ತಮಗೆ ಕಾರಾಗೃಹದಲ್ಲಿ ಶ್ರೀ ವಾಸುದೇವನ ದರ್ಶನವಾಯಿತೆಂದೂ, ಆತನು ತಮಗೊಂದು ಆದೇಶವನ್ನಿತ್ತನೆಂದೂ ಪ್ರಕಟಿಸಿದರು. ಕೆಲವು ನಾಸ್ತಿಕರಿಗೆ ಇದೊಂದು ಟೀಕೆಯ ವಿಷಯವೇ ಆಯಿತು.

ಯಾವದೊಂದು ವಿಷಯದ ಮೇಲೆ ಅಭಿಪ್ರಾಯವನ್ನು ಕೊಡುವವರು ಆ ವಿಷಯದಲ್ಲಿ ತಜ್ಞರಿರಬೇಕಾಗುತ್ತದೆ. ಗಣಿತವರಿಯದ ಮೂಢನು ಆ ಶಾಸ್ತ್ರದ ಮೇಲೆ ಮತ ಕೊಟ್ಟರೆ ಅದಕ್ಕೆ ಬೆಲೆ ಎಷ್ಟು ಬಂದೀತು? ಧಾರ್ಮಿಕ ವಿಚಾರಗಳ ಮೇಲೆ ಮತವನ್ನು ಕೊಡಬೇಕಾದರೆ ಯೋಗ್ಯತೆ ಬೇಕಾಗುತ್ತದೆ. ಶ್ರೀ ಅರವಿಂದರವರಿಗೆ ಭಗವಾನ್ ವಾಸುದೇವನ ದರ್ಶನವಾದುದರ ಮೇಲೆ ಕೆಲ ಜನರು ಟೀಕೆ ಮಾಡ ಹತ್ತಿದರು. ಆದರೆ ಅದರಲ್ಲಿ ಹುರುಳು ಇದ್ದಿಲ್ಲ. ಶ್ರೀ ಅರವಿಂದರವರಿಗೆ ಪರಮಾತ್ಮನು ಪ್ರತ್ಯಕ್ಷನಾಗಿದ್ದರೆ ಅದರಲ್ಲಿ ಆಶ್ಚರ್ಯವೇನು? ಯಾಕಂದರೆ, ಅವರು ೧೯೦೬ ರಿಂದ ಈ ಸಾಧನ ಮಾರ್ಗದಲ್ಲಿದ್ದರು ತಮ್ಮ ಪತ್ನಿಯಾದ ಮೃಣಾಲಿನಿ ದೇವಿಗೆ ೧೯೦೫ ರಲ್ಲಿ ಬರೆದ ಪತ್ರದೊಳಗೆ, ಅವರು ತಮಗೆ ದೇವರನ್ನು ಕಾಣುವ ಹುಚ್ಚು ಹಿಡಿದಿರುವದೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ ದೇವರನ್ನು ಕಂಡುಕೊಳ್ಳದೆ ಬಿಡಲಿಕ್ಕಿಲ್ಲೆಂಬ ಇವರ ಹಟವು ೧೯೦೮ರವರೆಗೆ ಅಂದರೆ ೪-೫ ವರುಷಗಳವರೆಗೆ ಸತತವಿದ್ದು ಅದರಲ್ಲಿ ಯಶಸ್ಸು ಸಿಕ್ಕಿದ್ದರೆ ಆಶ್ಚರ್ಯವಾವುದು? ಮನಸ್ಸು ಕಾಮಕ್ರೋಧಾದಿ ವಿಷಯಗಳಿಂದ ದೂಷಿತವಾಗಿದ್ದಾಗ ಅದಕ್ಕೆ ಪರಮೇಶ್ವರನ ಸಂದೇಶವನ್ನು ಕಂಡುಹಿಡಿಯುವ ಸಾಮರ್ಥ್ಯವಿರುವದಿಲ್ಲ. ದೇವದರ್ಶನವಾಗುದಿಲ್ಲ ಕನ್ನಡಿಯ ಮೇಲಿನ ಧೂಳು ತೆಗೆದ ಹೊರತು ಅದರಲ್ಲಿ ಪ್ರತಿಬಿಂಬವು ಕಾಣುವದಿಲ್ಲ. ಸರೋವರವು ಅಲ್ಲೋಲ ಕಲ್ಲೋಲವಾಗಿ ನೀರು ಕದಡಿ ಕಶ್ಮಲವಾಗಿದ್ದರೆ ತಳವು ಕಾಣುವಬಗೆ ಹೇಗೆ? ಶಾಂತವಾಗಿದ್ದಾಗ ಆ ಗೋಳದ ಬುಡವು ಉತ್ತಮರೀತಿಯಿಂದ ತೋರುವದು. ಮನಸ್ಸಾಗರವು ನಾನಾತರದ ವಿಚಾರಗಳ ಆಘಾತಗಳಿಂದ ಅಲ್ಲೋಲ ಕಲ್ಲೋಲವಾಗುತ್ತಿರಲು ಈಶದರ್ಶನವಾಗುವ ಸಂಭವವೆಂತು?

ಈ ವಿಷಯಕ್ಕೆ "Yogic Sadhan" ಎಂಬ ಚಿಕ್ಕ ಪುಸ್ತಕದಲ್ಲಿ ಒಬ್ಬ ಯೋಗಿಯು ಅನುಭವದಿಂದ ಬರೆದಿರುವದೇನಂದರೆ :—Animals think with their Manas, and animals are not able to form ideas that do not relate themselves to some image, form, sound, smell, touch, taste etc They are bound by their sensations That is why in animals the Budhi is dormant, so far as it acts behind the veil ."I saw that," "I heard that," therefore it is true, that is the reasoning of the Manas That is why people who have poorly developed Budhi, attach so much importance to what they have seen or read "I have seen it in Print" says the just literate man, and he thinks he has closed the argument ......While it (Manas) is busy, knowledge is impossible You can get only fragments of knowledge That is true, and the quiet is no doubt essential to the yogin .. .. ..That is why the Vedant attaches so much importance to samadhi.

ಶ್ರೀ ಅರವಿಂದರು ಬಡೋದೆಯಿಂದ ಹೊರಬಿದ್ದ ಬಳಿಕ ವಿಷಯಜಾಲದಿಂದ ಮುಕ್ತರಾಗಿದ್ದರು ಯುಕ್ತಾಹಾರ ವಿಹಾರಗಳಿಂದ ಸಾಧನೆಯನ್ನು ನಡಿಸಿದ್ದರು. ಬುದ್ಧಿಯನ್ನು ಶುದ್ಧೀಕರಿಸಲಿಕ್ಕೆ ಪರಿಶ್ರಮಬಡುತ್ತಿದ್ದರು ಕಾರಾಗೃಹದಲ್ಲಿ ಹೋದ ಬಳಿಕ ಅನಾಯಾಸವಾಗಿ ಸಿಕ್ಕ ಏಕಾಂತದ ಉಪಯೋಗವನ್ನು ತಮ್ಮ ಇಷ್ಟದಂತೆ ಮಾಡಿಕೊಳ್ಳ ಹತ್ತಿದರು ಇದರಿಂದ ಅವರ ಶಕ್ತಿಯು ವೃದ್ಧಿಂಗತವಾಗಿ ಇಷ್ಟ ಸಾಧ್ಯವಾಗಿದ್ದರೆ ಅಜ್ಞಾನೀ ಜನರು ಅದಕ್ಕೆ ಹೆಸರಿಡುವ ಕಾರಣವೇನು? ಶ್ರೀ ಅರವಿಂದರು ತಮ್ಮ ಪತ್ನಿಗೆ ಬರೆದ ಮತ್ತೊಂದು ಪತ್ರದಲ್ಲಿ ಬರೆದುದೇನಂದರೆ "ಶಾಸ್ತ್ರಗಳಲ್ಲಿ ಹೇಳಿದ ಮಾರ್ಗದಂತೆ ನಡೆದಿರುವ ಹಾದಿಯಲ್ಲಿ ಹತ್ತುವ ಕೆಲವು ಸಂಗತಿಗಳ ಅನುಭವವು ನನಗೆ ಬರಹತ್ತಿದೆ; ಇದೇ ಕ್ರಮವನ್ನು ಮುಂದೆ ನಡಿಸಿದರೆ ನನಗೆ ಸಿದ್ಧಿಯು ಸಿಗಲಿಕ್ಕೆ ಬೇಕು." ಶುದ್ಧ ಮನಸ್ಸಿನಿಂದ ಜಗತ್ತಿನ ಗೂಢ ರಹಸ್ಯವನು, ತಿಳಿಯಲಿಕ್ಕೆ ಬರುತ್ತದೆ. ಅದೇ ಯೋಗಿಕ ಸಾಧನವೆಂಬ ಪುಸ್ತಕದಲ್ಲಿ ಸಹ ಈ ವಿಷಯಕ್ಕೆ ಬರೆದುದೇನಂದರೆ " The proof of that you can get daily, when the yogic power is developed . ...Man can see with his Budhi the truth about a thing he has never seen or known before "

ಸತ್ಯಜ್ಞಾನವು ಪೂರ್ಣ ಶುದ್ಧ ಮನಸ್ಸನಿಗೇ ಆಗುತ್ತದೆ. ಪರಮೇಶ್ವರನ ಆದೇಶವನ್ನು ತಿಳಿಯುವ ಸಾಮರ್ಥ್ಯವೂ ಇಂಥವನಿಗೇ ಇರುತ್ತದೆ. ಆ ಯೋಗಿಕ ಸಾಧನದಲ್ಲಿ ಇನ್ನೊಂದು ಕಡೆಗೆ ಹೇಳಿರುವದೇನಂದರೆ : "Only the shudha can safely rely on having this kind of Adesh, ashudha yogin often mistakes his own imaginations, emotions or even desires for the Adesha "

ಪರಮೇಶನ ಆದೇಶ ಗ್ರಹಣ ಮಾಡಿ ಕಾರಾಗೃಹವಾಸದಿಂದ ಹೊರಬಿದ್ದ ಶ್ರೀ ಅರವಿಂದ ಯೋಗಿಗಳು ನೂತನ ಉತ್ಸಾಹದಿಂದ ಕಾರ್ಯಕ್ಕೆ ಹತ್ತಿದರು, ಲೋಕಮಾನ್ಯಾದಿಗಳನ್ನು ಒಂದಿಲ್ಲೊಂದು ತರದಿಂದ ಭರತಖಂಡದ ರಂಗಭೂಮಿಯ ಮೇಲಿಂದ ಅದೃಶ್ಯ ಮಾಡಿ ಕೃತಾರ್ಥವಾದ ಸರಕಾರವು ಅರವಿಂದ ಯೋಗಿಗಳ ಮೇಲೆ ಒಗೆದ ಬಲೆ ತಪ್ಪಿದ್ದನ್ನು ಕಂಡು, ಬಹಳ ವಿಷಾದಪಟ್ಟಿರಬಹುದು. ಅರವಿಂದ ಯೋಗಿಗಳು ರಾಷ್ಟ್ರಕಾರ್ಯವನ್ನು ಆಜನ್ಮಪರ್ಯಂತರ ನಡಿಸುವದನ್ನು ನಿಶ್ಚಯಿಸಿದಂತೆ ಸರಕಾರದವರು ರಾಷ್ಟ್ರಕಾರ್ಯದಲ್ಲಿ ಕಡೆತನಕ ಕಲ್ಲು ಹಾಕುವದನ್ನು ಗೊತ್ತು ಮಾಡಿದ್ದರು. ಆರೋಪದಿಂದ ಮುಕ್ತರಾಗಿ ಪುಟ ಕೊಟ್ಟ ಬಂಗಾರದಂತೆ, ಕೆತ್ತಿದ ವಜ್ರದಹಾಗೆ ಪ್ರಕರ್ಷಿತ ತೇಜಸ್ಸುಳ್ಳವರಾಗಿ ಶ್ರೀ ಅರವಿಂದ ಯೋಗಿಗಳು ಮತ್ತೆ ಕಾರ್ಯಕ್ಕೆ ಹತ್ತಿದ್ದನ್ನು ಕಂಡು ಅಧಿಕಾರಿಗಳಿಗೆ ಹೊಟ್ಟೆಕಡತವು ಎದ್ದಿತು. ಏನಾದರೊಂದು ನೆವನವನ್ನು ಹುಡುಕುತ್ತಿದ್ದ ಅಧಿಕಾರಿಗಳಿಗೆ ಅದು ಸಿಗಲಿಕ್ಕೆ ತಡವಾಗಲಿಲ್ಲ. ಕರ್ಮಯೋಗಿನ್‌ದ ೧೯೦೯ ನೆಯ ಇಸವಿಯ ಡಿಶಂಬರ ತಿಂಗಳ ೫ನೇ ತಾರೀಖಿನ ಸಂಚಿಕೆಯಲ್ಲಿ ಬರೆದ ಲೇಖವು ಆಕ್ಷೇಪಾರ್ಹ

ವೆಂದು ಸಂಶಯ ತಕ್ಕೊಂಡು ಶ್ರೀ ಅರವಿಂದ ಯೋಗಿಗಳನ್ನು ಹಿಡಿಯುವದಕ್ಕಾಗಿ ೧೯೧೦ರ ಮಾರ್ಚ ತಿಂಗಳಲ್ಲಿ ವಾರಂಟು ಹುಟ್ಟಿತು '

ಮಂದಪಕ್ಷದವರು ಸರಕಾರದ ಪಕ್ಷದಲ್ಲಿ ಸೇರಿಕೊಂಡುದರಿಂದಲೂ, ಮುಸಲ್ಮಾನರು ರಾಜಕಾರಣದಲ್ಲಿ ಅಷ್ಟೊಂದು ಮನಸ್ಸು ಹಾಕದೆ ಇದ್ದುದರಿಂದಲೂ, ಸಾಮಾನ್ಯ ಜನರು ಧೈರ್ಯದಿಂದ ಕಡೆತನಕ ನಿಲ್ಲದ್ದರಿಂದಲೂ, ತಲೆತಿರುಕ ಜನರು ಕೊಲೆಗಳಂಥ ಸಿಂದ್ಯಕೃತ್ಯಗಳನ್ನು ಮಾಡಿದುದರಿಂದಲೂ, ಸರಕಾರವು ನ್ಯಾಯಾನ್ಯಾಯಗಳನ್ನು ಲಕ್ಷಿಸದೆ ಉಗ್ರಸ್ವರೂಪವನ್ನು ಧರಿಸಿದುದರಿಂದಲೂ ವೀರಪಕ್ಷದವರಿಗೆ ತಮ್ಮ ಕಾರ್ಯವನ್ನು ಅವ್ಯಾಹತವಾಗಿ ನಡಿಸುವದು ಎಷ್ಟು ದುಸ್ತರವಾಯಿತೆಂಬದನ್ನು ಹಿಂದೆ ಹೇಳಿದೆ. ಇಂಥ ವಿಪರೀತ ಕಾಲದಲ್ಲಿ ಬ್ರಿಟಿಶ ಹದ್ದಿನಲ್ಲಿ ನಿಲ್ಲುವದರಿಂದ ಆಗುವ ಕಾರ್ಯಕ್ಕಿಂತ ಬ್ರಿಟಿಶರ ಕಾಟವಾಗದಂಥದೊಂದು ಸ್ಥಾನಕ್ಕೆ ಹೋಗಿ ಅಲ್ಲಿ ನಿಂತು, ಮಾಡಿದರೆ ಆಗುವ ಕಾರ್ಯವು ದೇಶಕ್ಕೆ ಹೆಚ್ಚು ಉಪಯುಕ್ತವಾದೀತೆಂದು ಶ್ರೀ ಅರವಿಂದಯೋಗಿಗಳು ಗೊತ್ತು ಮಾಡಿದರು ಮತ್ತು ಅವರಿಗಾದ ಪೂರ್ವ ಸೂಚನೆಯಂತೆ ಪಾಂಡೀಚೇರಿಗೆ ಫ್ರೆಂಚ ಹದ್ದಿನಲ್ಲಿ ಹೋಗಿ ಶಾಂತತನದಿಂದ ಕಾರ್ಯಕ್ಕೆ ಹತ್ತಿದರು. ಅನೇಕ ಗುಪ್ತ ಚಾರರು ಬೇರೆ ಬೇರೆ ವೇಷಗಳಲ್ಲಿ ಹೋಗಿ ಅರವಿಂದ ಯೋಗಿಗಳನ್ನು ಪೀಡಿಸಹತ್ತಿದರು- ಆದರೆ ಆ ಯಾವ ಕಾಟಗಳಿಂದಲೂ ಧ್ಯೇಯಚ್ಯುತರಾಗದೆ ಶ್ರೀ ಅರವಿಂದ ಯೋಗಿಗಳು ತಮ್ಮ ಮಹಾಕಾರ್ಯವನ್ನು ಅವ್ಯಾಹತವಾಗಿ ಇಂದಿಗೂ ನಡೆಸಿದ್ದಾರೆ.

ಶ್ರೀ ಅರವಿಂದ ಯೋಗಿಗಳು ಪಾಂಡಿಚೇರಿಗೆ ಹೋದ ಬಳಿಕ ಸೌ. ಮೃಣಾಲಿನೀ ದೇವಿಯವರು ತವರ ಮನೆಯಲ್ಲಿ ಕಾಲಹರಣ ಮಾಡಿದರು ಇವರ ಪ್ರವೃತ್ತಿಯು ವೈರಾಗ್ಯದ ಕಡೆಗೆ ವಿಶೇಷವಿದ್ದಿಲ್ಲ. ಇವರಿಗೆ ಮಕ್ಕಳಿಲ್ಲ ಮೊನ್ನಿನ ಇನ್‌ಫ್ಲುಎಂಝಾದ ಪಿಡುಗಿನಲ್ಲಿ ಸ್ವರ್ಗಸ್ಥರಾದರು (೧೭ನೆಯ ಡಿಶೆಂಬರ ೧೯೧೮)

ಶ್ರೀ ಅರವಿಂದ ಯೋಗಿಗಳು ಪಾಂಡಿಚೇರಿಯಲ್ಲಿ ಫ್ರೆಂಚರ ವೈಭವದ ಕಾಲದಲ್ಲಿ ಕಟ್ಟಿದ ಒಂದು ದೊಡ್ಡ ಅರಮನೆಯಂತಿರುವ ಹಳೇ ವಾಡೆಯಲ್ಲಿ ವಾಸವಾಗಿದ್ದಾರೆ, ಈ ಪುಣ್ಯಭವನದ ಅಂತರ್ವ್ಯವಸ್ಥೆಯೆಲ್ಲ ಹಿಂದೂ ಪದ್ಧತಿಯದೇ ಇರುತ್ತದೆ. ಶ್ರೀ ಅರವಿಂದ ಯೋಗಿಗಳು ಇಲ್ಲಿಗೆ ಬಂದು ಈಗ ಸುಮಾರು ೧೨ ವರುಷಗಳಾದವು. ಸರ್ವ ಕಾಲ ಬಹುತರ ಏಕಾಂತದಲ್ಲಿಯೇ ಕಳೆಯುತ್ತಾರೆ ಇಲ್ಲಿ ಇವರ ತೀರ ಪರಿಚಯದೊಳಗಿನ ಜನರೇ ಕಡಿಮೆ. ಇಬ್ಬರು ಫ್ರೆಂಚ ಮುಮುಕ್ಷುಗಳು ಶ್ರೀ ಅರವಿಂದಯೋಗಿಗಳ ಸಹಕಾರಿಗಳಾಗಿದ್ದಾರೆ. ೧೯೧೦ರ ಎಪ್ರಿಲ ತಿಂಗಳಲ್ಲಿ ಎಮ್. ರಿಚರ್ಡರು ಫ್ರಾನ್ಸದಿಂದ ಆದೇ ಹೊಸದಾಗಿ ಪಾಂಡಿಚೇರಿಗೆ ಬಂದಾಗ ಶ್ರೀ ಅರವಿಂದ ಯೋಗಿಗಳ ಪ್ರಥಮ ದರ್ಶನವಾಯಿತು. ಯೋಗಸಾಧನದ ಜಿಜ್ಞಾಸೆಯುಳ್ಳವರಾಗಿ ಎಮ್. ರಿಚರ್ಡರು ಅರವಿಂದ ಯೋಗಿಗಳೊಡನೆ ಕೂಡಿರಹತ್ತಿದರು ೧೯೧೪ರಲ್ಲಿ ಎಮ್. ರಿಚರ್ಡರು ಫ್ರಾನ್ಸದಿಂದ ತಿರುಗಿ ಬರುವಾಗ ತಮ್ಮ ಪತ್ನಿಯಾದ ಮಿರಾರಿಚರ್ಡ ಎಂಬವಳನ್ನು ಸಂಗಡ ತಂದರು.

ಆದರೆ ಕೂಡಲೆ ಯುದ್ಧವು ಆರಂಭವಾಗಿ ಫ್ರಾನ್ಸವು ಅದರಲ್ಲಿ ಭಾಗ ತಕ್ಕೊಳ್ಳುತ್ತಲೆ
ಇವರೀರ್ವರಿಗೂ ಫ್ರಾನ್ಸಕ್ಕೆ ಹೋಗಲೇಬೇಕಾಯಿತು. ಆದರೆ ಯುದ್ಧವು ಮುಗಿ
ದುದರಿಂದ ಈಗ ಮತ್ತೆ ಪಾಂಡಿಚೇರಿಗೆ ಬಂದಿದ್ದಾರೆ. ಪ್ರತಿ ರವಿವಾರಕ್ಕೊಮ್ಮೆ
ಬಹುತರ ಅರವಿಂದ ಯೋಗಿಗಳು ವಿಚಾರವಿನಿಮಯಕ್ಕಾಗಿ ಸಹಕಾರಿ ಬಂಧು
ಗಳೊಡನೆ ಒತ್ತಟ್ಟಿಗೆ ಕೂಡುವರು. ಧ್ಯಾನ-ಧಾರಣಾದಿ ಯೋಗಸಾಧನಗಳಲ್ಲಿಯೂ
ಉದಾತ್ತ ವಿಚಾರಗಳ ಲೇಖನದಲ್ಲಿಯೂ ಮಹರ್ಷಿಗಳ ಎಲ್ಲ ವೇಳೆಯು ಹೋಗುವದು.
ಎಷ್ಟೋ ಜನರು ಈ ಅದ್ಭುತ ಚರಿತ್ರದ ಈ ಯೋಗಿಯನ್ನು ಕಂಡು ನೇತ್ರಸಾಫಲ್ಯ ಮಾ
ಡಿಕೊಳ್ಳಬೇಕೆಂದು ಹೋಗುತ್ತಾರೆ. ಆದರೆ ದರ್ಶನವಾಗುವದೇ ದುರ್ಲಭವು. ಒಳ್ಳೇ
ಪ್ರಯತ್ನದಿಂದ ದರ್ಶನದ ಸುಪ್ರಸಂಗವು ಬಂದರೂ ಸಂಭಾಷಣದ ಕಪಿಲಾಷ್ಠಿಯ
ಯೋಗವು ಬರುವದು ಅಸಾಧ್ಯವು. ಅನೇಕರು ಭೆಟ್ಟಿಗೆ ಹೋಗುವರು. ಆಗ ಶ್ರೀ ಅರವಿಂದ
ರೊಂದು ವೇತ್ರಾಸನದ ಮೇಲೆ ಪ್ರೇಕ್ಷಕರು ಮತ್ತೊಂದರ ಮೇಲೆ ಗಂಭೀರವಾದ ಮೌನ
ವನ್ನು ತಾಳಿ ಸ್ವಸ್ಥವಾಗಿ ಕುಳಿತುಕೊಳ್ಳುವ ಪ್ರಸಂಗವೇ ಬಹುತರ ಬರುವದು. ಈಗ
ಯೋಗಿಗಳಿಗೆ ಪೂರ್ಣಾವಸ್ಥೆಯು ದೊರೆತಿದ್ದು ಅಪಾರ ಸಿದ್ಧಿಗಳನ್ನು ಸಹ ಪೂರ್ಣವಾಗಿ
ಜಯಿಸಿದ್ದಾರೆ. ದೀರ್ಘ ತಪಶ್ಚರ್ಯದಿಂದ ಭೌತಿಕ ಶರೀರವು ಕೃಶವಾಗಿದ್ದರೂ ಯೋಗ
ಶಕ್ತಿಯು ಹೆಚ್ಚಳದಿಂದ ಆತ್ಮನ ಸ್ಫುರಣಗಳು ಹೆಚ್ಚಾಗಿವೆ. ಆಹಾರಾದಿಗಳ ನಿಯಮನ
ದಿಂದ ಕಣ್ಣುಗಳು ಒಳಸಿಕ್ಕಿದ್ದರೂ ಅವುಗಳೊಳಗಿನ ತಪಃಪ್ರಭಾವದ ತೇಜಸ್ಸಿನ ಮಿಂಚು
ಹೊರಬೀಳುತ್ತದೆ. ಶ್ರೀ ಅರವಿಂದ ಯೋಗಿಗಳ ತಪಃಪ್ರಭಾವದಿಂದ ತೇಜೋಮಯ
ವಾಗಿರುವ ಆ ಕೃಶಾಂಗವು, ಆತ್ಮಾನಂದದಿಂದುಂಟಾದ ಶಾಂತಿಯನ್ನು ವ್ಯಕ್ತಪಡಿಸುವ ಮಂ
ದಸ್ಮಿತದಿಂದೊಪ್ಪುವ ಆ ರಮ್ಯ ಮುಖವು, ವಿಶ್ವದ ರಹಸ್ಯಕ್ಕೆ ಕೈಹಾಕಿದ ಆ ಭೇದಕ
ದೃಷ್ಟಿಯು, ಆತ್ಮಸಾಧನೆಯೊಳಗಿನ ಸಮಗ್ರತೆಯನ್ನು ಸೂಚಿಸುವ ಭುಜದ ಮೇಲೆ ಅಲ್ಲಾ
ಡುವ ಆ ಜಡೆಯು, ಮಹರ್ಷಿಗಳ ವಿಷಯಕ್ಕೆ ಪ್ರೇಕ್ಷಕರಲ್ಲಿ ಪೂಜ್ಯಬುದ್ಧಿಯನ್ನುಂಟುಮಾ
ಡದೆ ಬಿಡುವದಿಲ್ಲ.

ಶ್ರೀ ಅರವಿಂದ ಯೋಗಿಗಳು ಪಾಂಡಿಚೇರಿಗೆ ಬಂದು ೪-೫ ವರ್ಷಗಳಾದ ಬಳಿಕ
ಫ್ರೆಂಚ ಮಿತ್ರರಾದ ಎಮ್. ರಿಚರ್ಡರ ಬಿನ್ನಹದ ಮೇರೆಗೆ "ಆರ್ಯ" ಎಂಬ ಮಾಸಪತ್ರಿಕೆ
ಯನ್ನು ಪ್ರಕಟಿಸಹತ್ತಿದರು. ಇದು ಇಂಗ್ಲಿಷ ಮತ್ತು ಫ್ರೆಂಚ ಭಾಷೆಗಳಲ್ಲಿ ಹೊರ
ಡುತ್ತದೆ. ಇದು ಶುದ್ಧ ತತ್ವಜ್ಞಾನವಿಷಯಕ ಚರ್ಚೆಯನ್ನಷ್ಟೇ ಮಾಡುತ್ತದೆ. ಜಗ
ತ್ತಿನ ವ್ಯವಹಾರಗಳು ಒಂದು ತತ್ವಜ್ಞಾನವನ್ನು ಅವಲಂಬಿಸಿ ನಡೆಯುತ್ತವೆ. ಆ ತತ್ವಜ್ಞಾ
ನವು ಶುದ್ಧಾಶುದ್ಧವಿರುವಂತೆ ಅದನ್ನು ಅವಲಂಬಿಸಿ ನಡೆಯುವ ವ್ಯವಹಾರಗಳು ಉಚ್ಚ
ಅಥವಾ ನೀಚ ತರದವಿರುತ್ತವೆ. ದೇಶದ ಅವನತಸ್ಥಿತಿಯ ಕಾಲದಲ್ಲಿ ತತ್ವಜ್ಞಾನವು ಮಲಿ
ನವಾಗಿರುತ್ತದೆ. ಅದನ್ನು ಶುಧ್ಧೀಕರಿಸಿ ಅದಕ್ಕೆ ದಿವ್ಯಸ್ವರೂಪವನ್ನು ಕೊಡುವದು ಮಹ
ತ್ವದಿರುತ್ತದೆ. ಇಂಥ ಪವಿತ್ರವಾದ ಹಾಗೂ ಮಹತ್ವದ ಕಾರ್ಯವನ್ನು ಮಹರ್ಷಿ ಅರವಿಂ

ದರು "ಆರ್ಯ" ಮಾಸಿಕ ಪುಸ್ತಕದ ದ್ವಾರವಾಗಿ ಮಾಡುತ್ತಲಿದ್ದಾರೆ. ಈ ಮಾಸಪತ್ರಿಕೆಯು ಅತಿ ಉದಾತ್ತ ವಿಚಾರದ ಲೇಖಗಳನ್ನೊಳಗೊಂಡಿರುವದರಿಂದ ಅದು ಒಳ್ಳೊಳ್ಳೇ ಪಂಡಿತರಿಗೆ ಸಹ ಎಷ್ಟರಮಟ್ಟಿಗೆ ತಿಳಿಯುವದೋ ಎಂಬುದು ಪ್ರಶ್ನವಿದೆ. ಇಂಥ ಏಕಾಂತಪ್ರಿಯರೂ ವೇದಾಭ್ಯಾಸಜಡರೂ ಆದ ಶ್ರೀ ಅರವಿಂದ ಯೋಗಿಗಳು ರಸಿಕ ಕವಿಗಳಿರಬಹುದೆಂಬ ಕಲ್ಪನೆಯು ಸಹ ಆಗುವದಿಲ್ಲ. ಮಹಾತ್ಮರ ಚರಿತ್ರವು ವಿಚಿತ್ರವೆಂಬುವದು ಇದಕ್ಕಾಗಿಯೇ. ಮಹಾತ್ಮರ ಅಂತಃಕರಣವು ಕುಸುಮಗಳಿಂದ ಕೋಮಲವೂ ವಜ್ರದಿಂದ ಕಠೋರವೂ ಇರುತ್ತದೆಂಬ ಮಾತು ಸುಳ್ಳಲ್ಲ. ಶ್ರೀ ಅರವಿಂದಯೋಗಿಗಳು ಗೂಢ ವೇದಾಂತವಿವೇಚನೆಯಲ್ಲಿ ನಿಷ್ಣಾತರಿದ್ದಂತೆ ಮಾರ್ಮಿಕ ಕಾವ್ಯರಚನೆಯಲ್ಲಿ ಸಹ ಪ್ರವೀಣರಿರುತ್ತಾರೆ. "Ahana" ದಂಥ ಸುಂದರ ಕಾವ್ಯವು ಮಹರ್ಷಿಗಳ ಲೆಕ್ಕಣಿಕೆಯಿಂದಲೇ ಹೊರಬಿದ್ದಿರುತ್ತದೆಂದು ಹೇಳಿದರೆ ಯಾರಿಗಾದರೂ ಸುಳ್ಳು ಕಾಣಬಹುದು; ಆದರೆ ಇದು ಸತ್ಯವಿರುತ್ತದೆ. ಶ್ರೀ ಅರವಿಂದ ಯೋಗಿಗಳ ನವಜೀವನದಾಯಿಯಾದ ಲೇಖಗಳ ಪರಿಚಯವು ಕನ್ನಡಿಗರಿಗೆ ಎಂದು ಆಗುವದೋ ಅದು ಸುದಿನವು.

ಮಹರ್ಷಿಗಳ ಕೆಲವು ಬಂಗಾಲಿ ಶಿಷ್ಯರು ಚಂದ್ರನಗರದಲ್ಲಿ ನಿಂತು ಪ್ರವರ್ತಕವೆಂಬ ಸಂಸ್ಥೆಯನ್ನು ಸ್ಥಾಪಿಸಿ ತದ್ವಾರವಾಗಿ ಶ್ರೀ ಅರವಿಂದ ಯೋಗಿಗಳ ಮತಗಳ ಪ್ರಸಾರವನ್ನು ನಡಿಸಿದ್ದಾರೆ. ಇಂಗ್ಲಿಶ ಭಾಷೆಯಲ್ಲಿ Standard Bearer ಎಂಬದೂ, ಬಂಗಾಲಿಯಲ್ಲಿ ಪ್ರವರ್ತಕ, ನಭಾ, ಬಿಜಲಿ ಎಂಬವುಗಳೂ ಶ್ರೀಮದ್ಯೋಗಿಗಳ ಮತಗಳನ್ನು ಪ್ರಸಾರ ಮಾಡುವ ಸಾಧನಗಳಾಗಿವೆ. ಶ್ರೀ ಅರವಿಂದ ಯೋಗಿಗಳ ಫ್ರೆಂಚ ಬಂಧುಗಳಾದ ಗೃಹಸ್ಥರು ತಮ್ಮ ಧ್ಯೇಯವಾದ ಮಾನವ ಕುಟುಂಬದ ಕಲ್ಯಾಣವನ್ನು ಸಾಧಿಸಲಿಕ್ಕೆ ಜಪಾನದಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ (೧೯೧೮). ಈ ಸಂಸ್ಥೆಯ ಉದ್ದೇಶವು ಭಾವೀ ಕಾರ್ಯದ ಆರಂಭವೆಂದು ಏಶಿಯಾಖಂಡದಲ್ಲಿ ಒಕ್ಕಟ್ಟನ್ನುಂಟು ಮಾಡುವದಾಗುತ್ತದೆ. ಏಶಿಯವು ಎಚ್ಚತ್ತು ತನ್ನ ನಿಜಸ್ವರೂಪದ ಜ್ಞಾನ ಮಾಡಿಕೊಂಡು, ಸ್ವತಂತ್ರವಾದ ಬಳಿಕ ಜಗತ್ತಿಗೆ ತನ್ನ ಸಂಸ್ಕೃತಿಯನ್ನು ಕೊಡುವ ದಿವ್ಯಕಾರ್ಯವನ್ನು ಅದಕ್ಕೆ ಮಾಡತಕ್ಕದ್ದಿರುತ್ತದೆ ಇದರ ಕಾರ್ಯಪದ್ಧತಿಯನ್ನು ಕುರಿತು ಒಂದು ಪುಟ್ಟ ಪುಸ್ತಕವು ಬರೆಯಲ್ಪಟ್ಟಿದೆ. ಅರವಿಂದ ಯೋಗಿಗಳ ಸಹಕಾರಿ ಮಿತ್ರರಾದ ಎಮ್. ರಿಚರ್ಡ ಎಂಬವರು ಈ ಧ್ಯೇಯವನ್ನು ಈಡೇರಿಸುವದಕ್ಕಾಗಿ ಜಗತ್ತಿನ ಪ್ರವಾಸಕ್ಕೆ ಹೊರಡತಕ್ಕವರಿದ್ದಾರೆ! ಜಪಾನದಲ್ಲಿ ಹೊರಡುವ "Asian Review" ಎಂಬ ಮಾಸಪತ್ರಿಕೆಯಲ್ಲಿ ಏಶಿಯಾಖಂಡದ ಪ್ರಾಚೀನ ವೈಭವವನ್ನೂ, ಅದರ ಭಾವೀಕಾರ್ಯವನ್ನೂ ಕುರಿತು ಹಲವು ಬಗೆಯ ಉದ್ಬೋಧಕ ಲೇಖಗಳು ಬರುತ್ತಿರುತ್ತವೆ.* ಶ್ರೀಮದ್ಯೋಗಿಗಳ ತಪಶ್ಚರ್ಯವು ಮುಗಿಯುತ್ತ ಬಂದಿದ್ದು, ಅನುಯಾಯಿವರ್ಗದಿಂದ ಈ ರೀತಿಯಲ್ಲಿ ಭಾವೀಕಾರ್ಯಕ್ಕೆ ಆರಂಭವೂ ಆಗಿದೆ.

* See Standard Bearer, January 2. page 1.

ಭರತಖಂಡದ ಪ್ರಸ್ತುತಪರಿಸ್ಥಿತಿಯು ೧೯೧೦-ಲರಗಿಂತ ತೀರ ಭಿನ್ನವಾಗಿದ್ದು ಮಹರ್ಷಿಗಳ ಆಗಮನವು ಬ್ರಿಟಿಶ ಹಿಂದುಸ್ಥಾನಕ್ಕೆ ಎಂದು ಆಗುವದೋ ಎಂದು ಎಲ್ಲರೂ ತೀರ ಆತುರರಾಗಿದ್ದಾರೆ. ನಾಗಪೂರದ ೧೯೨೦ರ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಲಿಕ್ಕೆ ಸಮ್ಮತಿಯನ್ನು ಕೇಳಿದ್ದರು. ಆದರೆ ಮಹರ್ಷಿಗಳು ೧೨ ವರುಷಗಳವರೆಗೆ ಪೂರ್ಣ ತಪಶ್ಚರ್ಯವಾಗದ ವಿನಾ ಹೊರಬೀಳಲಿಕ್ಕೆ ಬರುವದಿಲ್ಲೆಂದು ಹೇಳಿ ಔತಣವನ್ನು ಸ್ವೀಕರಿಸಲಿಲ್ಲ

ಕೆಲವರಿಗೆ ಮಹರ್ಷಿ ಅರವಿಂದರ ಮತಗಳು ಸೇರಲಿಕ್ಕಿಲ್ಲ; ಅಥವಾ ಅವು ಬೇರೆ ಕೆಲವು ಮಹಾ ಪುರುಷರ ಮತಗಳಂತೆ ಇರಲಿಕ್ಕಿಲ್ಲ ಅದರಿಂದ ಶ್ರೀಮದ್ಯೋಗಿಗಳ ಯೋಗ್ಯತೆಯು ಕಡಿಮೆಯೆಂದು ಅಥವಾ ಆ ಎರಡನೇ ಮಹಾಪುರುಷರು ಕ್ಷುಲ್ಲಕರೆಂದು ಯಾರೂ ತಿಳಿಯುವ ಕಾರಣವಿಲ್ಲ. ಪ್ರಾಚೀನಕಾಲದಲ್ಲಿ ಸಹ ಸಮಾನ ಯೋಗ್ಯತೆಯ ಮಹಾಪುರುಷರಲ್ಲಿ ಮತಭೇದವು ಕಂಡು ಬರುತ್ತಿತ್ತು. ಭಿನ್ನ ಭಿನ್ನ ಸ್ಮೃತಿಗ್ರಂಥಗಳು ಈ ಮಾತಿಗೆ ಸಾಕ್ಷಿಯಾಗಿವೆ. ಮನು ಮತ್ತು ಯಾಜ್ಞವಲ್ಕ್ಯರಲ್ಲಿ ಯಾರು ಶ್ರೇಷ್ಠರು? ಮಹಾತ್ಮಾಗಾಂಧಿ ಹಾಗೂ ಲೋಕಮಾನ್ಯರಲ್ಲಿ ಕೆಲವು ಮತಭೇದವಿದ್ದ ಮಾತ್ರಕ್ಕೆ ಅವರಲ್ಲಿ ಒಬ್ಬರು ಮತ್ತೊಬ್ಬರಿಗಿಂತ ಕಡಿಮೆಯೆಂದು ತಿಳಿಯುವದು ತಪ್ಪು. ಹಿಮಾಲಯದ ಶಿಖರಗಳು ಎತ್ತರವಾಗಿದ್ದಷ್ಟೇ, ಫಾಸಿಫಿಕ ಮಹಾಸಾಗರವು ಆಳವಾಗಿರುವದು. ಇವುಗಳಲ್ಲಿ ಯಾವದು ಶ್ರೇಷ್ಠ ಮತ್ತು ಸುಂದರವೆಂದು ವಾದಿಸುತ್ತ ಕೂಡ್ರುವದು ಮೂರ್ಖತನವು. ಬಾಳೆಯ ಸವಿ ಬಾಳೆಗೆ; ಮಾವಿನ ಸವಿ ಮಾವಿಗೆ. ಮಹರ್ಷಿ ಅರವಿಂದರು ತಮ್ಮ ತೀಕ್ಷ್ಣ ಬುದ್ಧಿ ಕೌಶಲ್ಯದಿಂದ ಜಗತ್ತಿನ ವಿಚಾರಕ್ಕೆ ಒಂದು ತರದ ಸ್ವರೂಪಗೊಡುತ್ತಲಿದ್ದಾರೆ. ಅವರಲ್ಲಿ ಮತಭೇದಗಳಾಗುತ್ತಿರಬಹುದು. ಅದರಿಂದ ಅವರ ವಿದ್ವತ್ತೆಗೆ ಅಥವಾ ಯೋಗ್ಯತೆಗೆ ಏನೂ ಬಾಧೆಬರುವದಿಲ್ಲ ಇರಲಿ. ಮಹರ್ಷಿ ಅರವಿಂದರು ತಮ್ಮ ದೀರ್ಘ ತಪಶ್ಚರ್ಯದಲ್ಲಿ ಶಾಂತಚಿತ್ತದಿಂದ ಕಂಡು ಹಿಡಿದ. ಪರಮೇಶ್ವರೀ ಆದೇಶವನ್ನು ಭಾರತೀಯರಲ್ಲಿ ಪ್ರಸಾರ ಮಾಡಲಿಕ್ಕೆ ಮತ್ತೆ ಬರಲೆಂದೂ, ಈ ಕಾರ್ಯವನ್ನು ಮಾಡಲಿಕ್ಕೆ ಪರಮೇಶನು ಅವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲೆಂದೂ ಅನನ್ಯಭಾವದಿಂದ ಪ್ರತಿಯೊಬ್ಬರೂ ಬೇಡಿಕೊಳ್ಳುವ.

# ೭ ಮತಗಳು.

**स्थितप्रज्ञस्य का भाषासमाधिस्थस्य केशव ।**

—श्रीमद्भगवद्गीता.

"Being one with all beings, we possess in their enjoyment, in ours and in the cosmic being's delight of universal self-expression. It is only by this Ananda at once transcedent and universal that man can be free in his soul and yet live in the world with the full active Life of the Lord in his universe of movement.

**" Arya. "**

Vol I Page 44.

× × ×

Transform the animal into the Driver of the herds; let all thyself be Krishna This is thy goal

ಮಹರ್ಷಿ ಅರವಿಂದ ಘೋಷರು ಇಂಥ ಯಾವ ಮತಗಳನ್ನು ಬೋಧಿಸಿದರೆಂದು ಸರಕಾರದವರು ಅವರಿಗೆ ಕೈತೊಳಕೊಂಡು ಬೆನ್ನು ಹತ್ತಿದರು; ಇಂಥ ಯಾವ ತತ್ವಜ್ಞಾನದ ವಿವರಣವನ್ನು ಮಾಡಿದರೆಂದು ವಿದ್ವಜ್ಜನರು ಅವರಿಗೆ ಮನ್ನಿಸುವರು; ಇಂಥ ಅದಾವ ಸಂದೇಶವನ್ನು ಹೇಳಿದರೆಂದು ಭಾರತೀಯರು ಸ್ಫೂರ್ತಿಗೊಂಡು ಅರವಿಂದ ಯೋಗಿಗಳನ್ನು ತಮ್ಮ ಹೃದಯಮಂದಿರಗಳಲ್ಲಿ ಪೂಜಿಸುತ್ತಿರುವರು; ಹೀಗೆ ಏನನ್ನು ಮಾಡಿರುವರೆಂದು ಲಾಲಾ ಲಜಪತರಾಯರಂಥವರು ಅರವಿಂದ ಯೋಗಿಗಳ ಮುಂದೆ ಭಕ್ತಿಯಿಂದ ತಲೆವಾಗುವರು, ಅಥವಾ ಜಗತ್ಕವಿಕುಲಲಲಾಮರಾದ ರವೀಂದ್ರನಾಥರು ಶ್ರೀ ಅರವಿಂದರಿಗೆ " He is a true Rishi " ಎಂದೆನ್ನುವರು ಎಂಬುವದನ್ನು ತಿಳಿಯಲಿಕ್ಕೆ ವಾಚಕರು ಉತ್ಸುಕರಾಗಿರಬಹುದು. ಆದರೆ ಅವರ ಮತಗಳನ್ನು ನಿರ್ದೋಷವಾಗಿ ವಾಚಕರ ಮುಂದೆ ಇಡಲಿಕ್ಕೆ ಈ ಪಾಮರ ಲೇಖಕನು ಸಮರ್ಥನಿಲ್ಲ. ಒಬ್ಬ ಕವಿಯು ಅಂದಂತೆ "ಕನ್ನಡಿಯೊಳಗೆಷ್ಟು ತೋರ್ಪುದು ಪರ ಕಾಂಚನಾದ್ರಿ" ಎಂದು ಈ ಲೇಖಕನೂ ಅನ್ನುತ್ತಾನೆ. ಮಹರ್ಷಿಗಳ ಆ ಉದಾತ್ತ ವಿಚಾರಗಳನ್ನು ಆಕಲನ ಮಾಡುವ ಸಾಮರ್ಥ್ಯವಿಲ್ಲವೆಂದು ಒಳ್ಳೊಳ್ಳೇ ಪಂಡಿತರು ಕೈಯ್ಯೂರುವಾಗ ಈ ಲೇಖಕನ ಪಾಡು ಎತ್ತ? ಅರವಿಂದ ಯೋಗಿಗಳ ಗುಣಗಳ ಸರಿಯಾದ ವರ್ಣನೆ ಮತ್ತು ಮತಗಳ ಪ್ರತಿಪಾದನೆಯಾಗಬೇಕಾದರೆ ಅದಕ್ಕೆ ಅಂಥ ಯೋಗ್ಯತೆಯುವನೇ ಬೇಕು. ಮಹಾಸಾಗರದಲ್ಲಿ ಗುಬ್ಬಿಯು ತನ್ನ ಪುಟ್ಟ ಚಂಚುವಿನಿಂದ ನಾಲ್ಕು ಹನಿಗಳನ್ನು ತಕ್ಕೊಂಡು ತೃಪ್ತಿಬಡುವಂತೆ ಈ ಲೇಖಕನ ಸ್ಥಿತಿಯಿದೆ. ಮಹರ್ಷಿಗಳ ಅಗಾಧ ಚರಿತ್ರದ ವಾಚನದಿಂದ ಸ್ಫೂರ್ತಿಗೊಂಡು ಅವರ ಮೇಲಿನ ಭಕ್ತಿಯಿಂದ ಇದೊಂದು ಅಲ್ಪಸೇವೆಯೆಂದು ಆತನು ಈ ಕೆಲಸವನ್ನು ಮಾಡಿದ್ದಾನೆ. ಆದುದರಿಂದ ವಾಚನಾಂತ್ಯದಲ್ಲಿ ವಾಚಕರ ನಿರಾಶೆಯಾದರೆ ಅವರು ಆತನನ್ನು ಕ್ಷಮಿಸಬೇಕೆಂದು ನಮ್ರತನದಿಂದ ಬಿನ್ನವಿಸುತ್ತಾನೆ.

ಶ್ರೀ ಅರವಿಂದರ ಸಾಧಕಾವಸ್ಥೆಯು ೧೯೦೫ನೆಯ ಇಸವಿಗೆ ಮುಗಿಯಿತೆಂದು ಹೇಳಬಹುದು. ೧೯೦೫ ರಿಂದ ೧೯೦೮ ರ ವರೆಗೆ ಪತ್ನಿಗೆ ಬರೆದ ಪತ್ರಗಳಲ್ಲಿ ಶ್ರೀಮದ್ಯೋಗಿಗಳ ದೇವಸಂದರ್ಶನದ ವಿಷಯಕ್ಕಿರುವ ವ್ಯಾಕುಲತೆಯು ಕಂಡು ಬರುವಂತಿದೆ ಶಾಸ್ತ್ರೋಕ್ತ ಮಾರ್ಗದಿಂದ ಕರ್ಮಮಾಡಿ ೧೯೦೮ ರಲ್ಲಿ ಸಿದ್ಧಿಯನ್ನು ಪಡೆದರು. ಅಲಿಪುರದ ತುರಂಗದಲ್ಲಿ ಶ್ರೀ ಭಗವಾನ್ ವಾಸುದೇವನ ದರ್ಶನವಾಗಿ ಆದೇಶವು ಸಿಕ್ಕನಂತರ ಶ್ರೀ ಅರವಿಂದರು ಸಿದ್ಧಯೋಗಿಗಳಾದರು. ೧೯೦೭ ರ ಚಳವಳಿಯು ಧಾರ್ಮಿಕ ಅಧಿಷ್ಠಾನದ ಮೇಲೆ ಆರಂಭಿಸಲ್ಪಡದ್ದರಿಂದ ಅದು ನಷ್ಟವಾಯಿತೆಂದು ಇವರ ಮತವಿದೆ. ಕೇವಲ ರಾಜಕಾರಣದಿಂದಲೇ ಯಾವ ದೇಶವೂ ಮುಂದೆ ಬರಲಾರದು ರಾಜಕೀಯ ಮುತ್ಸದ್ದಿತನವು ಬಹು ದಿವಸ ತಡೆಯುವದಿಲ್ಲ. ಯಾಕಂದರೆ ಅದರ ಬುಡಕ್ಕೆ ಧಾರ್ಮಿಕ ಭಾವನೆಯಿರುವದಿಲ್ಲ. ಒಂದು ಪಕ್ಷವು ಮತ್ತೊಂದು ಪಕ್ಷವನ್ನು ಬೌದ್ಧಿಕ ಯುಕ್ತಿ-ಪ್ರಯುಕ್ತಿಗಳಿಂದ ಪೇಚಿನಲ್ಲಿ ತರಲಿಕ್ಕೆ ಹವಣಿಸುವಾಗ ಧಾರ್ಮಿಕ ಬಂಧನವಿಲ್ಲದಿದ್ದರೆ ತೀರ ಅನರ್ಥಗಳಾಗುವವು. ಪ್ರತಿಪಕ್ಷಿಗಳಿಗೆ ತಮ್ಮ ಶತ್ರುಗಳ ಸೇಡು ತೀರಿಸುವ ರೀತಿಯಲ್ಲಿ ನೀತಿ ನಿರ್ಬಂಧಗಳು ಉಳಿಯದ್ದರಿಂದ ಅನೀತಿಗೆ ಆಸ್ಪದ ಸಿಗುವ ಸಂಭವವು ಬಹಳವಿರುತ್ತದೆ. ೧೯೦೫ರ ಸುಮಾರಿಗೆ ದೇಶದಲ್ಲಿ ಎದ್ದ ರಾಜಕೀಯ ಬಿರುಗಾಳಿಯ ಕೆಲವು ಪರಿಣಾಮವೂ, ಅಂತಃಕರಣದಲ್ಲಿ ಜಾಗೃತವಾದ ಧರ್ಮಜಿಜ್ಞಾಸೆಯ ಕೆಲವು ಪರಿಣಾಮವೂ ಒಟ್ಟುಗೂಡಿ ಶ್ರೀ ಅರವಿಂದರನ್ನು ರಾಜಕೀಯ ರಣಾಂಗಣಕ್ಕೆ ತಂದಿದ್ದವು. ಆದರೆ ಈ ಕಾಲಕ್ಕೆ ಬಂದ ವಿವಿಧ ಅನುಭವಗಳಿಂದ ಧಾರ್ಮಿಕ ಸುಧಾರಣೆಯ ಅವಶ್ಯಕತೆಯು ತೀರ ಅವಶ್ಯವೆಂದು ಅವರು ಮನಗಂಡರು. ಹಾಗೂ ತಮಗೆ ಪ್ರಾಪ್ತವಾದ ಸಿದ್ಧ ಸ್ಥಿತಿಯನ್ನು ಸ್ಥಿರಗೊಳಿಸಲಿಕ್ಕೆ ಕೆಲವು ದಿನ ಏಕಾಂತವು ಅವಶ್ಯವೆಂದೂ, ಈ ತೆರನಾಗಿ ಮಾಡಿದರೆ ಆಗುವ ಕಾರ್ಯವೇ ಹಿಂದುಸ್ಥಾನದ ಚಿರಕಾಲಿಕ ಹಿತದ ಕೆಲಸವಾಗುವದೆಂದೂ ತಪಶ್ಚರ್ಯಕ್ಕಾಗಿ ಪಾಂಡಿಚೇರಿಗೆ ಹೋದರೆಂದೂ ಹಿಂದಿನ ಪ್ರಕರಣದಲ್ಲಿ ಹೇಳಿದೆ.

ಮಹರ್ಷಿಗಳ ದೃಷ್ಟಿಯಿಂದ ಮನುಷ್ಯನ ಆದ್ಯಕರ್ತವ್ಯವೆಂದರೆ ಆತ್ಮೋನ್ನತಿಯನ್ನು ಮಾಡಿಕೊಳ್ಳುವದು, ಯೋಗಿಯಾಗುವದು. ಯೋಗಿಯಾಗಲಪೇಕ್ಷೆಯುಳ್ಳವನು ಮೊದಲು ಆತ್ಮಶುದ್ಧಿಯನ್ನು ಮಾಡಿಕೊಳ್ಳಲಿಕ್ಕೆ ಬೇಕು; ಆತ್ಮಶುದ್ಧಿಯ ಮಾರ್ಗಗಳನ್ನು ಕುರಿತು ಅವರು "Synthesis of yoga" ಎಂಬ ಸುಂದರವಾದ ನಿಬಂಧವನ್ನು ಬರೆದಿದ್ದಾರೆ. ಮಹರ್ಷಿಗಳ ಕಟಾಕ್ಷವು ಅಂತರ್ಜ್ಞಾನ ( Intuition ) ದ ಮೇಲೆ ಬಹಳವಿದೆ. ವಿವಾದ ಕುಶಲವಾದ ಬುದ್ಧಿಯನ್ನು ಅವರು ತಿರಸ್ಕರಿಸಿದ್ದಾರೆ.*

---

* The wisest then depended on inner experience and the suggestion of the intuitive mind for all knowlidge that ranged beyond mankind's ordinary perseption and daily activities. Their aim was illumination not logical conviction.

"Arya"
September 1914.

ಅಂತರ್ಜ್ಞಾನವು ಪ್ರಾಪ್ತವಾಗಲಿಕ್ಕೆ ಆತ್ಮಶುದ್ಧಿಯಾಗಲಿಕ್ಕೆ ಬೇಕು. ಆತ್ಮಶುದ್ಧಿಯು ಸಲುವಾಗಿ ಪ್ರಾಚೀನ ಋಷಿಗಳು ಹಲವು ಮಾರ್ಗಗಳನ್ನು ಕಂಡುಹಿಡಿದಿದ್ದಾರೆ. ಅವುಗಳ ನಿಸ್ಸಂದಿಗ್ಧವಾದ ವರ್ಣನವು ಮೇಲೆ ಹೇಳಿದ ನಿಬಂಧದಲ್ಲಿ ಅರವಿಂದ ಯೋಗಿಗಳು ಮಾಡಿಟ್ಟಿದ್ದಾರೆ. ಹಠಯೋಗವು ಆತ್ಮಜ್ಞಾನಿಗೆ ಅಷ್ಟೊಂದು ಉಪಯುಕ್ತವಿಲ್ಲವೆಂದು ಅವರ ಮತವಿದೆ. ಯಾಕಂದರೆ ಅದರ ಸಾಧನೆಯು ಮಾನಸಿಕ ಶುದ್ಧೀಕರಣಕ್ಕಿಂತಲೂ ದೇಹಶುದ್ಧೀಕರಣದ ಕಡೆಗೆ ಹೆಚ್ಚು ಸಹಾಯಕವಿದೆ. ರಾಜಯೋಗವು ಮಾತ್ರ ಆತ್ಮಸಾಧನೆಯ ಕೆಲಸದಲ್ಲಿ ಸಾಧಕನಿಗೆ ಉಪಯುಕ್ತವಿದೆ ಇದರಂತೆಯೇ ಭಕ್ತಿ, ಜ್ಞಾನ, ಮತ್ತು ಕರ್ಮ ಮಾರ್ಗಗಳೂ ಇವೆ ಇವುಗಳನ್ನು ಆಚರಿಸುವಾತನು ನಾಲ್ಕು ಸಾಧನಗಳ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ;* ಶಾಸ್ತ್ರ, ಉತ್ಸಾಹ, ಗುರು ಮತ್ತು ಕಾಲ. ಶಾಸ್ತ್ರವೆಂದರೆ ಶಬ್ದಪ್ರಮಾಣ. ಶಬ್ದಪ್ರಮಾಣವು ವೇದ ಮತ್ತು ಉಪನಿಷತ್ತುಗಳಂಥ ಲಿಖಿತ ಗ್ರಂಥಗಳಲ್ಲಿ ಸಿಕ್ಕಬಹುದು. ಇಲ್ಲವೆ ಅಂತರಂಗದಲ್ಲಿ ಹೊಳೆಯಬಹುದು. ಪೂರ್ಣ ಶುದ್ಧಾವಸ್ಥೆಯು ಪ್ರಾಪ್ತವಾಗದೆ ಇದ್ದುದರಿಂದ ಅಂತಸ್ಥ ಆದೇಶವು ಶುದ್ಧವಿರುವ ಸಂಭವವು ಕಡಿಮೆ ಇರುವದರಿಂದ ವೇದಾದಿ ಅನುಭವಿಕ ಗ್ರಂಥಗಳನ್ನು ಅವಲಂಬಿಸಿ ನಡೆಯತಕ್ಕದ್ದು. ಯಾಕಂದರೆ ಇವು, ಋಷಿ–ಮುನಿಗಳಿಂದ ಆಚರಿಸಲ್ಪಟ್ಟು ಬಂದ ಅನುಭವಗಳಾಗಿವೆ. ಎರಡನೆಯ ಸಾಧನವು ಉತ್ಸಾಹವು- ಸಾಧಕನಲ್ಲಿ ಸಾಧ್ಯದ ವಿಷಯದಲ್ಲಿ ಉತ್ಕಂಠೆಯು ಬೆಳೆದಂತೆ ಫಲವು ಬೇಗ ಸಿಗುವದು. ಒಂದೇ ಒಂದು ಧ್ಯೇಯದ ಹುಚ್ಚು ಹಿಡಿದು ಎರಡನೆಯ ಯಾವ ಕಲ್ಪನೆ, ವಿಚಾರಗಳ ಸಂಪರ್ಕವು ಸಹ ಆಗದ ಹಾಗಾಗಹತ್ತಿತ್ತೆಂದರೆ ಸಿದ್ಧಿಯು ಸಮೀಪಿಸಿತೆಂದು ತಿಳಿಯಬೇಕು. ಸರ್ವಶಕ್ತಿಮಂತನ ದರ್ಶನದ ಉತ್ಸುಕತೆಯಲ್ಲಿ ತನ್ನ ಅಹಂಕಾರಾದಿಗಳನ್ನು ಮರೆತು ಹೋದಂತೆ ಸಾಧಕನು ಸಿದ್ಧಿಯ ಸಮೀಪಕ್ಕೆ ಹೋಗುವನು. ಮಹತ್ವದ ಮೂರನೆಯ ಸಾಧನವೆಂದರೆ ಗುರುವು. ಜಗತ್ತಿಗೇ ಗುರುವಾದ ಪರಮೇಶನೇ ಮನುಷ್ಯನ ಅಂತರಂಗದಲ್ಲಿ ವಾಸವಾಗಿರುವದರಿಂದ ಅವನಿಗೆ ಸಾಕ್ಷಿಯಾಗಿ ತನ್ನ ಯೋಗವನ್ನು ಸಾಗಿಸುತ್ತಿರಬೇಕು- ಆತನ ದಯೆಯ ವಿಷಯಕ್ಕೆ ಪೂರ್ಣ ನಂಬುಗೆಯನ್ನಿಟ್ಟು ಕಾರ್ಯ ಮಾಡಿದರೆ ಸಿದ್ಧಿಯು ಸಿಗಲೇ ಬೇಕು. ಆದರೆ ಇದಕ್ಕೆ ಬಹಳ ಧೈರ್ಯವು ಬೇಕು. ಸಾಮಾನ್ಯ ವಿಚಾರದವರಿಗೆ ಇದು ಅಸಾಧ್ಯವು. ಹಲವು ತರದ ಮಾನವೀ ವೃತ್ತಿಗಳು ಆಗಾಗ್ಗೆ ಮಧ್ಯದಲ್ಲಿ ಬಂದು ಸಾಧಕನನ್ನು ಕಾರ್ಯಚ್ಯುತನಾಗಿ ಮಾಡಲು ಯತ್ನಿಸುವವು. ಆಗ ಸಾಧಕನಿಗೆ ಆ ಸ್ಥಿತಿಯಲ್ಲಿ ಕಲ್ಪನಾಗಮ್ಯನಾದ ಸರ್ವೇಶನ ವಿಷಯಕ್ಕೆ ಅಷ್ಟೊಂದು ವಿಶ್ವಾಸವುಂಟಾಗುವದಿಲ್ಲ. ಆದುದರಿಂದ ಇಂಥ ಸಮಯದಲ್ಲಿ ಆತನು ಸಾಕಾರ ಹಾಗೂ ಸಗುಣನಾದ ಗುರುವನ್ನೆಲ್ಲಿಯಾದರೂ ಗೊತ್ತು ಮಾಡಿಕೊಳ್ಳಬೇಕು. ಭಗವಾನ್ ಶ್ರೀ ಕೃಷ್ಣ, ರಾಮಕೃಷ್ಣ ಪರಮಹಂಸರಂಥ ಭೂತಕಾಲೀನ ಯೋಗಿಗಳ ಉಜ್ವಲ ಚರಿತ್ರಗಳನ್ನು ಲಕ್ಷ್ಯಿಸಿ ಆಚರಿಸಬೇಕು. ಈ ರೀತಿಯಿಂದ ಸಾಧನೆಯಿಡುವದೂ

* See "The Synthesis of Yoga" Arya Vol. I Page 364.

ಸಾಮಾನ್ಯ ಕೆಲಸವಲ್ಲ ಸಾಮಾನ್ಯ ಮನುಷ್ಯನಿಗೆ ಈ ಗಡಚಾದ ಮಾರ್ಗವನ್ನು ಆಕ್ರಮಿಸು ವದು ಜಡ ಹೋಗುವದು. ಯಾಕಂದರೆ ದಿನಾಲು ಬರುವ ಎದೆಗುಂದುವ ಪ್ರಸಂಗಳಲ್ಲಿ ಧೈರ್ಯ ಹೇಳಲಿಕ್ಕೆ, ತಪ್ಪಿದಲ್ಲಿ ಪ್ರತ್ಯಕ್ಷ ಕೃತಿಯಿಂದ ತೋರಿಸಲಿಕ್ಕೆ, ತನ್ನ ವರ್ಚಸ್ಸಿನಿಂದ (ಪ್ರಸಾದ ದಿಂದ) ಕಾರ್ಯಕ್ಕೆ ಉತ್ತೇಜಿಸಲಿಕ್ಕೆ ಆತನಿಗೆ ಯಾವನೊಬ್ಬ ಗುರುವಿನ ಅವಶ್ಯಕತೆಯೆನಿಸು ವದು ಸ್ವಾಭಾವಿಕವಿದೆ. ಇಂಥ ಗುರುವು ಸಿಗುವದು ಕಷ್ಟವು. ಆದರೂ ಹುಡುಕಿಕೊಂಡು ಕಾರ್ಯಸಾಧಿಸತಕ್ಕದ್ದು. ಆದರೆ ಈ ಎಲ್ಲ ಪ್ರಸಂಗಗಳಲ್ಲಿ ಯಾವಾಗಲೂ ನೆನಪಿನಲ್ಲಿ ಡುವ ಸಂಗತಿಯು ಯಾವದಂದರೆ: ಶಾಸ್ತ್ರ ಅಥವಾ ಗುರುಗಳ ಮೇಲೆ ತಕ್ಕಷ್ಟಕ್ಕಿಂತಹೆಚ್ಚು ಅವಲಂಬಿಸಿ ಕೂಡ್ರಬಾರದು. ಶಾಸ್ತ್ರ ಇಲ್ಲವೆ ಗುರುಗಳನ್ನು ಸಾಧಕನು ಸಾಧನ ರೂಪ ದಲ್ಲಿ ಉಪಯೋಗಿಸಿಕೊಳ್ಳತಕ್ಕದ್ದಿರುತ್ತದೆ. ಅವುಗಳಿಗೆ ಗುಲಾಮನಾಗಿ ಅಂಟಿಕೊಂಡು ಕುಳಿತರೆ ಧ್ಯೇಯವು ಒಂದು ಕಡೆಗೆ ಉಳಿಯುವದು; ಸಾಧಕನೊಂದು ಕಡೆಗೆ ಉಳಿಯು ವನು ಆದುದರಿಂದ ತನ್ನ ಉದ್ದೇಶವು ಆತ್ಮಸಾಧನವೆಂಬುದನ್ನು ಎಂದಿಗೂ ಮರೆಯಲಾಗದು. ಶಾಸ್ತ್ರ, ಉತ್ಸಾಹ, ಮತ್ತು ಗುರುಗಳ ವಿಷಯಕ್ಕೆ ಸ್ವಲ್ಪ ವಿಚಾರಿಸಿದ ಬಳಿಕ "ಕಾಲ"ದ ಬಗ್ಗೆ ಒಂದು ಸಂಗತಿಯನ್ನು ಧ್ಯಾನದಲ್ಲಿಡುವದು ಅವಶ್ಯವಿದೆ ಕಾಲವು ಸಾಧಕನ ತೀವ್ರತೆಯ ಮೇಲೆ ಆವಲಂಬಿಸಿದೆ. ಕಾಲವೆಂಬ ರಂಗಭೂಮಿಯ ಮೇಲೆ ಪರಿಸ್ಥಿತಿಯು ನಾಟಕ ಮಾಡುತ್ತಿರುತ್ತದೆ. ಸಾಧಕನು ಶಾಸ್ತ್ರೋಕ್ತ ರೀತಿಯಿಂದ ಸಾಧನೆಯನ್ನಿಟ್ಟರೆ ಕ್ರಮವಾದ ಮೆಟ್ಟಗಳಿಂದ ಉನ್ನತಿಯಾಗುತ್ತ ಹೋಗುವದು. ಇಲ್ಲದಿದ್ದರೆ ಜನ್ಮ—ಮರಣ ಗಳ ಕಣಿವೆಯಲ್ಲಿ ಸಹ ಹಾದು ಹೋಗಿ ಸತತವಾಗಿ ಕಾರ್ಯವನ್ನು ಮಾಡಬೇಕಾಗುತ್ತದೆ.

ಯೋಗದ ಸಾಧ್ಯವು ಇನ್ನೊಂದು ರೀತಿಯಿಂದ ಹೇಳುವದಿದ್ದರೆ ದಿವ್ಯ ದೃಷ್ಟಿಯನ್ನು ತಂದುಕೊಳ್ಳುವದಿರುತ್ತದೆ ಅಹಂಕಾರ, ಮತ್ತು ವಿಷಯವಾಸನೆಗಳಂಥ ಹೀನ ಭಾಗ ಗಳನ್ನು ತೆಗೆದುಹಾಕುವದಿರುತ್ತದೆ. ತನ್ನನ್ನು ಪರಮೇಶನ ಅಡಿದಾವರೆಗಳಲ್ಲಿ ಸಮರ್ಪಿಸಿ ಕೊಂಡು ಸ್ವಾತಂತ್ರವನ್ನು ಪಡೆಯುವದಿರುತ್ತದೆ. ಎಲ್ಲರಲ್ಲಿ ಪರಮೇಶ್ವರನನ್ನೂ, ಪರಮೇಶ್ವರ ನಲ್ಲಿ ಎಲ್ಲರನ್ನೂ ಕಾಣುವದಿರುತ್ತದೆ.*

"Life is the field of yoga" (Arya Vol. Page 493) ಎಂದು ಮಹರ್ಷಿ ಅರವಿಂದರ ಮತವಿದೆ. ಈಗ ವಿಶ್ವದ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣನಾದ ಆ ಸರ್ವೇ ಶ್ವರನ ಇಚ್ಛೆಯ ವಿರುದ್ಧವಾಗಿ ಎಲ್ಲಿಯೂ ಒಂದು ಹುಲ್ಲು ಕಡ್ಡಿಯು ಸಹ ಉಲುಕಾಡು ವಂತಿಲ್ಲ. ಆಯಾ ಕಾಲಕ್ಕೆ ಬೇಕಾದುದನ್ನು ಆತನೇ ಉಂಟು ಮಾಡುವನೆಂದು ಇವರು ಸಾರಿ ಹೇಳುತ್ತಾರೆ ಮನುಷ್ಯನಿಗೆ ಉಂಟುಮಾಡಿದಾತನು ದೇವರು; ಆತನು ವಿದ್ಯೆಯನ್ನೂ,

* The end of the path may be equally, a perception of the divine in all energies in all happenings, in all activities and a free and unegoistic participation of the soul in the cosmic action.

"Arya" Vol. I Page 24 A

ಶರೀರವನ್ನೂ, ಅದ್ಭುತ ಪರಾಕ್ರಮಶಾಲಿಯಾದ ಇಚ್ಛಾಶಕ್ತಿಯನ್ನೂ ಕೊಟ್ಟಿದ್ದಾನೆ. ಇವುಗಳನ್ನು ದಯಪಾಲಿಸುವದರಲ್ಲಿ ಆತನ ಅಂತಸ್ಥ ಹೇತುವೇನಿರಬಹುದು ? ಇಡೀ ಆಯುಷ್ಯವನ್ನೆಲ್ಲ ಈ ಕ್ಷುದ್ರ ಸಂಸಾರವನ್ನು ಅಹಂಕಾರ ಮಮಕಾರಗಳಿಗೆ ಒಳಗಾಗಿ ಮಾಡುವದಕ್ಕೆ ಕೊಟ್ಟಿರಬಹುದೋ ? ಹಾಗಾದರೆ ಜಗದೀಶನ ಇಚ್ಛೆಯ ವಿರುದ್ಧವಾಗಿ ಆತನು ದಯಪಾಲಿಸಿದ ಅಮೌಲ್ಯ ಶಕ್ತಿಗಳನ್ನು ಮಾರಿಕೊಂಡು ಹೊಟ್ಟೆ ಹೊರಕೊಳ್ಳುವದರಲ್ಲಿ ಉಪಯೋಗಿಸಿಕೊಳ್ಳುವ ಮೂಢರಿಗೆ ಏನೆನ್ನಬೇಕು ? ಶ್ರೀ ಅರವಿಂದ ಯೋಗಿಗಳು ಸೌ. ಮೃಣಾಲಿನಿ ದೇವಿಯವರಿಗೆ ಬರೆದ ಒಂದು ಪತ್ರದಲ್ಲಿ ಅಂದದ್ದೇನಂದರೆ· ನನಗೆ ದೇವರು ದಯಪಾಲಿಸಿದ ಬುದ್ಧಿಯನ್ನೂ, ಪ್ರತಿಭೆಯನ್ನೂ, ಸಂಪತ್ತನ್ನೂ ನನ್ನ ಸ್ವಂತಕ್ಕಾಗಿಯೇ ಉಪಯೋಗಿಸಿಕೊಳ್ಳಲಿಕ್ಕೆ ಎಳ್ಳಷ್ಟೂ ಅಧಿಕಾರವಿಲ್ಲ. ಯಾವ ದಯಾಘನನು ಇವುಗಳನ್ನು ಪ್ರೇಮದಿಂದ ನನಗೆ ಕೊಟ್ಟಿರುವನೋ ಆತನ ಪರವಾಗಿಯೇ ಅವುಗಳ ಉಪಯೋಗವನ್ನು ಮಾಡುವದು ನನ್ನ ಕರ್ತವ್ಯವಾಗಿದೆ! ಬಡಬಗ್ಗರು ಉಪವಾಸದಿಂದ ಒರಲುತ್ತಿರಲು ಚೈನಿಗಾಗಿ ಸಂಪತ್ತು ಸಂಗ್ರಹಿಸಿದರೆ ನನ್ನ ಪಾಲಿಗೆ ಕಳ್ಳತನದ ದೋಷವು ಬಾರದೆ ಎಂದೂ ನಿಲ್ಲದು ! ಅಹಹಾ! ಎಷ್ಟು ಉದಾತ್ತ ವಿಚಾರಗಳಿವು !' ಆಚಾರ ವಿಚಾರಗಳಲ್ಲಿ ಪವಿತ್ರತಮರಾದಂಥ ಇಂಥ ಮಹಾತ್ಮರಿಗೆ ದೇವರು ದರ್ಶನವನ್ನು ಕೊಡದಿದ್ದರೆ ಮತ್ತಾರಿಗೆ ಪ್ರಸನ್ನನಾಗಬೇಕು ? ಯೋಗಿಯಾಗಲಪೇಕ್ಷೆಯುಳ್ಳವನು ಈ ರೀತಿಯಾಗಿ ಆತ್ಮಯಜ್ಞವನ್ನು ಮಾಡಿದರೆ ಆತನಿಗೆ ಸಿದ್ಧಿಯಾಗಲೇಬೇಕು.

ಮನುಷ್ಯನಿಗೆ ಆತನಿಗಿರುವ ಇಂದ್ರಿಯಗಳಿಂದ ಸತ್ಯಜ್ಞಾನವಾಗುವದೇ ಇಲ್ಲ. ಆದುದರಿಂದ ನಿರ್ವಿಕಾರಿಯಾಗಿ ಅಂತರ್ಜ್ಞಾನವನ್ನು ಜಾಗೃತಪಡಿಸಿಕೊಂಡು ತದ್ವಾರವಾಗಿ ಆಚರಿಸಬೇಕು ತನ್ನನ್ನು ವಿಶ್ವಸಂರಕ್ಷಕನ ಪಾದದಲ್ಲಿ ಅರ್ಪಿಸಿಕೊಳ್ಳಬೇಕು. ಆತನಲ್ಲಿ ಲೀನನಾಗಬೇಕು सर्वधर्मान् परित्यज्य मामेकं शरणं व्रज । ಎಂಬ ಭಗವದುಕ್ತಿಯಂತೆ ಆಚರಿಸಬೇಕು. ಈ ಅವಸ್ಥೆಯಲ್ಲಿ ಮನುಷ್ಯನಿಗೆ ಆತನ ಸ್ವಂತದ ಇಚ್ಛೆ ಪ್ರವೃತ್ತಿಗಳೇನೂ ಉಳಿದಿರುವದಿಲ್ಲ. ಪರಮೇಶ್ವರನ ಇಚ್ಛೆಗಳೇ ಆತನ ಇಚ್ಛೆ; ಪರಮೇಶ್ವರನ ಕಾರ್ಯವೇ ಆತನ ಕಾರ್ಯವಾಗುವದು. ಈ ಅವಸ್ಥೆಯೊಳಗಣ ಪುರುಷನಿಗೆ ಯಾವ ಪ್ರಕಾರದ ಕರ್ತವ್ಯವು ಪ್ರಾಪ್ತವಾದರೂ ಅದು ಪರಮೇಶನದೇ ಆಗಿರುವದರಿಂದ ಅದರಲ್ಲಿ ಆನಂದವನ್ನನುಭವಿಸಲಿಕ್ಕೆ ಸಿಗುತ್ತದೆ. ಈ ಸ್ಥಿತಿಯೆಂದರೆ ಆನಂದವೇ ಆನಂದವು; ಸದಾನಂದವು; ಸಚ್ಚಿದಾನಂದವು. ಇದೇ ಬ್ರಾಹ್ಮೀ ಸ್ಥಿತಿಯು; ಇದೇ ಸ್ಥಿತಪ್ರಜ್ಞಾವಸ್ಥೆಯು. ಈ ಅವಸ್ಥೆಯನ್ನು ಸಂಪಾದಿಸಿಯೇ ಕರ್ಮವನ್ನು ಮಾಡಬೇಕೆಂದು ಗೀತೆಯು ಹೇಳುತ್ತದೆಂದು ಮಹರ್ಷಿಗಳು " Essays on Gita " ಎಂಬ ನಿಬಂಧಮಾಲೆಯಲ್ಲಿ ಪ್ರತಿಪಾದಿಸಿದ್ದಾರೆ.*

ವೇದಗ್ರಂಥಗಳ ಬಗ್ಗೆ ಮಹರ್ಷಿಗಳಲ್ಲಿ ಅತ್ಯಂತ ಆದರವಿದೆ. ವೇದರಹಸ್ಯವೆಂಬ ನಿಬಂಧಾವಲಿಯಲ್ಲಿ ಋಗ್ವೇದದ ಮರ್ಮವನ್ನು ಬಹು ಸರಸಾಗಿ ಪ್ರತಿಪಾದಿಸಿದ್ದಾರೆ.

* See Arya Vol III Page 217.

ವೇದದ ಅರ್ಥವನ್ನು ಮಾಡಲಿಕ್ಕೆ ಇಲ್ಲಿಯವರೆಗೆ ಮೂರು ಸಾರೆ ಪ್ರಯತ್ನಗಳಾದವು. ಉಪನಿಷತ್ತುಗಳು ಮೊದಲನೆಯ ಸಾರೆ ಈ ಪ್ರಯತ್ನವನ್ನು ಮಾಡಿದವು; ಅದು ಸರಿಯಾದದ್ದಿತ್ತು. ಆದರೆ ಮುಂದಿನ ಎರಡು ಪ್ರಯತ್ನಗಳೂ ತಪ್ಪು ಕ್ರಮವನ್ನು ಹಿಡಿದು ಆದುದರಿಂದ ಅವರಿಗೆ ಸರಿಯಾದ ಅರ್ಥವಾಗಲಿಲ್ಲ. ಸಾಯಣಾಚಾರ್ಯರೂ ಮತ್ತು ಅವರ ಅನುರೋಧದಿಂದ ಅರ್ಥಮಾಡಲಿಕ್ಕೆ ಹವಣಿಸಿದ ಪಾಶ್ಚಿಮಾತ್ಯ ಪಂಡಿತರೂ ವೇದಗಳ ಮರ್ಮವನ್ನೇ ತಿಳಿಯಲಿಲ್ಲವೆಂದು ಮಹರ್ಷಿಗಳು ಸ್ಪಷ್ಟವಾಗಿ ಅನ್ನುತ್ತಾರೆ ವೇದಗಳಲ್ಲಿ ಏನಾದರೂ ಹುಚ್ಚು ಕಲ್ಪನೆಗಳು ತುಂಬಿರುವವೆಂದೂ, ಯಜ್ಞಯಾಗಾದಿ ಕರ್ಮಗಳನ್ನು ಕುರಿತು ಎಲ್ಲ ಋಚೆಗಳುಂಟೆಂದೂ ಅನೇಕರು ತಪ್ಪು ಗ್ರಹಿಕೆಯನ್ನು ಮಾಡಿಕೊಂಡಿದ್ದಾರೆ. ವ್ಯಂಗ್ಯಾರ್ಥದಲ್ಲಿ ಬರೆದ ಈ ಪವಿತ್ರಗ್ರಂಥಗಳನ್ನು ಯಾರೂ ಸರಿಯಾಗಿ ತಿಳಕೊಳ್ಳಲಿಲ್ಲ. ಇದರಲ್ಲಿ ಅಗ್ನಿ, ವಾಯು ಮುಂತಾದ ರೂಪಕಗಳಿಂದ ತತ್ವಜ್ಞಾನದ ಚರ್ಚೆಯೇ ಹೇಗೆ ಮಾಡಲ್ಪಟ್ಟಿರುವದೆಂಬುದನ್ನು ಉದಾಹರಣ ಸಹಿತವಾಗಿ "ಆರ್ಯ" ಮಾಸಿಕ ಪುಸ್ತಕದಲ್ಲಿ ಗಂಭೀರ ರೀತಿಯಿಂದ ಚರ್ಚಿಸಿದ್ದಾರೆ.

ಮಹರ್ಷಿಗಳು ಸನಾತನಧರ್ಮದ ಅಭಿಮಾನಿಗಳಿದ್ದಾರೆ. ಹಾಗೂ ಈ ಸನಾತನ ಧರ್ಮವನ್ನು ಜಗತ್ತಿಗೆ ಕೊಡುವದೇ ಹಿಂದುಸ್ತಾನದ ಈಶನಿಯಮಿತಕಾರ್ಯವಿರುತ್ತದೆಂದು ಅವರು ತಮ್ಮ ದಿವ್ಯದೃಷ್ಟಿಯಿಂದ ಕಂಡು ಹಿಡಿದಿದ್ದಾರೆ. ಬಾಬಿಲೋನ, ಖಾಲ್ಡಿಯಾ, ಗ್ರೀಸಗಳಂಥ ಹಲವು ರಾಷ್ಟ್ರಗಳು ಹೇಳ ಹೆಸರಿಲ್ಲದಂತೆ ಆಗಿ ಹೋದವು ಆದರೆ ಅತಿ ಪುರಾತನಕಾಲದಿಂದ ಭರತಖಂಡವೇ ತಲೆ ಎತ್ತಿಕೊಂಡು ಅನೇಕ ರಾಷ್ಟ್ರಗಳ ಉದಯಾಸ್ತಗಳನ್ನು ನೋಡುತ್ತ ಇನ್ನೂ ನಿಂತಿರುವ ಉದ್ದೇಶವೇನಿರಬಹುದು? ಜಗತ್ತಿಗೆ ಧರ್ಮವನ್ನು ಕೊಡುವ ಕಾರ್ಯವು ಏಶಿಯಾ ಖಂಡದ–ಅಲ್ಲ ಭರತ ಖಂಡದ ಪಾಲಿಗೆ ಬಂದ ಕರ್ತವ್ಯವಿರುತ್ತದೆ. ಯಾಕಂದರೆ ಹಿಂದಕ್ಕೆ ಈ ಕಾರ್ಯವನ್ನು ಎರಡು ಸಾರೆ ಭರತಖಂಡವೇ ಜರುಗಿಸಿದೆ. ಕ್ರಿಸ್ತೀ ಧರ್ಮದ ಉತ್ಪತ್ತಿಗೆ ಕಾರಣವಾದ ಬೌದ್ಧ ಧರ್ಮವನ್ನೂ, ಅದಕ್ಕೂ ಮುಂಚೆ ಒಮ್ಮೆ ವೈದಿಕ ಧರ್ಮವನ್ನೂ ಹಿಂದುಸ್ತಾನವು ಜಗತ್ತಿಗೆ ಕೊಟ್ಟಿತ್ತೆಂದು ಇತಿಹಾಸವು ಹೇಳುತ್ತದೆ * ಇದಕ್ಕೆ ಪ್ರತಿಯಾಗಿ ಭೌತಿಕ ಐಶ್ವರ್ಯದ ಪಾಶ್ಚಿಮಾತ್ಯರ ದಾಳಿಗಳು ಹಿಂದುಸ್ತಾನದ ಮೇಲೆ ಬಂದವು. ಸಿಕಂದರನ ದಾಳಿಯು ಈ ಮಾತಿಗೆ ಸಾಕ್ಷಿಯಿದೆ. ಅದರಂತೆ ಈಗ ಯುರೋಪಿಯರು ತಮ್ಮ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರಲಿಕ್ಕೆ ಬಂದಿದ್ದಾರೆ. ಜಗತ್ತಿಗೆ ಸನಾತನ ಧರ್ಮದ ಉಪದೇಶವನ್ನು ಮಾಡಿ ಮಾನವ ಕುಟುಂಬಕ್ಕೆ ಸುಖಿಯಾಗಿ ಮಾಡುವದು ಭಾರತೀಯರ ಕರ್ತವ್ಯವಾಗಿದೆ. ಕನ್ಯಾಗತದಲ್ಲಿ ಭಾಗೀರಥಿಯು ಕೃಷ್ಣೆಗೆ ಬರುವಳಂತೆ. ಈಗ ಪೂರ್ವ ಪಶ್ಚಿಮ ಸಂಸ್ಕೃತಿಗಳೆಂಬ ಭಾಗೀರಥಿ–ಕೃಷ್ಣೆಗಳ ಸಂಯೋಗದ ಯೋಗವು ಬಂದಿದೆ. ದಿವ್ಯ

* See Arya Vol. II Page 4, 5, 7 and 9.

ಧರ್ಮಗಳು ಈ ಮಾತಿಗೆ ಸಾಕ್ಷಿಯಾಗಿವೆ. ಈ ಧರ್ಮದ ನಿಜವಾದ ಅನುಯಾಯಿಗಳು ನೂರಿನ್ನೂರಾದರೂ ಸಿಕ್ಕಬಹುದೋ ಎಂಬುವ ಸಂಶಯವಿದೆ. ಹಿಂದುಸ್ಥಾನದಲ್ಲಿ ಸಂದಿಗೊಂದಿಗಳಲ್ಲಿ ಹಬ್ಬಿ, ಹೆಚ್ಚಾಗಿ ಇತರ ಜಗತ್ತನ್ನು ವ್ಯಾಪಿಸಿದ ಬೌದ್ಧಧರ್ಮವು ಇಂದಿಗೆ ಹಿಂದುಸ್ಥಾನದಲ್ಲಿಯೇ ನಾಮಶೇಷವಾಗಿದೆ. ಆದರೆ ಸನಾತನ ಧರ್ಮವು ಮಾತ್ರ ಎಷ್ಟು ದಕ್ಕಿಗಳನ್ನು ತಿಂದರೂ ಇಂದಿಗೂ ಹಾಗೇ ಇದೆ. ಅದರ ಶುದ್ಧ ಸ್ವರೂಪದ ಒಂದು ತತ್ವವೂ ಬಿದಲಾಗಿಲ್ಲ ಆದರೆ ಅನುಯಾಯಿಗಳು ಮಾತ್ರ ಅಸದ್ವರ್ತನದಿಂದ ಅದಕ್ಕೆ ತಾತ್ಕಾಲಿಕ ಮಾಲಿನ್ಯವನ್ನು ತಂದರೆ ಅದಕ್ಕೆ ಯಾವ ಉಪಾಯವು? ಬೌದ್ಧ, ಕ್ರಿಸ್ತೀ ಧರ್ಮಗಳಂತೆ ಬಹುಜನ ಸಮಾಜಕ್ಕೆ ಆಚರಿಸಲಿಕ್ಕೆ ಅನ್ಯಾಹಾರ್ಯವಾದ ಧರ್ಮವು ಮಾತ್ರ ಇದಲ್ಲ. ಸನಾತನ ಧರ್ಮದ ಹೊಟ್ಟೆಯಲ್ಲಿ ಇಂದಿಗೆ ಅಸ್ತಿತ್ವದೊಳಗೆ ಇರುವ ಎಲ್ಲ ಪ್ರಕಾರದ ಧಾರ್ಮಿಕ ಪಂಥಗಳೂ ಸೇರುತ್ತವೆ. ಇಷ್ಟು ಇದು ವಿಶಾಲವಾದದ್ದು. ಬೌದ್ಧ, ಕ್ರಿಸ್ತಿ ಮುಂತಾದ ಧರ್ಮಗಳು ಆರ್ಯ ಧರ್ಮದೊಳಗಿನ ಒಂದೊಂದು ಸಣ್ಣ ಪುಟ್ಟ ತತ್ವದ ಮೇಲೆ ನಿಂತಿವೆ! ಮಾನವಜಾತಿಗೆ ಆಚರಿಸಲಿಕ್ಕೆ ಇದೊಂದೇ ಧರ್ಮವು ತಕ್ಕುದ್ದಾಗಿದೆ. ಅಂತೇ ಮಹರ್ಷಿ ಅರವಿಂದಘೋಷರು ಈ ವೇದ-ನಿಕ್ಷಿಪ್ತ ಧನವನ್ನು ಧರ್ಮದ ಸಲುವಾಗಿ ಹಲಬುತ್ತಿರುವ ಜಗತ್ತಿಗೆ ಕೊಟ್ಟು ಸುಖಿಯಾಗಿ ಮಾಡಬೇಕೆಂದು ಅನ್ನುತ್ತಿರುವರು. ಮಹರ್ಷಿಗಳ ಸನಾತನ ಧರ್ಮದ ಕಲ್ಪನೆಯು ಇತ್ತಲಾಗಿ ಲೋಕರೂಢಿಯಲ್ಲಿರುವ ಅಸದ್ಧರ್ಮ ಕಲ್ಪನೆಗಿಂತ ತೀರ ಭಿನ್ನವಾದದ್ದೂ ಉದಾತ್ತವಾದದ್ದೂ ಇರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಮಹರ್ಷಿಗಳು, ಒಮ್ಮೆ " ನಾನು ಹಿಂದುಸ್ಥಾನ ಸಾಮಾಜಿಕ, ರಾಜಕೀಯ, ಮತ್ತು ಆರ್ಥಿಕ ಸಂಗತಿಗಳನ್ನೆಲ್ಲ ಹೊಸ ಹಾಗೂ ವಿಸ್ತೃತ ಅಸ್ತಿವಾರದ ಮೇಲೆ ಕಟ್ಟತಕ್ಕವನಿದ್ದೇನೆ, "ಎಂದು ಅಂದಿದ್ದಾರೆ.

ಜಗತ್ತಿಗೆ ಧರ್ಮವನ್ನು ಕೊಡುವ ಕೆಲಸವನ್ನು ಮಾಡಲಿಕ್ಕೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಬೇಕು. ಸ್ವತಂತ್ರ ಹಿಂದುಸ್ಥಾನವೇ ಈ ಕಾರ್ಯಕ್ಕೆ ಸಮರ್ಥವಾದೀತೇ ಹೊರತು ಪರಾವಲಂಬಿಯೂ ಹೀನಮನಸ್ಕವೂ ಆದಂಥ ಹಿಂದುಸ್ಥಾನವು ಎಂದೆಂದೂ ಸಮರ್ಥವಾಗಲಾರದು. ಆದ್ದರಿಂದ ಭರತಖಂಡದ ಸ್ವಾತಂತ್ರ್ಯಾರ್ಥವಾಗಿ ಪ್ರಯತ್ನಿಸುವದು ಮೊದಲನೆಯ ಕೆಲಸವು. ದೇಶದಲ್ಲಿ ದೇಶಾಭಿಮಾನದ ದೊಡ್ಡ ತೆರೆಯುಂಟಾಗಿ ಅದರಲ್ಲಿ ನಾನಾ ಜಾತಿಗಳೂ, ಪಂಥಗಳೂ ಏಕತ್ರವಾಗಿ ಕಾರ್ಯ ಮಾಡಲಕ್ಕೆ ಈಶ ಪ್ರೇರಣೆಯೇ ಮೂಲ ಕಾರಣವೆಂದು ಶ್ರೀ ಅರವಿಂದ ಯೋಗಿಗಳು ಅಂದಿದ್ದಾರೆ.* ಪರತಂತ್ರ ರಾಷ್ಟ್ರವು

Nationalism is a religion that has come from God . you must remember that you are the instruments of God for the salvation of your own country ಶ್ರೀ ಅರವಿಂದರ ಮತಗಳು ೧೯೦೮ರಲ್ಲ ಸಹ ಹೇಗಿದ್ದವೆಂಬದು ತಿಳಿಯಬೇಕೆಂದು ಮತ್ತೆ ಮುಂದೆ ಸ್ವಲ್ಪ ಅವತರಿಸಿಕೊಳ್ಳುತ್ತೇನೆ There is only one force and for that force I am not necessary you are not necessary, he is not necessary God is doing everything When He bids us suffer, we suffer, because that suffering is necessary to give others strength He himself is the worker and the work

Bombay lecture Modern Review July 1908

ಸ್ವಾತಂತ್ರ್ಯವನ್ನು ದೊರಕಿಸುವ ಮಾರ್ಗಗಳು ಮೂರು ಒಂದು ಸ್ವಾವಲಂಬನದಿಂದ, ಎರಡನೆಯ ಮಾರ್ಗವು ಭಿಕ್ಷೆಬೇಡಿ, ಅಂದರೆ ಸಾಮ್ರಾಜ್ಯ ಸರಕಾರದ ಕೃಪೆದೊರಕಿಸಿ, ಅವರ ಕೈಯಿಂದ ಸ್ವಲ್ಪ ಸ್ವಲ್ಪ ಇಸಿದುಕೊಳ್ಳುತ್ತ ಹೋಗುವದು. ಅಥವಾ ಮೂರನೆಯ ದಾರಿಯಂದರೆ ಪರರಾಷ್ಟ್ರದವರನ್ನು ಸಹಾಯಕ್ಕೆ ಕರೆಯುವದು.

ಸಾರ್ವಭೌಮರಾಗಿ ಆಳಲಿಕ್ಕೆಂದು ಹಲವುತರದ ಕಷ್ಟಸೋಸಿ, ತಮ್ಮ ಅನೇಕ ಸೈನಿಕರ ರಕ್ತವನ್ನು ಖರ್ಚುಮಾಡಿ ದೇಶವನ್ನು ಗೆದ್ದ ಸರಕಾರದವರು ಸುಮ್ಮಸುಮ್ಮನೆ ತಮ್ಮ ಕೈಯೊಳಗಿನ ಅಧಿಕಾರಗಳನ್ನು ಹೇಗೆ ಬಿಟ್ಟುಕೊಟ್ಟಾರು? ಜನರು ಸುಮ್ಮನೆ ಹೆಚ್ಚು ಗದ್ದಲ ಮಾಡಹತ್ತಿದರೆ ಏನೋ ಸ್ವಲ್ಪ ಕೊಟ್ಟಂತೆ ಮಾಡಿ ಅವರಿಗೆ ಸುಮ್ಮನೆ ಕೂಡಿಸುವದಕ್ಕೆ ವಿಜಯಿಗಳು ಪ್ರಯತ್ನ ಬಡುವದು ಸ್ವಾಭಾವಿಕವಿದೆ. ಆದರೆ ಇದರಲ್ಲಿ ಆಳುವ ಜನಾಂಗದ ಕೈಯಿಂದ ತಮಗೆ ಸ್ವಾತಂತ್ರ್ಯವು ಸಿಕ್ಕೀತೆಂದು ನಂಬಿಕೊಂಡು ಕುಳಿತವರ ಮೂರ್ಖತನವು ಮಾತ್ರ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ವಿಚಾರಿಸಿದರೆ ಹಿಂದುಸ್ಥಾನದವರಿಗೆ ಯಾಚನೆಯ ಉಪಾಯವು ನಿರುಪಯುಕ್ತವೆಂದು ನಿರ್ಣಿತವಾಯಿತು ಇನ್ನು ಪರಚಕ್ರದ ಸಹಾಯ ತಕ್ಕೊಳ್ಳುವ ಉಪಾಯದ ವಿಷಯಕ್ಕೆ ವಿಚಾರಿಸಿದರೆ ಅದೂ ಆತ್ಮಘಾತುಕ ಉಪಾಯವೆಂಬದು ಸ್ಪಷ್ಟವಾಗುತ್ತದೆ. ಯಾಕಂದರೆ ಪರರನ್ನು ಮನೆಯಲ್ಲಿ ತಂದು ಇದ್ದವರನ್ನು ಹೊರಗೆ ಹಾಕುವದರಲ್ಲಿ ಆ ಹೊಸ ಗಂಡ (ಶೂರ)ನೇ ಗಂಟಲಕ್ಕೆ ಕುಳಿತರೆ, ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗಾಗುತ್ತದೆ. ಉಳಿದವರಿಗಿಂತ ಬ್ರಿಟಿಶರೇ ನೆಟ್ಟಗಿದ್ದಾರೆ.

ಇನ್ನು ಉಳಿದದ್ದು, ಸ್ವಾವಲಂಬನದ ಮಾರ್ಗವು. ಇದರಲ್ಲಿ ಎರಡು ಪ್ರಕಾರಗಳು. ಸಶಸ್ತ್ರವು, ಮತ್ತು ನಿಶಸ್ತ್ರವು. ಸಶಸ್ತ್ರ ಪ್ರತೀಕಾರವು ಆಧುನಿಕ ಹಿಂದುಸ್ಥಾನಕ್ಕೆ ಉಪಯುಕ್ತವಿಲ್ಲ ಆದುದರಿಂದ ಅಂತೂ ಉಳಿದದ್ದೆಂದರೆ ನಿಃಶಸ್ತ್ರ ಪ್ರತೀಕಾರವು. ೧೯೦೬ರಲ್ಲಿ ಕಲಕತ್ತೆಗೆ ರಾಷ್ಟ್ರೀಯ ಸಭೆಯಲ್ಲಿ ವೀರಪಕ್ಷದವರು ಸ್ವರಾಜ್ಯವನ್ನು ಸಂಪಾದಿಸುವ ಮಾರ್ಗವೆಂದು ಮೂರು ಸಾಧನಗಳನ್ನು ಹೇಳಿದರು. ರಾಷ್ಟ್ರೀಯ ಶಿಕ್ಷಣ, ಸ್ವದೇಶಿ ಮತ್ತು ಬಹಿಷ್ಕಾರ. ಬಹಿಷ್ಕಾರದ ವಿವರಣೆಯನ್ನು ಮಾಡುವಾಗ ಶ್ರೀ ಅರವಿಂದ ಯೋಗಿಗಳು ಕರ್ಮಯೋಗಿನ್‌ದ ಒಂದು ಸಂಚಿಕೆಯಲ್ಲಿ ಇದೆಲ್ಲವನ್ನು ಬಹು ಸರಸವಾಗಿ ವಿವರಿಸಿದ್ದಾರೆ. ಮತ್ತು ಬಹಿಷ್ಕಾರದ ವ್ಯಾಪ್ತಿಯನ್ನು ಶಾಲೆ, ಕೋರ್ಟು-ಕಚೇರಿಗಳವರೆಗೆ ಬೆಳಿಸಿ, ಈಗಿನ ಅಸಹಯೋಗದ ಕಲ್ಪನೆಯನ್ನೇ ಆಗ ೧೨ ವರ್ಷಗಳ ಹಿಂದೆ ಸಂಪೂರ್ಣವಾಗಿ ಪ್ರತಿಪಾದಿಸಿದ್ದಾರೆ! ಆತ್ಮಸಾಮರ್ಥ್ಯವನ್ನು ದೊರಕಿಸದಿದ್ದರೆ ಯಾವದೂ ಸಾಧ್ಯವಾಗದು. **ನಾಯಮಾತ್ಮಾ ಬಲಹೀನೇನ ಲಭ್ಯಃ** । ಸ್ವದೇಶಿಯ ಉಪಯೋಗ ಮಾಡಿರಿ, ಸಾಮರ್ಥ್ಯ ಬೆಳಿಸಿರಿ. ಮಾತು ಸ್ವದೇಶಿ, ಉಡಿಗೆ-ತೊಡಿಗೆ ಸ್ವದೇಶಿ, ಊಟ ಸ್ವದೇಶಿ ಹೀಗೆ ಪ್ರತಿಯೊಂದು ವಿಷಯದಲ್ಲಿ ಸ್ವದೇಶೀ ವ್ರತದ ಆಚರಣವು ಬೇಕೆಂದು ಅರವಿಂದ ಯೋಗಿಗಳು ಪ್ರತಿಪಾದಿಸಿದ್ದಾರೆ.

ಮಹಾತ್ಮಾ ಗಾಂಧಿಯವರು ಮಹರ್ಷಿಗಳ ಅರ್ಧಕಾರ್ಯವನ್ನು ಈಗ ಮಾಡಿಟ್ಟಿದ್ದಾರೆ. ನಾಳೆ ಶ್ರೀ ಅರವಿಂದ ಯೋಗಿಗಳು ತಮ್ಮ ಅದ್ಭುತಕಾರ್ಯವನ್ನು ಮಾಡಲಿಕ್ಕೆ ಬರತಕ್ಕವರಿದ್ದಾರೆ. ಮಹಾತ್ಮರ ಕಾರ್ಯಗಳಿಗೆ ಉಪಯುಕ್ತರಾಗುವಂತೆ ಜಗಚ್ಚಾಲಕ ಭಗವಂತನ ಚರಣಕಮಲಗಳಲ್ಲಿ ಆಯುಷ್ಯವನ್ನು ಅರ್ಪಿಸಿ, ನಿಷ್ಕಾಮಬುದ್ಧಿಯಿಂದ ಕಾರ್ಯಮಾಡಲಿಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುವದೇ ಬಹುಜನ ಸಮಾಜದ ಕರ್ತವ್ಯವಲ್ಲವೇ ?

# ೮ ಉಪಸಂಹಾರ.

Not failure but low aim is crime.

*   *   *

उत्थातव्य जागृतव्यं योक्तव्यं भूतिकर्मसु ।
भविष्यतीत्येव मनः कृत्वा सततमव्यथै ॥

—व्यासः

ಮಹರ್ಷಿ ಅರವಿಂದಘೋಸರ ಚರಿತ್ರದ ಮಹತ್ವದಭಾಗವು ಇನ್ನು ಮುಂದೆ ಹೊರಗೆ ಬರತಕ್ಕದ್ದಿದೆ. ಭವಿಷ್ಯತ್ಕಾಲದ ಒಡಲೊಳಗೆ ಅದೃಶ್ಯವಾಗಿರುವ ಅರವಿಂದ ಯೋಗಿಗಳ ಅದ್ಭುತರಮ್ಯಚರಿತ್ರದ ಅನಾವರಣ ಸಮಾರಂಭವು ವೇಲಾ-ಪುರುಷನ (ವೇಳೆಯ) ಕೈಯಿಂದ ಆಗತಕ್ಕದ್ದಿದೆ. ಇದನ್ನು ಬೇಗನೇ ನೆರವೇರಿಸುವದಕ್ಕಾಗಿ ವೇಲಾ-ಪುರುಷನಿಗೆ ಆಗ್ರಹದಿಂದ ಸೂಚಿಸುತ್ತಿರುವರೋ ಏನೋ ಎಂಬಂತೆ ಮಹರ್ಷಿಗಳ ಆಗಮನದ ವಿಷಯಕ್ಕೆ ಜನರು ಉತ್ಸುಕರಾಗಿದ್ದಾರೆ. ನಮ್ಮ ಚರಿತ್ರನಾಯಕರ ಆಯುಷ್ಯದ ಪ್ರವಾಹವು ತಿರುಗುತ್ತ ತಿರುಗುತ್ತ ಒಮ್ಮೆ ತನ್ನ ನಿಜವಾದ ಸ್ಥಾನಕ್ಕೆ ಬಂತು ಮೊದಲು ರಾಜ್ಯಮಾನ್ಯರಿದ್ದ ಅರವಿಂದರು ಲೋಕಮಾನ್ಯ ಅರವಿಂದರಾದರು. ಮುಂದೆ ಲೋಕಮಾನ್ಯತೆಯಲ್ಲಿಯೇ ಅವರಿಗೆ ತುಷ್ಟಿಯಾಗದೆ ಮುಮುಕ್ಷುಗಳಾಗಿ ಸಾಧಕರಾದರು. ಈಗ ಈ ಸಾಧನಾವಸ್ಥೆಯು ಮುಗಿದು ಪೂರ್ಣಸಿದ್ಧಾವಸ್ಥೆಯು ಪ್ರಾಪ್ತವಾಗಿದೆ, ಮತ್ತು ಸ್ವಾನುಭವದಿಂದ ಮನುಷ್ಯನ ಆದ್ಯ ಕರ್ತವ್ಯವು ಆತ್ಮಜ್ಞಾನವನ್ನು ಮಾಡಿಕೊಳ್ಳುವದೇ ಇರುತ್ತದೆಂದು ಹಲವು ತರದ ಭಾಷೆಯಿಂದ ಜಗತ್ತಿನೆದುರಿಗೆ ಇಟ್ಟಿದ್ದಾರೆ.

ಮಹರ್ಷಿಗಳು ಹೇಳುವ ಮಾತುಗಳಲ್ಲಿ ಬಹುಭಾಗವು ಹಿಂದೂಜನರ ಪೂರ್ಣಪರಿಚಯದ್ದಿರುತ್ತದೆ. ವೈರಾಗ್ಯಪರ ವಿಚಾರಗಳೂ, ವೇದಾಂತದ ಉದಾತ್ತ ತತ್ವಗಳ ಶಾಬ್ದಿಕ ಉಚ್ಚಾರವೂ ಅವರಿಗೆ ಗರ್ಭವಾಸದೊಳಗಿಂದಲೇ ಕೇಳಲಿಕ್ಕೆ ಸಿಗುತ್ತಿರುತ್ತದೆ ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲ, ಆ ಜಗಚ್ಚಾಲಕನೇ ಎಲ್ಲವನ್ನು ಮಾಡಿಸಲಿಕ್ಕೆ ಸಮರ್ಥನು; ಮನುಷ್ಯನು ಆ ಸರ್ವೇಶನ ಇಚ್ಛೆಗಳನ್ನು ಪೂರ್ಣಮಾಡಲಿಕ್ಕೆ ನಿಮಿತ್ತಮಾತ್ರನಾಗಿರುವನು ಎಂದು ಮುಂತಾಗಿ ಹಿಂದುಸ್ಥಾನದ ಹಳ್ಳಿ-ಕೊಂಪೆಗಳೊಳಗಿನ ಹುಂಬ ಒಕ್ಕಲಿಗರೂ ಮಾತಾಡುವರು. ಅಂದಬಳಿಕ ಶ್ರೀ ಅರವಿಂದ ಯೋಗಿಗಳು ಹೇಳಿದುದರಲ್ಲಿ ನಾವಿನ್ಯವೇನು?

ಸಾಧಾರಣವಾಗಿ ಅನೇಕರು, " ನಮ್ಮ ಕೈಯಲ್ಲೇನೂ ಇಲ್ಲ, ದೇವರು ಮಾಡಿಸಿದ್ದನ್ನು ಮಾಡುತ್ತೇವೆ," ಎಂದೆನ್ನುವರು; ನಿಜವು. ಆದರೆ ಈ ಜನರು ಅಜ್ಞಾನದಿಂದ ಹೀಗೆ ಅನ್ನುತ್ತಿರಬೇಕು, ಅಥವಾ ಠಕ್ಕತನದಿಂದ ವಂಚಿಸಲಿಕ್ಕೆ ಈ ಪ್ರಕಾರದ ಶಬ್ದಯೋ

ಜನೆಯನ್ನು ಮಾಡುತ್ತಿರಲಿಕ್ಕೆ ಬೇಕು. ಯಾಕಂದರೆ ಸ್ವಲ್ಪ ವಿಚಾರಿಸಿದರೆ ಈ ಜನರು ಪೂರ್ಣವಾಗಿ ಈಶ ಇಚ್ಛೆಗಳಲ್ಲಿ ವಿಲೀನರಾಗಿರುವದಿಲ್ಲೆಂದು ಕಂಡು ಬರುವದು. ಮಹರ್ಷಿ ಅರವಿಂದರು, "ನನಗೆ ಸ್ವಂತದ ಇಚ್ಛೆಗಳಿಲ್ಲ. ನಾನು ಪರಮಾತ್ಮನ ಕೈಯೊಳಗಿನ ಒಂದು ಆಯುಧವಾಗಿದ್ದು ಆತನ ಇಚ್ಛೆಗಳನ್ನು ಈಡೇರಿಸುವದರಲ್ಲಿ ನನ್ನ ಆಯುಷ್ಯದ ಉಪಯೋಗವಾಗತಕ್ಕದ್ದಿರುತ್ತದೆಂದು " ಅನ್ನುತ್ತಾರೆ. ಈ ಮಾತನ್ನು ಮಹರ್ಷಿಗಳು ಅನ್ನುವದರೊಳಗೂ, ಉಳಿದ ವಿಷಯಜಾಲದಲ್ಲಿ ತೇಳಲಾಡುವ ಜನರು ಅನ್ನುವದರೊಳಗೂ ಬಹಳ ಅಭ್ಯಂತರವಿರುತ್ತದೆ. ವಿಶ್ವದಲ್ಲಿ ಬೆರೆತು ತದಾಕಾರವನ್ನು ಹೊಂದಲಿಕ್ಕೆ ಅಡ್ಡ ಬರುವ ಅಹಂಕಾರವನ್ನು ಸಂಪೂರ್ಣ ನಾಶಮಾಡಿ ಸೋऽಹಮ್ ವೃತ್ತಿಯುಳ್ಳವರಾಗಿ ಶ್ರೀ ಅರವಿಂದ ಯೋಗಿಗಳು ಅನ್ನುವ ಮಾತಿದು. ಆದರೆ ಅದನ್ನೇ ವಿಪರೀತ ಅರ್ಥದಲ್ಲಿ ಹೀನವೃತ್ತಿಗಳ ದಾಸರಾಗಿರುವ ಜನರು ಅಜ್ಞಾನದಿಂದ ಅಥವಾ ವಂಚನೆಯಿಂದ ಉಚ್ಚರಿಸಿದರೆ ಹೇಗೆ ಯೋಗ್ಯವಾದೀತು? ಅರವಿಂದ ಯೋಗಿಗಳು ದಾಸರೂ, ನಿಮಿತ್ತಮಾತ್ರರೂ ಆಗಿರುವರು; ಮೇಲೆ ಹೇಳಿದಂಥ ಜನರೂ ಗುಲಾಮರೂ ನಿಮಿತ್ತಕಾರಣರೂ ಆಗಿರುವರು. ಆದರೆ ಮೊದಲನೆಯವರು ಪರಮಾತ್ಮನ ಆದೇಶಗಳನ್ನು ಗ್ರಹಿಸಿ ಆಚರಿಸುವದರಲ್ಲಿ ತತ್ಪರರಾಗಿದ್ದರೆ, ಎರಡನೆಯ ವರ್ಗದವರು ತಮ್ಮ ಇಂದ್ರಿಯ ವಿಕಾರಗಳ ಅಪ್ಪಣೆಗಳನ್ನು ಅಮಲಿನಲ್ಲಿ ತರುವದರೊಳಗೆ ಮಗ್ನರಾಗಿರುತ್ತಾರೆ. ಯಾರ ಬುದ್ಧಿಯು ಯಾವಾಗಲೂ ತೀರ ಶುದ್ಧ ನಿರ್ಣಯವನ್ನೇ ಕೊಡುವದಿಲ್ಲ, ಅಥವಾ ಯಾರ ಸ್ಫೂರ್ತಿಯು ಹಗಲೆಲ್ಲ ಪವಿತ್ರವಿಚಾರದ ಕಡೆಗೇ ಇರುವದಿಲ್ಲ, ಇಂಥ ಜನರಿಗೆ, " ನನಗೆ ಈಗ ದೇವರು ಹೀಗೆ ಮಾಡಲಿಕ್ಕೆ ಬುದ್ಧಿಯನ್ನು ಕೊಟ್ಟಿದ್ದಾನೆ, ನಾನು ಮಾಡುತ್ತೇನೆ, " ಎಂದೆನ್ನಲಿಕ್ಕೆ ಎಳ್ಳಷ್ಟೂ ಅಧಿಕಾರವಿಲ್ಲ. ಒಂದು ವೇಳೆ ಈ ಪ್ರಕಾರದ ಭಾಷೆಯನ್ನು ಉಪಯೋಗಿಸುತ್ತಿದ್ದರೆ ಅವರು ಅಜ್ಞಾನಿಗಳಾದರೂ ಇರಬೇಕು; ಅಥವಾ ಮೋಸಗಾರರಾದರೂ ಇರಲಿಕ್ಕೆಬೇಕು.

ಆದುದರಿಂದ ಯಾಂಗೆ ಮಹರ್ಷಿಗಳ ಸಂದೇಶದಂತೆ ಪರಮೇಶನಲ್ಲಿ ತದಾಕಾರ ವೃತ್ತಿಯನ್ನು ಹೊಂದಿ ಆತನ ಇಚ್ಛೆಗಳೇ ತನ್ನ ಇಚ್ಛೆಗಳೆಂದು ಮಾಡಿಕೊಂಡು, ಸರ್ವೇಶನ ಆಜ್ಞಾನುಸಾರವಾಗಿ ನಡೆಯುವ ಇಚ್ಛೆಯಿರುವದೋ ಅವರು ಹಿಂದೆ ಹೇಳಿದಂತೆ ಮುಂಚೆ ಆತ್ಮ ಶುದ್ಧಿಯನ್ನು ಮಾಡಿಕೊಳ್ಳಲಿಕ್ಕೆ ಬೇಕು ಎಲ್ಲ ಇಂದ್ರಿಯಗಳಲ್ಲಿ ಮನಸ್ಸು ಶ್ರೇಷ್ಠವಾದದ್ದು, ಆದ್ದರಿಂದ ಮುಂಚೆ ಮನಸ್ಸಿನಿಂದ ಆರಂಭಿಸಬೇಕು. ಯಮ ನಿಯಮಾದಿಗಳು ಮನಸ್ಸು ಅಂಕಿತವಾಗಬೇಕೆಂದೇ ಇರುತ್ತವೆ. ಕಾರಣ ಮುಂಚೆ ಮನಸ್ಸಿಗೆ ಕೈಹಾಕಬೇಕು. ಇದನ್ನು ಮಾಡುವ ಮುಂಚೆ ಮನಸ್ಸನ್ನು ಉಸುರುಗಟ್ಟುವ ಸಂಕುಚಿತ ವಾತಾವರಣದೊಳಗಿಂದ ಹೊರಗೆ ತೆಗೆದು ಅದಕ್ಕೆ ಸ್ವಾತಂತ್ರ್ಯದ ಶುದ್ಧ ಹವೆಯನ್ನು ಉಸುರಾಡಿಸಗೊಡಬೇಕು. ವ್ಯಕ್ತಿವಿಷಯಕ ಸಮಾಜವಿಷಯಕ ಅಥವಾ ಇತರ ಯಾವದೇ ತರದ ಕ್ಷುಲ್ಲಕ ಕಲ್ಪನಾವಲಯಗಳೊಳಗಿಂದ ಒಳ್ಳೇ ಎದೆಗಾರಿಕೆಯಿಂದ ಮೊದಲು ಹೊರಬಿದ್ದು ಹೊಸದೃಷ್ಟಿಯಿಂದ ಜಗತ್ತನ್ನು ನೋಡಲಿಕ್ಕೆ ಕಲಿಯಬೇಕು.

ಮಹರ್ಷಿಗಳ ಚರಿತ್ರದ ಫಲಶ್ರುತಿಯಾವದು? ಅವರ ಉತ್ಕರ್ಷದ ರಹಸ್ಯವೇನು? ಧೈರ್ಯದಿಂದ ಶಾಸ್ತ್ರೋಕ್ತ ಮಾರ್ಗವನ್ನು ಸ್ವತಂತ್ರ ವಿಚಾರಪೂರ್ವಕವಾಗಿ ಅನುಸರಿಸಿದುದೇ ಅವರ ಚರಿತ್ರದ ರಹಸ್ಯವು. ಹಲವರು ಉತ್ಕರ್ಷವನ್ನು ಮಾತ್ರ ಬಯಸುವರು. ಆದರೆ ಪ್ರಯತ್ನ ಮಾಡಲಿಕ್ಕೆ ಒಲ್ಲರು. ಆಯುಷ್ಯದ ಸಾಧ್ಯ-ಸಾಧನಗಳನ್ನು ನಿಶ್ಚಯಿಸದೆ ಪ್ರವಾಹ ಪತಿತರಾಗಿ ಐವತ್ತು ತಿರುಗಣಿಗಳಲ್ಲಿ ಸಿಕ್ಕುತ್ತ ಒದ್ದಾಡುತ್ತ ದಿನಗಳನ್ನು ಕಳೆಯುವರು. ಆಯುಷ್ಯದ ಸಾಧ್ಯವು ವಿಷಯ-ಭೋಗವೇ, ಪ್ರಜೋತ್ಪಾದನವೇ, ಧನಾರ್ಜನೆಯೋ, ಕೀರ್ತಿಯೋ ವಿದ್ಯಾವ್ಯಾಸಂಗವೇ ಅಥವಾ ಇವೆಲ್ಲವುಗಳಿಂದ ಮತ್ತೇನಾದರೂ ಒಂದು ದೊಡ್ಡದಿದ್ದು ಅದನ್ನು ದೊರಕಿಸಿಕೊಳ್ಳುವದೇ ಹೀಗೆ ಯಾವದೆಂಬುವನ್ನು ಮುಂಚೆ ಸ್ಥಿರಪಡಿಸಿ, ಕಾರ್ಯಕ್ಕೆ ಹತ್ತಿದರೆ ಇಚ್ಛಿತ ಯಶಸ್ಸು ಸಿಕ್ಕಿತೋ ಇಲ್ಲವೋ ಎಂಬುದನ್ನು ತಿಳಿಯಲಿಕ್ಕೆ ಅನುಕೂಲವಾಗುವದು. ಮೊಟ್ಟಮೊದಲು ಅಂತಃಶುದ್ಧಿಯನ್ನು ಮಾಡಿಕೊಂಡು ಅಥವಾ ಮಾಡಿಕೊಳ್ಳುತ್ತ ಯಾವದೊಂದು ನಿಶ್ಚಿತ ಧ್ಯೇಯದ ಸಾಧನೆಗೆ ಪ್ರವರ್ತಿಸುವದು ಉಚಿತವು. ಧ್ಯೇಯವು ಧ್ರುವ ನಕ್ಷತ್ರದಂತೆ ಸ್ಥಿರವಾದದ್ದಿರಲಿಕ್ಕೆ ಬೇಕು. ಯಾವದೇ ಧ್ಯೇಯದ ಸಿದ್ಧಿಗಾದರೂ ಶುದ್ಧವೂ, ಸಾತ್ವಿಕವೂ, ಪ್ರಶಾಂತವೂ ಆದ ಮನಸ್ಸಿನ ಅವಶ್ಯಕತೆಯಿರುತ್ತದೆ.

ಮೊದಲು ಆತ್ಯಂತಿಕ ಧ್ಯೇಯವಾವುದೆಂಬುವನ್ನು ನಿಶ್ಚಯಿಸಿ, ಬಳಿಕ ಅದರ ಸಿದ್ಧಿಯವರೆಗಿನ ಮಧ್ಯದೊಳಗಿನ ಕೆಲವು ಮೆಟ್ಟಿಲುಗಳನ್ನು ಅಂದರೆ ತಾತ್ಕಾಲಿಕ ಸಾಧ್ಯಗಳನ್ನು ಗೊತ್ತು ಮಾಡಿಕೊಳ್ಳಬೇಕು. ಈ ತಾತ್ಕಾಲಿಕ ಸಾಧ್ಯಗಳು ಪರಿಸ್ಥಿತಿಯಂತೆ ಬದಲಾಗುತ್ತಿರುತ್ತವೆ. ಇವುಗಳಿಗೆ ವಿಶೇಷ ಅಂಟಿಕೊಳ್ಳದೆ ಆತ್ಯಂತಿಕ ಧ್ಯೇಯವು ಹೇಗೆ ಸಾಧ್ಯವಾದೀತೆಂಬುದರ ಕಡೆಗೆ ಸಂಪೂರ್ಣ ಚಿತ್ತವನ್ನಿಡಬೇಕು. ತಾತ್ಪೂರ್ತಿಕ ಸಾಧ್ಯಗಳು ಸಾಧನಗಳೆಂಬುದನ್ನು ಮರೆಯಕೂಡದು. ಆತ್ಯಂತಿಕ ಧ್ಯೇಯದ ಮಧ್ಯದೊಳಗಿನ ಕೆಲವು ಮೆಟ್ಟಿಲುಗಳೇ ಕಡೆಯವೆಂದು ತಿಳಕೊಂಡರೆ ಘಾತವಾಗುತ್ತದೆ.

ಆದುದರಿಂದ ಯಾರೇ ಆಗಲಿ, ತೀರ ಉಚ್ಚವಾದ ಹಾಗೂ ಸ್ಥಿರವಾದ ಆತ್ಯಂತಿಕ ಧ್ಯೇಯವನ್ನು ತಮ್ಮೆದುರಿಗೆ ಇಡಬೇಕು. ಕೆಲವು ಕ್ಷುದ್ರರು ಅದಕ್ಕೆ ನಗಬಹುದು, ನಗಲಿ. ಈ ಜಗತ್ತಿನೊಳಗೆ ಹೀಗೆ ಉಚ್ಚ ಧ್ಯೇಯದಿಂದ ಪ್ರೇರಿತರಾದವರಿಂದಲೇ ಏನಾದರೂ ಅಲ್ಪಸ್ವಲ್ಪ ಮಹತ್ಕಾರ್ಯಗಳಾಗಿರುತ್ತವೆಂಬದು ಆ ಮಂದಮತಿಗಳಿಗೇನು ಗೊತ್ತು? ಹೆಂಡರು ಮಕ್ಕಳ ಮೋಹದೊಳಗಿಂದ, ಲಕ್ಷ್ಮಿಯ ಮದದೊಳಗಿಂದ, ಅಧಿಕಾರದ ಗಮಜಿನೊಳಗಿಂದ ಅಥವಾ ಅಲ್ಪ ವಿದ್ಯೆಯ ಮಹಾಗರ್ವದೊಳಗಿಂದ ಹೊರಗೆ ಬಂದು ವಿಚಾರಿಸಲು ಅಸಮರ್ಥರಾದ ಕ್ಷುದ್ರಪ್ರಾಣಿಗಳ ಚೇಷ್ಟೆಗೆ ಭಯಪಟ್ಟು ಆತ್ಮನಾಶವನ್ನು ಮಾಡಿಕೊಳ್ಳುವದು ಲೇಸಾದೀತೇ? ಧ್ಯೇಯವು ದೊಡ್ಡದಿರುವದೆಂದು ಬೆದರಿ ಫಲವಿಲ್ಲ. ಪೂರ್ಣಮಾಡುವ ಹುಚ್ಚು ಹತ್ತಲಿ. ಈ ಹುಚ್ಚು ಕಾರ್ಯವನ್ನು ತಾನೇ ಮಾಡಿಸುವದು. ಅರವಿಂದ ಯೋಗಿಗಳು ತಮಗೆ ದೇವರನ್ನು ಕಾಣುವ ಹುಚ್ಚು ಹಿಡಿದಿದೆಯೆಂದು ಪತ್ನಿಗೆ ತಿಳಿಸಿ

ಧ್ವರು. ಆ ಹುಚ್ಚು ಅವರನ್ನು ಇಂದು ಮಹರ್ಷಿಗಳನ್ನಾಗಿ ಮಾಡಿತು. ಕೌಂಟರ್ಝುಪೆಲಿನನ ವಿಮಾನದ ಹುಚ್ಚು ಇಂದು ವಿಮಾನಗಳನ್ನು ಅಸ್ತಿತ್ವದಲ್ಲಿ ತಂದಿತು. ಯಾವದೇ ಕೃತ್ಯವು ಮೂರ್ತಸ್ವರೂಪವನ್ನು ಧರಿಸಿ ಭೂಲೋಕದಲ್ಲಿ ಬರುವ ಮೊದಲು ಕಲ್ಪನಾ ಸೃಷ್ಟಿಯಲ್ಲಿ ಉದಯ ಹೊಂದುತ್ತದೆ. ಇಂದಿನ ಜೀವಂತ ವಿಚಾರಗಳು ನಾಳಿನ ಜಗತ್ತಿನಲ್ಲಿ ಮೂರ್ತಸ್ವರೂಪವನ್ನು ಹೊಂದುವವು. ಬ್ರಹ್ಮನು ಸೃಷ್ಟಿಯನ್ನು ಸೃಜಿಸುವ ಮೊದಲು ಸಂಕಲ್ಪವನ್ನು ಮಾಡಿದನು; ಬಳಿಕ ಸೃಷ್ಟಿಯಾಯಿತೆಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಅಂದಮೇಲೆ ದಿವ್ಯವೂ, ಪವಿತ್ರವೂ, ಸ್ಥಿರವೂ, ಆತ್ಮೋನ್ನತಿಕರವೂ ಆದ ಅತ್ಯುದಾತ್ತ ಧ್ಯೇಯವನ್ನು ಪ್ರತಿಯೊಬ್ಬನು ತನ್ನೆದುರಿಗೆ ಇಟ್ಟುಕೊಂಡು ಅದರ ಸಾಧನೆಯಲ್ಲಿಯೇ ಆಯುಷ್ಯವನ್ನು ಕಳೆಯುವದು ಕರ್ತವ್ಯವಲ್ಲವೇ?

ಕರ್ಮವು ಜಡವು. ಅದಕ್ಕೆ ಉಚ್ಚ-ನೀಚತ್ವಗಳೇನೂ ಇಲ್ಲ, ಅದು ಕರ್ತೃವಿನ ಭಾವನೆಯ ಮೇಲೆ ಅವಲಂಬಿಸಿದೆ. ನೀರಿಗೆ ಬಣ್ಣವಿರುವದಿಲ್ಲ. ಹಾಕಿದ ಬಣ್ಣವೇ ನೀರಿನದು. ಕೃಷ್ಣನು ರಾಜಸೂಯ ಯಜ್ಞದಲ್ಲಿ ಮುಸರಿಯನ್ನು ಬಳೆದನೆಂದೂ, ಯುದ್ಧದಲ್ಲಿ ಸಾರಥಿಯಾಗಿದ್ದನೆಂದೂ ಯಾರೂ ದೂಷಿಸಿಲ್ಲ. ರಾಮನು ಗೊಲ್ಲತಿಯ ಎಂಜಲದ ಬೋರೇ ಹಣ್ಣುಗಳನ್ನು ತಿಂದನೆಂದು ಯಾರೂ ನಿಂದಿಸಿಲ್ಲ. ನಿಂದೆ ಅಥವಾ ದೂಷಣೆಯು ಆ ಕರ್ಮವನ್ನು ಹೀನ ಭಾವನೆಯಿಂದ ಮಾಡಿದರೆ ಬರುತ್ತದೆ. ಆದುದರಿಂದ ಪ್ರತಿಯೊಬ್ಬರು ತಮ್ಮಲ್ಲಿರುವ ಯೋಗ್ಯತೆಯಂತೆ ಅನುಕೂಲವಿರುವ ಪರಿಸ್ಥಿತಿಯಂತೆ ಆತ್ಯಂತಿಕ ಧ್ಯೇಯದ ಸಾಧನೆಗೆ ಯತ್ನಿಸುವಾಗ ನಿಂದಕರನ್ನು ಲಕ್ಷಿಸದೆ ತಮಗೆ ಸಾಧ್ಯವಿರುವ ಮಾರ್ಗದಿಂದ ಹೋಗಲಿಕ್ಕೆ ಅಡ್ಡಿಯಿಲ್ಲ. ಸರ್ವೇಶ್ವರನನ್ನು ತಮ್ಮ ಕರ್ಮಮಯ ಪುಷ್ಪಗಳಿಂದ ಆರಾಧಿಸುವ ಅಧಿಕಾರವು ಪ್ರತಿಯೊಬ್ಬರಿಗೆ ಇರುತ್ತದೆ. ಪರಮಾತ್ಮನಿಗೆ ಗುಲಾಬಿ ಹೂವಿನಷ್ಟೇ ಮಲ್ಲಿಗೆಯು ಅಥವಾ ಜಂಡಿನ ಹೂವು ಸೇರುತ್ತದೆ. ಅದನ್ನು ಏರಿಸುವವನ ಭಕ್ತಿಯ ಮೇಲೆ ಎಲ್ಲವೂ ಅವಲಂಬಿಸಿದೆ. ಕಾವ್ಯಶಕ್ತಿಯಿದ್ದವನು ಕವಿತ್ವದಿಂದಲೂ, ಚಿತ್ರಲೇಖನ ಕುಶಲನು ಚಿತ್ರಕಲೆಯಿಂದಲೂ, ಗಾಯಕನು ಗಾಯನದಿಂದಲೂ, ಮಾತುಗಾರನು ವಕ್ತೃತ್ವದಿಂದಲೂ ಹೀಗೆ ಯಾವ ಶಕ್ತಿಯೇ ಇರಲಿ ತದ್ದ್ವಾರವಾಗಿ ಪರಮಾತ್ಮನ ಸೇವೆಯನ್ನು ಮಾಡಲಿಕ್ಕೆ ಬರುತ್ತದೆ. ಆದರೆ ದೇವದತ್ತ ಶಕ್ತಿಗಳ ದುರುಪಯೋಗವನ್ನು ಮಾಡಕೊಳ್ಳಕೂಡದು. ಸ್ವಂತದ ಪ್ರತಿಷ್ಠೆಯನ್ನು ಬೆಳಿಸಲಿಕ್ಕೆ ಇಲ್ಲವೆ ಪರಪೀಡನೆಗೆ ಅಥವಾ ಇತರ ಕ್ಷುದ್ರ ರೀತಿಯಲ್ಲಿ ಆ ಶಕ್ತಿಯ ಉಪಯೋಗವನ್ನು ಮಾಡಿಕೊಂಡರೆ ಅದು ಪಾಪವು. ಏನನ್ನೇ ಮಾಡಿದರೂ ಪರಮೇಶ್ವರನಿಗೆ ಮುಟ್ಟಲೆಂಬ ಬುದ್ಧಿಯಿಂದ ಆರಂಭಿಸತಕ್ಕದ್ದು. ಹೆಂಡರು ಮಕ್ಕಳ ಹೊಟ್ಟೆಗೆ ಹಾಕಲಿ, ಕಬೀರನಂತೆ ಸಂತಸಜ್ಜನರ ಸಲುವಾಗಿ ತುಡುಗು ಮಾಡಲಿ, ದಿಲೀಪನಂತೆ ಆಕಳ ಸಲುವಾಗಿ ಆತ್ಮಾರ್ಪಣ ಮಾಡಲಿ, ಏನೂ ಮಾಡಿದರೂ ಅದರ ಮೂಲಭೂತ ಕಲ್ಪನೆಯು, "ಇದು ಸರ್ವೇಶ್ವರನ ಸೇವೆಯೆಂಬೀ'' ಇರತಕ್ಕದ್ದು. ಆದರೆ ಇದಕ್ಕೆ ವಿಪರೀತವಾಗಿ ಎಲ್ಲಿ, ವೈಯುಕ್ತಿಕ ಅಥವಾ ಸಣ್ಣಪುಟ್ಟ ಸಮಾಜದ ಇಲ್ಲವೆ ಜಾತಿಯ

ಹಿತಕ್ಕೆಂಬ ಭಾವನೆಯಿಂದ ಎಂಥ ಸಾಹಸವನ್ನು ಮಾಡಿದರೂ ಅದು ನಿರರ್ಥಕವು, ನಿಂದ್ಯವು, ಪಾಪಕರವು.

ಶ್ರೀ ಅರವಿಂದ ಮಹರ್ಷಿಗಳ ಈ ಸಂದೇಶವನ್ನು ಗ್ರಹಿಸಿ ಪಚನ ಮಾಡಿಕೊಂಡು ಅದನ್ನು ಕೃತಿಯಲ್ಲಿ ತರಲಿಕ್ಕೆ ಬಂಧುಗಳೇ, ಸಿದ್ಧರಿರುವಿರೋ? ಏಳಿರಿ. ನಿದ್ರೆಸಾಕು. ಸ್ವಾರ್ಥದ ಬಡಿದಾಟಗಳನ್ನು ಸುಟ್ಟು ಬಿಡುವ ಮಹರ್ಷಿ ಅರವಿಂದ ಘೋಷರವರ ಈ ಸಂದೇಶ ಗ್ರಹಣ ಮಾಡಿ ಕಾರ್ಯಕ್ಕೆ ಹತ್ತಿದರೆ ಯಾವ ಜಾತಿಯು ಅಥವಾ ಪಂಥದ ಪ್ರಶ್ನವೂ ಅಡ್ಡಬರುವಂತಿಲ್ಲ. ಯಾಕೆಂದರೆ ಇದು ಅಷ್ಟು ಉದಾತ್ತವಾಗಿದೆ. ಇದು ದೇವರ ಆದೇಶವಿದೆ. ಇದು ಮಾನವ ಕುಟುಂಬದ ಹಿತದ ಬೀಜಮಂತ್ರವಿದೆ. ಸ್ವಾರ್ಥ ಸಾಧಕರ ಬೆನ್ನು ಹತ್ತುವದು ಸಾಕಾಯಿತು. ಮಹರ್ಷಿಗಳ ಕಣ್ಣೆದುರಿಗೆ ಒಂದೇ ಜಾತಿಯ ಹಿತವಿಲ್ಲ; ಒಂದೇ ಸಮಾಜದ ಹಿತವಿಲ್ಲ; ಒಂದೇ ದೇಶದ ಹಿತವಿಲ್ಲ; ಒಂದೇ ಮಾನವ ವಂಶದ ಹಿತವಿಲ್ಲ; ಒಂದೇ ಜಗತ್ತಿನ ಹಿತವಿಲ್ಲ. ಇಡೀ ವಿಶ್ವದ ಹಿತವೇ ಅವರ ಸಾಧ್ಯವಾಗಿದೆ. ಪರಮೇಶ್ವರನ ಆಜ್ಞೆಗಳನ್ನು ಜರುಗಿಸಲಿಕ್ಕೆ ನಿಮಿತ್ತಮಾತ್ರರಾಗುವದೇ ಅವರ ಧ್ಯೇಯವಾಗಿದೆ. ಪರಮಾತ್ಮನಿಗೆ ಎಲ್ಲರೂ ಅಷ್ಟೇ. ಹಿಂದುಗಳೂ ಅಷ್ಟೆ; ಮುಸಲ್ಮಾನರೂ ಅಷ್ಟೆ; ಯುರೋಪಿಯರೂ ಅಷ್ಟೆ; ಮನುಷ್ಯರೂ ಅಷ್ಟೆ, ತದಿತರ ಪ್ರಾಣ್ಯುದ್ಭಿಜಾದಿ ಕೋಟಿಗಳೂ ಅಷ್ಟೇ. ಎಲ್ಲವುಗಳ ಕಲ್ಯಾಣವೇ ಪರಮೇಶ್ವರನ ಉದ್ದೇಶವು.

ಈ ಸಂದೇಶವನ್ನು ಅಮಾನ್ಯಮಾಡುವದೆಂದರೆ ದೇವರನ್ನು ಅಮಾನ್ಯಮಾಡಿದಂತಾಗುವದು. ಆತ್ಮಶುದ್ಧಿಯನ್ನು ಮಾಡಿಕೊಂಡು ಸತ್ಕ್ರಿಯು ಕುಸುಮಗಳಿಂದ ಜಗಚ್ಚಾಲಕನನ್ನು ಆರಾಧಿಸುವದಕ್ಕೆ ಅಸಮ್ಮತಿಯನ್ನು ತೋರಿಸುವದೆಂದರೆ, ಅದು ಸ್ವಂತದ ಘಾತವು, ಸಮಾಜದ ಅನಹಿತವು, ದೇಶದ ದುರ್ದೈವವು, ಮಾನವ ಕುಟುಂಬದ ಅಪಮಾನವು, ಪರಮೇಶ್ವರನ ಅವಜ್ಞೆಯು.

ಏಳಿರಿ! ಎಚ್ಚರಾಗಿರಿ! ಮುಂದಕ್ಕೆ ಸಾಗಿರಿ!!

ಸಮಾಪ್ತ.

Printed by Y. B. Jathar at the Karnatak Printing Works, Dharwar.

# ಪೂರಕ ಪ್ರಕರಣಂ.

ಮಹರ್ಷಿ ಅರವಿಂದ ಬಾಬುಗಳ ರಸಾಲವಾಣಿಯಿಂದ ನಾಲ್ಕು ಉಪದೇಶದ ಮಾತುಗಳನ್ನು ಕೇಳಲಿಕ್ಕೆ ಸಿಕ್ಕವರು ಧನ್ಯರು! ಆದರೆ ಆ ಭಾಗ್ಯವು ಎಲ್ಲರ ಹಣೇಬರಹ ದಲ್ಲಿಲ್ಲಿರುವದು? ಕನ್ನಡವಾಚಕರಿಗೆ ಅವರ ಉದಾತ್ತವಿಚಾರಗಳ ಕಲ್ಪನೆಯು ಸ್ಥೂಲ ಮಾನದಿಂದಾದರೂ ಆಗಲೆಂಬುವ ಹೇತುವಿನಿಂದ ಬಾಬುಗಳವರು ಹೌರಾದಲ್ಲಿ ೧೯೦೭ರಲ್ಲಿ ಒಮ್ಮೆ ಅಲ್ಲಿಯ ಪೀಪಲ್ಸ ಅಸೋಸಿಏಶನದ ವಾರ್ಷಿಕಸಭೆಯ ಮುಂದೆ ಕೊಟ್ಟ ಒಂದು ವ್ಯಾಖ್ಯಾನದ ಸಾರವನ್ನು ಕೆಳಗೆ ಕೊಟ್ಟಿದೆ. ಮೂಲವ್ಯಾಖ್ಯಾನದ ಸೌಂದರ್ಯದ ಅಲ್ಪಾಂಶವಾದರೂ ಇದರಲ್ಲಿ ಸಾಧಿಸಿಲ್ಲ. ಇಂಗ್ಲೀಷ ಬಲ್ಲ ವಾಚಕರು ಅದನ್ನು ಮೂಲ ದಲ್ಲಿ ಓದಿ ತೃಪ್ತಿಪಡಬೇಕು. ಏನೂ ಇಲ್ಲದ್ದಕ್ಕಿಂತ ಅಲ್ಪವಾದರೂ ಲೇಸೆಂದು ಆ ಸ್ಫೂರ್ತಿ ದಾಯಕ ಭಾಷಣದ ಸಾರಾಂಶವನ್ನು ಕೆಳಗೆ ಕೊಟ್ಟಿರುತ್ತದೆ.

## ಸಮಾಜಗಳ ಹಕ್ಕು.*

ನನ್ನ ಮಿತ್ರರಾದ ಗಿಸ್ಪತಿ ಕಾವ್ಯತೀರ್ಥರು ತಮ್ಮಮೇಲಿನ ಜವಾಬದಾರಿಯನ್ನು ತಪ್ಪಿಸಿ ಅದನ್ನು ನನ್ನ ಮೇಲೆ ಹಾಕಿದ್ದಾರೆ. ನಾನು ಈ ವಿಷಯದ ವಿವೇಚನವನ್ನು ಸ್ವಲ್ಪ ವಿಸ್ತೃತದೃಷ್ಟಿಯಿಂದ ಮಾಡತಕ್ಕವನಿದ್ದೇನೆ. ಇಂದು ಈ ವಿಷಯುವನ್ನೇ ತಕ್ಕೊಳ್ಳಲಿಕ್ಕೆ ಕಾರಣಗಳು ಎರಡು. ಇಂದಿನ ಈ ಸಭೆಯು ನೆರೆದ ಉದ್ದೇಶವು ನನ್ನ ವಿಷ ಯಕ್ಕೆ ಸಂಬಂಧಪಟ್ಟಿರುವದು ಮೊದಲನೆಯದು. ಹಾಗೂ ಸಮಾಜಗಳ ಯಾವ ಹಕ್ಕುಗಳು ಜಗತ್ತಿನೊಳಗೆ ಎಲ್ಲ ಕಡೆಯಲ್ಲಿ ರಾಷ್ಟ್ರದ ಜೀವಾಳದ ಸಂಗತಿಗಳೆಂದು ತಿಳಿಯಲ್ಪಡುವವೋ ಅಂಥ ಆ ಹಕ್ಕುಗಳನ್ನು ನಷ್ಟಪಡಿಸಲಿಕ್ಕೆ ಸರಕಾರದವರು ಯತ್ನಿಸು ವದು ಎರಡನೆಯದು.

ದೇಶವು ರಾಜನಿಂದಾಳಲ್ಪಡುತ್ತಿರಲಿ, ಅಲ್ಪ ಸಂಖ್ಯಾಕರಿಂದ ಸಂರಕ್ಷಿಸಲ್ಪಡುತ್ತಿ ರಲಿ ಅಥವಾ ಬಹುಸಂಖ್ಯಾಕರಿಂದ ನಡಿಸಲ್ಪಡುತ್ತಿರಲಿ ಯುರೋಪದೊಳಗಿನ ಜನರು ತಮಗೆ ಮೂರು ಜನ್ಮಸಿದ್ಧ ಹಕ್ಕುಗಳಿರುತ್ತವೆಂದು ತಿಳಿಯುತ್ತಾರೆ. ಈ ಪವಿತ್ರವಾದ ಜನ್ಮಸಿದ್ಧ ಹಕ್ಕುಗಳಿಗೆ ಯಾರಾದರೂ ಕೈ ಹಾಕಿದರೆ ಅದು ಅವರಿಗೆ ಸಹನವಾಗುವ ದಿಲ್ಲ. ಈ ಹಕ್ಕುಗಳಾವವೆಂದರೆ ಒಂದನೆಯದು ಭಾಷಣಸ್ವಾತಂತ್ರ್ಯ; ಎರಡನೆಯದು ಮುದ್ರಣಸ್ವಾತಂತ್ರ್ಯ; ಮೂರನೆಯದು ಸಭಾಸ್ವಾತಂತ್ರ್ಯ; ಭಾಷಣ ಸ್ವಾತಂತ್ರ್ಯದಿಂದ

*ಇದನ್ನು Nation builders III ದೊಳಗಿನ ಶ್ರೀ ಅರವಿಂದರ ವ್ಯಾಖ್ಯಾನದ ಮೇಲಿಂದ ತಕ್ಕೊಂಡಿದೆ.

ಜನರಲ್ಲಿ ಕಲ್ಪನೆಗಳ ಪ್ರಸಾರವಾಗುತ್ತದೆ. ಆತ್ಮೋನ್ನತಿಗೆ ಭಾಷಣ ಸ್ವಾತಂತ್ರ್ಯವೇ ಕಾರಣವು. ನಮ್ಮ ತತ್ವಜ್ಞಾನದಂತೆ ಶಬ್ದ–ಸೃಷ್ಟಿಯಿಂದ ಜಗದುತ್ಪತ್ತಿಗೆ ಆರಂಭವಾಯಿತು. ಭಾಷಣಸ್ವಾತಂತ್ರ್ಯದಿಂದ ಸಂಸ್ಥೆಗಳು ಹೊರಡಹತ್ತುವವು. ರಾಜ್ಯಗಳು ಉಪಯೋಸ್ತಗಳನ್ನು ಹೊಂದುವವು. ಭಾಷಣಗಳಿಗೆ ಆರಂಭದಲ್ಲಿ ಭೌತಿಕ ಶಕ್ತಿಯು ಬೆಂಬಲವಿಲ್ಲದಿದ್ದರೂ ಜನರಲ್ಲಿ ಕಲ್ಪನೆಗಳ ಪ್ರಸಾರವಾಗಹತ್ತಿತೆಂದರೆ ಕಾರ್ಯಕ್ಕೆ ಆರಂಭವಾಗಹತ್ತುವದು. ಮೊದಲು ಅವ್ಯವಹಾರ್ಯ (ಅಶಕ್ಯ) ವೆನಿಸುತ್ತಿದ್ದವುಗಳೇ ಭಾಷಣ ಸ್ವಾತಂತ್ರ್ಯದಿಂದ ಜನರಲ್ಲಿ ಕಲ್ಪನೆಗಳು ಹರಡಿಕೊಂಡವೆಂದರೆ ಬರಬರುತ್ತ ವ್ಯವಹಾರ್ಯ (ಶಕ್ಯ) ಕೋಟಿಯಲ್ಲಿ ಬರುವವು. ಭಾಷಣಸ್ವಾತಂತ್ರ್ಯದ ಹಕ್ಕು ಕ್ಷುದ್ರವಲ್ಲ. ಅದೊಂದು ಅದ್ಭುತ ಶಕ್ತಿಯಿರುತ್ತದೆ. ಅದರಿಂದ ಕಲ್ಪನಾತೀತಗಳಾದ ಪರಿಣಾಮಗಳು ಆಗುತ್ತವೆ. ಮೊದಲಿಗೆ ಭಾಷಣದ ಪರಿಣಾಮಗಳು ಅಲ್ಪವೆನಿಸುತ್ತಿದ್ದರೂ ಕಡೆಯಲ್ಲಿ ಭಾಷಣಸ್ವಾತಂತ್ರ್ಯಕ್ಕೆ ಜಯುಸಿಗದೆ ಉಳಿಯುವದಿಲ್ಲ.

ಮುದ್ರಣಸ್ವಾತಂತ್ರ್ಯವು ಭಾಷಣ ಸ್ವಾತಂತ್ರ್ಯದ ಎರಡನೇ ರೂಪವು ಇದು ಕಾಗದಗಳೆಂಬ ಪಕ್ಕಗಳ ಸಹಾಯದಿಂದ ಊರಿಂದ ಊರಿಗೆ, ಪ್ರಾಂತದಿಂದ ಪ್ರಾಂತಕ್ಕೆ, ದೇಶದಿಂದ ದೇಶಕ್ಕೆ ಹಾರಿ ಕಲ್ಪನೆಗಳ ಪ್ರಸಾರಮಾಡುತ್ತದೆ. ಬಳಿಕ ಒಂದೇ ತರದ ಆಕಾಂಕ್ಷೆಗಳಿಂದ ಜನರು ಏಕತ್ರರಾಗಹತ್ತುವರು. ಇದರಿಂದ ಸಮಾಜಗಳಾಗುವವು. ಸಭೆಗಳಲ್ಲಿ ವ್ಯಾಖ್ಯಾತೃವು ಮಾಡಿದ ಸ್ಫೂರ್ತಿದಾಯಕ ಉಪದೇಶವನ್ನು ಕೇಳಿ ಜನರಲ್ಲಿ ಉತ್ಸಾಹವುಂಟಾಗುವದು. ಸಾಮಾನ್ಯ ಮಹತ್ವಾಕಾಂಕ್ಷೆ, ಹುರುಪು, ಕಾರ್ಯಮಾಡುವ ಇಚ್ಛೆ ಇವುಗಳಿಂದ ಜನರು ಒಕ್ಕಟ್ಟಾಗಿ ಕೆಲಸ ಮಾಡಹತ್ತುವರು. ಸಂಘಟಿತ ಸ್ವರೂಪವು ಹೆಚ್ಚಾಗುವದು- ಬಂಧುಭಾವವು ಬೆಳೆಯುತ್ತ ನಡೆಯುವದು. ಅದರಿಂದ ಆರಂಭದಲ್ಲಿ ಕಲ್ಪನಾ ಸೃಷ್ಟಿಯೊಳಗಿನವೆನಿಸುತ್ತಿದ್ದ ಸಂಗತಿಗಳು ಪ್ರತ್ಯಕ್ಷ ಕೃತಿಯಲ್ಲಿ ಬರುವವು.

ರಾಷ್ಟ್ರೀಯ ಜೀವನಕ್ಕೆ ಪೋಷಕವಾದ ಇಂಥ ಹಕ್ಕುಗಳನ್ನು ಕಳಕೊಳ್ಳಲಿಕ್ಕೆ ಜನರು ಒಪ್ಪುವದಿಲ್ಲ. ಇವುಗಳನ್ನು ಯಾರಾದರೂ ಕಸುಗೊಳ್ಳಲಿಚ್ಛಿಸಿದರೆ ಸಿಟ್ಟಾಗುವರು.

ಮನುಷ್ಯ ಕೋಟಿಯ ಉದ್ಧಾರದ ಮೂರು ಧರ್ಮತತ್ವಗಳಿರುತ್ತವೆ ಅವು —
೧. ಸ್ವಾತಂತ್ರ್ಯ; ೨. ಸಮತ್ವ; ೩. ಬಂಧುಭಾವ ಇವನ್ನು ಆಚರಣದಲ್ಲಿ ತರುವದೇ ಮಾನವ ಕುಟುಂಬದ ಧ್ಯೇಯವಾಗಿರುತ್ತದೆ ಮನುಷ್ಯನಿಗೆ ಈ ಲೋಕದಲ್ಲಿ ಮುಕ್ತಿಯನ್ನು ದೊರಕಿಸತಕ್ಕದ್ದಿರುತ್ತದೆಂದು ನಮ್ಮ ಧರ್ಮವೂ ತತ್ವಜ್ಞಾನಗಳೂ ಹೇಳುತ್ತವೆ. ಇದನ್ನು ದೊರಕಿಸುವಾಗ ಹಾದಿಯಲ್ಲಿ ಬಂದ ವಿಘ್ನಗಳನ್ನು ನಿವಾರಿಸಿ ಹಾಗೇ ಮುಂದೆ ಧ್ಯೇಯವನ್ನು ಸಾಧಿಸುವವರೆಗೆ ಸಾಗಬೇಕು. ಭಾರತೀಯರಾದ ನಾವು ಆತ್ಮಿಕಸ್ವಾತಂತ್ರ್ಯವನ್ನು ದೊರಕಿಸಿದ್ದೇವೆ. ಯುರೋಪಿಯರು ಭೌತಿಕ ಸ್ವಾತಂತ್ರ್ಯವನ್ನು ಸಂಪಾ

ದಿಸಿದ್ದಾರೆ. ಇಬ್ಬರೂ ನಮ್ಮ ನಮ್ಮ ಸ್ವಾತಂತ್ರ್ಯಗಳ ವಿನಿಮಯವನ್ನು ಮಾಡೋಣ. ಸಮತ್ವವು ಎರಡನೆಯ ತತ್ವವು. ಇದನ್ನು ಮಾನವ ಕುಟುಂಬವು ಇನ್ನೂ ಆಚರಣೆಯಲ್ಲಿ ತರದಿದ್ದರೂ ಅವರ ಧ್ಯೇಯವಾಗಿದೆ. ಎಲ್ಲ ಧರ್ಮಗಳು ಬೇರೆ ಬೇರೆ ಶಬ್ದಗಳಲ್ಲಿ ಜಗತ್ತಿಗೆ ಇದೇ ಸಂದೇಶವನ್ನು ಕಳಿಸುತ್ತವೆ. ಕ್ರಿಸ್ತೀ ಧರ್ಮವು "ನಾವೆಲ್ಲರೂ ಬಂಧುಗಳು, ದೇವರ ಮಕ್ಕಳು" ಎಂದು ಹೇಳುತ್ತದೆ. ಮುಹಮ್ಮದೀ ಧರ್ಮವು "ನಾವೆಲ್ಲರೂ ದೇವರ ಪ್ರತಿಗಳು, ದೇವರ ಸೇವಕರು ಹಾಗೂ ಅಲ್ಲಾನಿಗೆ ಎಲ್ಲವರು ಅಷ್ಟೇ" ಎಂದು ಸಾರುತ್ತದೆ. ವೈದಿಕ ಧರ್ಮವು "एकमेवाद्वितीयम् ब्रह्म" ಎಂದು ಹೇಳುತ್ತದೆ. ಮನುಷ್ಯನು ಉಚ್ಚನಿರಲಿ, ನೀಚನಿರಲಿ, ಬ್ರಾಹ್ಮಣನಿರಲಿ, ಶೂದ್ರನಿರಲಿ ಶ್ರೀಮನ್ನಾರಾಯಣನಿಗೆ ಎಲ್ಲರು ಸಮಾನರು. ಎಲ್ಲರಲ್ಲಿ ನಾರಾಯಣನ ಅಂಶದ ವಾಸವಿರುತ್ತದೆ. ಆದುದರಿಂದ ನಾವು ಎಲ್ಲರನ್ನೂ ಸಮದೃಷ್ಟಿಯಿಂದ ನೋಡಬೇಕು. "शुनिचैव श्वपाकेच पंडिताः समदर्शिन ।" ಎಂದು ಭಗವದುಕ್ತಿಯಿದೆ ಜನರು ಬದ್ಧರೂ, ಅಜ್ಞಾನಿಗಳೂ, ಆಗಿರುವವರೆಗೆ ಸ್ವಾತಂತ್ರ್ಯವು ಸಿಗಲಾರದು. ಯುರೋಪವು ರಾಜಕೀಯ ಸಮತ್ವವನ್ನು ದೊರಕಿಸಿರುತ್ತದೆ. ಆದರೆ ಈ ಕ್ಷುದ್ರವಾದ ರಾಜಕೀಯ ಸ್ವಾತಂತ್ರ್ಯದಿಂದ ಶಾಂತಿ ಸೌಖ್ಯಗಳು ಅವರಿಗೆ ಸಿಗಲೊಲ್ಲವು. ಅವರ ಈ ಕ್ಷುದ್ರ ಸ್ವಾತಂತ್ರ್ಯದಲ್ಲಿ ಸಹಜವಾದ ಬಂಧುಭಾವವಿಲ್ಲ. ಆದುದರಿಂದ ಅವರಲ್ಲಿ ಸಮಾಜ ಸಮತಾವಾದ (Socialism) ವು ಹೊರಟಿದೆ. ಇದರ ಪ್ರಸಾರವು ದಿನದಿನಕ್ಕೆ ಯುರೋಪದಲ್ಲಿ ಹೆಚ್ಚಾಗುತ್ತ ನಡೆದಿದೆ. [ಮಹರ್ಷಿ ಅರವಿಂದರು ತಮ್ಮ ದಿವ್ಯದೃಷ್ಟಿಯಿಂದ ಯುರೋಪದ ಭಾವೀ ಅವಸ್ಥೆಯ ವಿಷಯಕ್ಕೆ ಮಾಡಿದ ಭವಿಷ್ಯವು ಈಗ ನಿಜವಾಗಹತ್ತಿದೆ. ರಶಿಯಾ ಜರ್ಮನಿಗಳಲ್ಲಿ ಸಮಾಜಸಮತಾವಾದವು ಬಳೆದು ಅಲ್ಲಿಯ ಅರಸು ಮನೆತನಗಳು ಬುಡಮೇಲಾದವು "ದೇಶದಲ್ಲಿ ಬಡವರು ಶ್ರೀಮಂತರೆಂಬ ಭೇದಗಳಿರಬಾರದು, ದೇಶದೊಳಗಿನ ಕಾರಖಾನೆ, ಖನಿಜಗಳು, ಭೂಮಿ ಇತ್ಯಾದಿಗಳೆಲ್ಲ ಸಮಾಜದ ಮಾಲಕಿಯವು. ಅದರ ಮೇಲೆ ವೈಯಕ್ತಿಕ ಹಕ್ಕು ಇರಕೂಡದು. ಶ್ರೀಮಂತರಿಗೆ ತಮ್ಮಲ್ಲಿ ಹೆಚ್ಚು ದುಡ್ಡು ಸಂಗ್ರಹಿಸುವ ಹಕ್ಕು ಇಲ್ಲ. ಆ ದುಡ್ಡಿನ ಮೇಲೆ ಸಮಾಜದ ಹಕ್ಕು ಇರುತ್ತದೆ" ಎಂಬೀ ತರದ ತತ್ವಗಳ ಪ್ರಸಾರವು ಹೆಚ್ಚಾಗಿದೆ. ರಶಿಯದಲ್ಲಂತೂ ಈ ಮತದ ಪ್ರಸಾರವು ಎಲ್ಲ ಕಡೆಗಾಗಿದೆ. ಲೇನಿನ ಎಂಬವನೊಬ್ಬ ಈ ಮತದ ಪುರಸ್ಕರ್ತನು ಮುಂದಾಳಾಗಿ ಇಡೀ ರಶಿಯವನ್ನೇ ತನ್ನ ಅಧಿಕಾರದ ಕೆಳಗೆ ತಕ್ಕೊಂಡಿದ್ದಾನೆ. ಈ ಮತಗಳ ಪ್ರಸಾರವನ್ನು ಜಗತ್ತಿನ ಮೇಲೆ ಮಾಡಿ ಲೋಕಕ್ಕೆಲ್ಲ ಸ್ವಾತಂತ್ರ್ಯವನ್ನು ಕೊಡಬೇಕು, ಸಮಾಜದೊಳಗಿನ ಉಚ್ಚ ನೀಚ ಭಾವವನ್ನು ಮುರಿದು ಹಾಕಬೇಕು ಎಂದು ಲೇನಿನನು ಟೊಂಕಕಟ್ಟಿದ್ದಾನೆ. ಯುರೋಪದೊಳಗಿನ ಎಲ್ಲ ದೇಶಗಳಲ್ಲಿ ಈ ಮತಗಳು ಹರಡಿದ್ದು ಕೂಲಿಕಾರರ ಸಂಘದವರು ಇದರಲ್ಲಿ ಹೆಚ್ಚು ಮನಸ್ಸನ್ನು ಹಾಕಿದ್ದಾರೆ. ಇದರಿಂದ ಆ

ದೇಶವಲ್ಲಿ ಆಗಾಗ್ಗೆ ಕೂಲಿಕಾರರು ಕಟ್ಟುಗಳನ್ನು ಮಾಡಿ ಶ್ರೀಮಂತ ಜನರನ್ನು ಹಣ್ಣಿಗೆ ತರಲಿಕ್ಕೆ ಪ್ರಯತ್ನಿಸಹತ್ತಿದ್ದಾರೆ —ಲೇಖಕ ] ಯುರೋಪಿಯರಿಗೆ ನಾವು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಕಲಿಸುವ; ಹಾಗೂ ಅವರಿಂದ ನಾವು ರಾಜಕೀಯ ಸ್ವಾತಂತ್ರ್ಯವನ್ನು ಹೇಗೆ ದೊರಕಿಸಬೇಕೆಂಬುವದನ್ನು ಕಲಿಯುವ.

ಮಾನವಧರ್ಮ ಶಾಸ್ತ್ರದ ಮೂರನೆಯ ತತ್ವವಾದ ಬಂಧು-ಭಾವವನ್ನು ಆಚರಣದಲ್ಲಿ ತರುವದು ಕಠಿಣವಿರುತ್ತದೆ. ಆದರೆ ಮನುಷ್ಯ ಮಾತ್ರರ ಒಲವು ಮಾತ್ರ ಅದರ ಕಡೆಗೇ ಇರುತ್ತದೆ ಸಂಸಾರವು ಬಂಧು-ಭಾವದ ವಿನಾ ಸುಸೂತ್ರವಾಗಿ ಸಾಗದು. ಈ ಬಂಧು-ಭಾವವಿಲ್ಲದವನ ಬಾಳು, ಹಾಳು. ಮನುಷ್ಯನ ಒಲವು ಶಾಂತಿ ಸೌಖ್ಯಗಳನ್ನು ದೊರಕಿಸುವದರ ಕಡೆಗೆ ಇರುತ್ತದೆ; ಬಂಧು-ಭಾವದ ಪ್ರಸಾರವು ಎಲ್ಲ ಕಡೆಯಲ್ಲಿ ಆಗಲಿಕ್ಕೆ ಇದೇ ಕಾರಣವಿರುತ್ತದೆ. ಕ್ರಿಸ್ತೀ ಧರ್ಮವು ಹಬ್ಬಿದ್ದು ಈ ನಿಮಿತ್ತದಿಂದಲೇ. ಬೌದ್ಧ ಧರ್ಮವು ಭರತಖಂಡದ ತುಂಬ, ಏಶಿಯಾ ಖಂಡದಲ್ಲೆಲ್ಲ ಪಸರಿಸಿಪುದರೊಳಗಿನ ರಹಸ್ಯವು ಇದೇ ವಿಶ್ವಬಂಧುತ್ವದೊಳಗಿನ ಗುಟ್ಟು ಇದೇ ಇರುತ್ತದೆ. ಸಮಾಜಗಳಲ್ಲಿ ಬಂಧು-ಭಾವವು ವಾಸಮಾಡುತ್ತಿರುತ್ತದೆಂದೇ ನಮ್ಮ ಅಸ್ತಿತ್ವವು.

ಪ್ರಾಚೀನಕಾಲದಲ್ಲಿ ಹಿಂದುಸ್ಥಾನದಲ್ಲಿ ಎಷ್ಟೋ ತರದ ಸಂಸ್ಥೆಗಳಿದ್ದವು. ಯಾಕಂದರೆ ನಮ್ಮ ಸಮಾಜವು ಈಗಿನಕಿಂತಲೂ ಆಗ ಹೆಚ್ಚು ಸುಸಂಬಂಧವುಳ್ಳದ್ದೂ, ಬೆಳವಣಿಗೆಯನ್ನು ಹೊಂದಿದ್ದೂ ಇತ್ತು ನಮ್ಮಲ್ಲಿ ರಾಜಕೀಯ, ಧಾರ್ಮಿಕ, ಔದ್ಯೋಗಿಕ ಮತ್ತು ಶೈಕ್ಷಣಿಕ ಸಂಸ್ಥೆಗಳಿದ್ದವು. ಯುರೋಪದವರಂತೆ ಹಿಂದುಸ್ಥಾನದಲ್ಲಿ ಎಲ್ಲರು ಸಾಮಾನ್ಯ ಲಾಭದ ಸಲುವಾಗಿ ಕೂಡುತ್ತಿದ್ದರು. ಒಂದೇ ತರದ ಸಾಧ್ಯದ ಸಲುವಾಗಿ ಸಂಘಟಿತ ರೀತಿಯಿಂದ ಕಾರ್ಯಮಾಡುತ್ತಿದ್ದರು. ಆದರೆ ಪರದೇಶದವರ ಹಾವಳಿಗಳು ನಮ್ಮ ದೇಶದ ಮೇಲೆ ಆಗಹತ್ತಿದಂದಿನಿಂದ ಈ ಎಲ್ಲ ಸ್ಥಿತಿಯು ಬದಲಾಯಿತು. ಸಂಘಗಳು ನಷ್ಟವಾದವು ಆಯುಷ್ಯವು ದುಃಖಮಯವಾಗಹತ್ತಿತು. ಹಿಂದಕ್ಕೆ ನಮ್ಮ ಹಳ್ಳಿವಳ್ಳಿಗಳಲ್ಲಿ ಸಹ ಗ್ರಾಮ—ಪಂಚಾಯತಿಯ ಪದ್ಧತಿಯಿತ್ತು. ಪ್ರತಿ ಒಬ್ಬನು ಯಾವದೇ ಜಾತಿಯವನಿರಲಿ ಅದರಲ್ಲಿ ಭಾಗ ತಕ್ಕೊಳ್ಳುತ್ತಿದ್ದನು. ಮುಂಚೆ ನಮ್ಮಲ್ಲಿ ಅವಿಭಕ್ತ ಕುಟುಂಬ ಪದ್ಧತಿಯಿತ್ತು. ಅದರಿಂದ ಸಂಘ ಶಕ್ತಿಯಿಂದ ಕಾರ್ಯಮಾಡುವದು ನಮ್ಮ ಮೈಯಲ್ಲಿಂಡಿತ್ತು. ಯುರೋಪದ ಸಮಾಜಗಳ ಬೆಳವಣಿಗೆಯು ನಮ್ಮಿಂದ ತೀರ ಭಿನ್ನ ರೀತಿಯಲ್ಲಿ ಆಗಿರುತ್ತದೆ. ನಮ್ಮ ವರ್ಣ ವ್ಯವಸ್ಥೆಯು ಈಗ ಅದು ಹೀನದೆಸೆಗೆ ಬಂದಿದ್ದರೂ ಮುಂಚೆ ಉದಾತ್ತ ತತ್ವಗಳ ಅಸ್ತಿವಾರದ ಮೇಲೆ ರಚಿಸಲ್ಪಟ್ಟಿತ್ತು.

ಒಂದೇ ತರದ ಭಾವನೆ, ಒಂದೇ ಪ್ರಕಾಶದ ಒಲವು, ಒಂದೇ ರೀತಿಯ ನೈತಿಕ ಬಂಧನ ಇವುಗಳಿಂದ ಸಮಾಜಗಳು ಆಗುತ್ತಿರುತ್ತವೆ. ಇಂಥ ಸಾಮಾನ್ಯ ಧರ್ಮಗಳಿಂದ ಬದ್ಧವಾದ ಭಿನ್ನ ಭಿನ್ನ ವರ್ಣದವರು ಒಕ್ಕಟ್ಟಾಗಿದ್ದರು. ಯುರೋಪಿಯರ ದಾಳಿಗಳಿಂದ

ನಮ್ಮ ಸಮಾಜಗಳು ಮುರಿದವು. ನಮ್ಮ ಗ್ರಾಮ ಪಂಚಾಯತಿಯು ಭೂತಕಾಲದ ಒಂದು ಮಾತಾಯಿತು! ಹಳ್ಳಿಗಳೊಳಗಿನ ಸಂಘಟಿತ ಸ್ವರೂಪವು ಹಾಳಾಗಿ ಹೋಯಿತು. ಧ್ಯೇಯವು ಮರೆತ ನಂತರ ಕಾರ್ಯವು ಕಟ್ಟಾಯಿತು. ಹಳ್ಳಿಯ ಸುಖಮಯವಾದ ಆಯುಷ್ಯವು ದುಃಖಮಯವಾಯಿತು. ಶ್ರೀಮಂತಿಕೆಯು ಹೋಯಿತು. ದರಿದ್ರತನವು ಪಾಲಿಗೆ ಬಂತು. ಹಳ್ಳಿಗಳಿಗೆ ಕ್ಷಯರೋಗವು ಹತ್ತಿರುವದು. ಏಕತ್ರ ಕುಟುಂಬ ಪದ್ಧತಿಯು ನಷ್ಟವಾಗಹತ್ತಿರುವದು. ಅಣ್ಣ-ತಮ್ಮಂದಿರೊಳಗಿನ ಬಂಧು-ಭಾವವು ಇಲ್ಲದಂತಾಗಹತ್ತಿರುವದು. ಮೊದಲಿನ ಆಯುಷ್ಯಕ್ರಮಣ ಪದ್ಧತಿಯು ಮುರಿದು ಹೋದುದರಿಂದ ಮುಂಚಿನ ಸಂಘಗಳು ಹಾಳಾಗಿರುವವು.

ಇಷ್ಟು ಪೂರ್ವ ಪೀಠಿಕೆಯಾದ ಬಳಿಕ ಋಷಿವರ್ಯ ಅರವಿಂದರು ಮುಂದೆ ಹಿಂದುಸ್ಥಾನದ ಪ್ರಸ್ತುತ ಸ್ಥಿತಿಯ ಕಡೆಗೆ ಹೊರಳಿ ಅದನ್ನು ವಿವೇಚಿಸುವಾಗ ಹೇಳಿದ್ದರ ಸಾರಾಂಶವೇನೆಂದರೆ – ನಮ್ಮ ದೇಶದ ಸಮಾಜಗಳು ದಿನದಿನಕ್ಕೆ ಅವನತ ಸ್ಥಿತಿಗೆ ಬರಹತ್ತಿವೆ. ನಾವು ಅವನ್ನು ತಿದ್ದಬೇಕೆಂದು ಸುಧಾರಿಸಿ ದವರೆನಿಸಿದ ಪಾಶ್ಚಿಮಾತ್ಯರ ಅನುಕರಣಮಾಡಿ ಅವರಂಥ ಸಂಸ್ಥೆಗಳನ್ನು ಕಣ್ಣು ಮುಚ್ಚಿಕೊಂಡು ಸ್ಥಾಪಿಸಹತ್ತಿದ್ದೇವೆ. ಗತನೆಯ ಶತಮಾನದೊಳಗಿನ ನಮ್ಮ ದೇಶದ ಸ್ಥಿತಿಯು ತೀರ ಕರುಣಾಜನಕವಾಗಿತ್ತು. ದೇಶದೆದುರಿಗೆ ಒಂದು ಧ್ಯೇಯವಿರ ಲಿಲ್ಲ. ಅಥವಾ ದೇಶವನ್ನು ಉಚ್ಚಸ್ಥಿತಿಗೆ ಒಯ್ಯುವಂಥ ಅದ್ಭುತವಾದ ಉತ್ಸಾಹವಿರಲಿಲ್ಲ. ನಮ್ಮ ಮೇಲೆ ಬಂದ ಪರಚಕ್ರಗಳಿಂದ ದುಃಸ್ಥಿತಿಯುಂಟಾಗಿ ಸಮಾಜ ವ್ಯವಸ್ಥೆಯು ಮುರಿದುಹೋಗಿತ್ತು. ನಮ್ಮ ರಾಜ್ಯಕರ್ತರ ಅನುಕರಣಮಾಡಿ ಅವರಂಥ ಸಂಸ್ಥೆಗಳ ಸಹಾಯ ದಿಂದ ರಾಜಕೀಯ ಸ್ವಾತಂತ್ರ್ಯವನ್ನು ದೊರಕಿಸುವ ಅಲ್ಪ ಉದ್ದೇಶದಿಂದ ಸ್ಥಾಪಿತವಾದ ಸಂಘಗಳಿಂದ ಹೇಳಿಕೊಳ್ಳುವಂತೆ ಕಾರ್ಯವಾಗಲಿಲ್ಲ. ಆದರೂ ಬರಬರುತ್ತ ಒಂದು ಉದ್ದೇಶದಿಂದ ಸ್ಥಾಪಿತವಾದ ಸಂಘಗಳು ಅಕಲ್ಪಿತವಾಗಿ ಒಂದು ಉದಾತ್ತ ಉದ್ದೇಶವನ್ನು ಸಾಧಿಸಲಿಕ್ಕೆ ಯತ್ನಿಸಹತ್ತಿದವು. ಇಷ್ಟರಲ್ಲಿ ರಾಷ್ಟ್ರೀಯತ್ವದ ತೆರೆಯು ದೇಶದ ತುಂಬ ಹಾಯಿತು. ಅದರಿಂದ ಈ ಸಂಸ್ಥೆಗಳಲ್ಲಿ ನವಜೀವನವು ಪ್ರಾಪ್ತವಾಯಿತು. ಬರೇ ಠರಾವುಗಳನ್ನು ಪಾಸು ಮಾಡುವ ಸಭೆಗಳಾಗಿ ಈ ಸಂಸ್ಥೆಗಳು ಉಳಿಯದೆ ಪ್ರತ್ಯಕ್ಷ ಕಾರ್ಯ ಕಾರೀ ಸಂಘಗಳಾದವು. ಈ ನೂತನ ಚೈತನ್ಯದ ಉದಯವು ತರುಣ ವರ್ಗದಲ್ಲಿ ಮೊದ ಲಿಗೆ ಆಯಿತು. ಅವರು ತಮ್ಮ ಜನ್ಮಭೂಮಿಯ ಸೇವೆಗೆ ಸ್ವಯಂ ಸೇವಕರಾಗಿ ಮುಂದೆ ಬಂದರು. ರಾಷ್ಟ್ರದ ಜನರ ಕಲ್ಯಾಣ ಚಿಂತನೆಗಾಗಿ ಅವರು ಒತ್ತಟ್ಟಿಗೆ ನೆರೆಯಹತ್ತಿದರು. ಹೀಗೆ ಏಕತ್ರವಾಗಿ ವಿಚಾರಿಸಿ ಕಾರ್ಯಮಾಡುವ ಕಲ್ಪನೆಯು ಬೆಳೆಯುತ್ತ ನಡೆಯಿತು. ಇದನ್ನು ಕಂಡು ಆಂಗ್ಲೋ ಇಂಡಿಯನ್‌ರು ನಮ್ಮನ್ನು ತಿರಸ್ಕರಿಸಹತ್ತಿದರು. "ಬಂಗಾಲಿಗಳಲ್ಲಿ ಲಷ್ಕರೀ ಜನರ ಗುಣಗಳು ಇಲ್ಲ. ಅವರ ಕೆನ್ನೆಯ ಮೇಲೆ ಹೊಡೆದರೆ ಹೊಡೆ

ದಾತನಿಗೆ ಪ್ರತಿಯಾಗಿ ಒಂದು ಏಟು ಕೊಟ್ಟಾರೆಂಬುವಂತಿಲ್ಲ. ಆದುದರಿಂದ ಈ ಜನರು ಗುಲಾಮರಾಗಲಿಕ್ಕೆ ತಕ್ಕವರು. ಆದಕಾರಣ ಇವರಿಗೆ ಸ್ವರಾಜ್ಯದ ಅವಶ್ಯಕತೆ ಇಲ್ಲ.'' ಎಂದು ಪ್ರತಿಪಾದಿಸಹತ್ತಿದರು. ಇದರಿಂದ ಜನರಲ್ಲಿ ಜಾಗೃತಿಯಾಗಲಿಕ್ಕೆ ಸಹಾಯ ವಾಯಿತು.

ನಮ್ಮ ಆಂಗ್ಲೋ ಇಂಡಿಯನ್ ಬಂಧುಗಳು ಈ ತತ್ವವನ್ನು ಈಗ ಪ್ರತಿಪಾದಿಸುವದಿಲ್ಲ. ರಾಷ್ಟ್ರದ ಮೇಲಿನಂಥ ಅಪಮಾನವನ್ನು ಬಹಳ ದಿನಗಳ ವರೆಗೆ ಸಹಿಸುವದು ತಕ್ಕದ್ದಲ್ಲ. ನಮ್ಮ ತರುಣರ ಹೃದಯಸ್ಥ ಪರಬ್ರಹ್ಮನು ಜಾಗ್ರತನಾದನಂತರ ಇಂಥ ಅಪಮಾನವನ್ನು ಸಹಿಸುವದು ಅಶಕ್ಯವು. ಸಂಘಗಳು ಶಾರೀರಿಕ ಬಲವನ್ನು ವೃದ್ಧಿಪಡಿಸಿ ತಮ್ಮ ಮೇಲಿನ ಅಪವಾದವನ್ನು ಕಳೆದುಕೊಳ್ಳಲಿಕ್ಕೆ ಯತ್ನಿಸಹತ್ತಿದವು. ದಿನದಿನಕ್ಕೆ ಘನಭರಾಟೆಯು ಹೆಚ್ಚುತ್ತ ನಡೆಯಿತು. ಶಾರೀರಿಕ ಸಾಮರ್ಥ್ಯವನ್ನು ಬೆಳೆಸಿ ಆತ್ಮಸಂರಕ್ಷಣವನ್ನು ಮಾಡಿಕೊಳ್ಳಲಿಕ್ಕೆ ಕಲಿತರೆ ಅದರಲ್ಲಿ ಸಂಶಯಾಸ್ಪದವೇನೂ ಇರುವದಿಲ್ಲ. ಯುರೋಪಿಯನ್ ರಾಷ್ಟ್ರಗಳು ಶಾರೀರಿಕ ಸಾಮರ್ಥ್ಯದಿಂದಲೇ ವಿಜಯವನ್ನು ಹೊಂದಿರುತ್ತವೆ. ಇಂಥ ಈ ಅಂಗ ಸಾಮರ್ಥ್ಯವನ್ನು ಬೆಳಿಸುವದನ್ನು ಕಂಡು ಸರಕಾರದವರು ಆ ಸಂಸ್ಥೆಗಳನ್ನು ಮುರಿಯುಹತ್ತಿದರು.

ಒಂದೂ ಧರ್ಮದ ಕಲ್ಪನೆಯಂತೆ ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆ ಈ ಸಂಘಗಳಿಂದ ಅನುವು ಸಿಕ್ಕಿತು. ಸ್ವಾಮಿ ವಿವೇಕಾನಂದರು ಉಪದೇಶಿಸಿದಂತೆ ಸಮಾಜ ಸೇವೆಯ ಪವಿತ್ರಮಾರ್ಗವನ್ನು ಅನುಸರಿಸಲಿಕ್ಕೆ ಸಂಘಗಳು ಸಹಾಯ ಮಾಡಿದವು. ಸ್ವದೇಶ ಸೇವೆಯನ್ನು ಮಾಡಲಿಕ್ಕೆ, ಮಾತೃಭೂದೇವಿಯನ್ನು ಪೂಜಿಸಲಿಕ್ಕೆ, ದೇಶದೊಳಗಿನ ತರುಣರು ಒತ್ತಟ್ಟಿಗೆ ಕೂಡಹತ್ತಿ ಸಮಾಜಗಳನ್ನು ಮಾಡಹತ್ತಿದರು.

ಶ್ರೀ ಅರವಿಂದರು ಈ ರೀತಿಯಲ್ಲಿ ನಮ್ಮ ದೇಶದ ಸಂಸ್ಥೆಗಳ ಸ್ಥೂಲ ಇತಿಹಾಸವನ್ನು ಹೇಳಿದ ನಂತರ ಸರಕಾರದವರು ಅವುಗಳ ನಾಶವನ್ನು ಮಾಡಲಿಕ್ಕೆ ಹೇಗೆ ಪ್ರವೃತ್ತರಾದರೆಂಬುದನ್ನು ಬಾರಿಸಾಲದೊಳಗಿನ ವಿಶಿಷ್ಟ ಸಂಸ್ಥೆಯನ್ನು ಉದಾಹರಣವಾಗಿ ತಕ್ಕೊಂಡು ಮುಂದೆ ವಿವರಿಸುತ್ತಾರೆ. ಸರಕಾರದ ಬಲುಮೆಯ ವಿಷಯಕ್ಕೆ ಹೇಳುವಾಗ ಅವರು ಅಂದದ್ದರ ಭಾವವೇನಂದರೆ :—

ಹೀಗೆ ಸಂಘಗಳು ಆಗಹತ್ತಿದವು. ಜನರು ಪರೋಪಕಾರ ಬುದ್ಧಿಯಿಂದ ಲೋಕಸೇವೆಯನ್ನು ಮಾಡಹತ್ತಿದರು. ಸಂಸ್ಥೆಗಳು ಲೋಕಪ್ರಿಯವಾಗಹತ್ತಿದವು. ಇತ್ತ ಸರಕಾರದವರಿಗೆ ಈ ಸಂಸ್ಥೆಗಳು ದೊಂಬಿಯನ್ನೆಬ್ಬಿಸಲಿಕ್ಕೆ ಪ್ರೋತ್ಸಾಹಿಸುವವೆಂಬ ಸಂಶಯವು ಬರಹತ್ತಿತು. ಈ ಆರೋಪವು ಸುಳ್ಳೆಂದು ಸಿದ್ಧವಾದಲ್ಪಟ್ಟಿದೆ. ಆದರೂ ಸರಕಾರದವರು ಲೋಕೋಪಕಾರಿಗಳಾದ ಈ ಸಮಾಜಗಳನ್ನು ಮುರಿಯಹತ್ತಿದ್ದಾರೆ. ನಾನು ಮೊನ್ನೆ ಬಾರಿಸಾಲದಿಂದ ಬಂದೆನು. ಅಲ್ಲಿ ಸ್ವದೇಶ

ಬಾಂಧವ ಸಮಿತಿಯವರು ಜನರ ಕಷ್ಟವನ್ನು ದೂರಮಾಡಲಿಕ್ಕೆ ಹಗಲಿರುಳು ದುಡಿಯುತ್ತಿದ್ದರು. ಬಕರಗಂಜ ಜಿಲ್ಹೆಯೇ ಇವರ ಕಾರ್ಯಕ್ಷೇತ್ರವಾಗಿತ್ತು. ಅಶ್ವಿನೀಕುಮಾರ ದತ್ತರವರು [ಇವರು ಒಂದು ಶ್ರೀಮಂತ ಮನೆತನದವರು, ತಂದೆಯ ಹೆಸರಿನಿಂದ ವಿದ್ಯಾಲಯವನ್ನು ಸ್ಥಾಪಿಸಿ ಅದರ ಮುಖ್ಯಾಧ್ಯಾಪಕರಾಗಿದ್ದರು ಇವರು ಎಮ್. ಎ. ಬಿ. ಎಲ್. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವರು. ಇವರು ತಮ್ಮ ಶಿಷ್ಯಗಣದಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗ್ರತಪಡಿಸಿದರು. ಹಾಗು ಶಿಷ್ಯರಿಂದ ಅನೇಕ ತರದ ಸಾಮಾಜಿಕ ಕಾರ್ಯಗಳನ್ನು ಮಾಡಿಸುತ್ತಿದ್ದರು. ಉದಾರಸ್ವಭಾವದವರು ಬಡಬಗ್ಗರಿಗೆ ಬೇಕಾದ ಹಾಗೆ ಸಹಾಯ ಮಾಡುವವರು. ಅವರಿಂದ ಸಮಾಜದಲ್ಲಿ ಇವರ ವರ್ಚಸ್ಸು ಬಹಳವಿರುತ್ತದೆ. ಜನರೆಲ್ಲ ಇವರು ಹೇಳಿದಂತೆ ಅಕ್ಷರಶಃ ನಡಿಯುತ್ತಾರೆ] ತರುಣ ಜನರನ್ನು ಒಟ್ಟುಗೂಡಿಸಿ ನವಜೀವನದ ಮಂತ್ರೋಪದೇಶ ಮಾಡಿದರು. ತರುಣರು ಕುಲಗೋತ್ರಗಳ ಭೇದವನ್ನು ಲಕ್ಷಿಸದೆ ಎಲ್ಲ ತರದ ಸಹಾಯವನ್ನು ಮಾಡಿದರು. ಅಶಕ್ತರಿಗೆ ಕೈಕೊಟ್ಟರು. ರೋಗಿಗೆ ಔಷಧ ಕೊಟ್ಟರು. ಜೋನಿಗರಾದ ಅಂತ್ಯಜರನ್ನು ಎತ್ತಿ ದವಾಖಾನೆಗೆ ಒಯ್ದರು. ಮುಸಲ್ಮಾನರನ್ನು ಉಪಚರಿಸಿದರು. ಹೀಗೆ ತಮ್ಮ ಜೀವದ ಪರಿವೆಯಿಲ್ಲದ ಪ್ಲೇಗದಂಥ ಸಾಂಕರೋಗದ ಕಾಲದಲ್ಲಿ ಜನರ ಸೇವೆಯನ್ನು ಮಾಡಿದರು. ಬಂಧುವು ಬಂಧುವಿಗೆ ಸಹಾಯ ಮಾಡುವಂತೆ ಅಂತಃಕರಣಪೂರ್ವಕವಾಗಿ ರೋಗಿಗಳ ಆರೈಕೆ ಮಾಡಿದರು. ಹಾಗು ಅನೇಕರನ್ನು ಮೃತ್ಯುವಿನ ಬಾಯಿಂದ ಉಳಿಸಿದರು. ಈ ಅಪರಾಧಕ್ಕಾಗಿ ಪರೋಪಕಾರಿಗಳೂ ಲೋಕಸೇವಕರೂ ಆದ ಅಶ್ವಿನೀ ಕುಮಾರದತ್ತರವರು ಗಡಿಪಾಟಿಸಲ್ಪಟ್ಟರು! ಆದರೆ ಅವರ ಶಿಷ್ಯವರ್ಗವು— ಅಶ್ವಿನೀ ಕುಮಾರರಿಂದ ನವಜೀವನದ ಉಪದೇಶ ಸಿಕ್ಕ ಶಿಷ್ಯವರ್ಗವು ತಮ್ಮ ಗುರುಗಳ ಅನುಕರಣವನ್ನೇ ಮಾಡಿತು. ಅಶ್ವಿನೀ ಕುಮಾರರು ಕೇವಲ ಯಾಂತ್ರಿಕ ಶಿಕ್ಷಣ ಕೊಡುವದರಲ್ಲಿ ತೃಪ್ತಿಪಡದೆ ವಿದ್ಯಾರ್ಥಿಗಳು ಶೀಲವಂತರಾಗಬೇಕೆಂದೂ ರಾಷ್ಟ್ರದ ಒಂದು ಜೀವಂತ ಘಟಕವಾಗಬೇಕೆಂದೂ ಇಚ್ಛಿಸಿ ಅದಕ್ಕೆ ತಕ್ಕ ಪದ್ಧತಿಯಿಂದ ಕಲಿಸಹತ್ತಿದರು.

ಸಾಮ್ರಾಜ್ಯದ ಸುರಕ್ಷಿತತನಕ್ಕೆ ಭಂಗ ತರುವ ಇಂಥ ಯಾವ ಕೃತ್ಯವನ್ನು ಈ ಸ್ವದೇಶ ಬಾಂಧವ ಸಮಿತಿಯವರು ಕೈಕೊಂಡರೆಂದು ಅವರ ಮೇಲೆ ಸರಕಾರದವರು ಸಿಟ್ಟಾದರು? ಈ ಸಮಿತಿಯವರು ಆರಂಭಿಸಿದ ಮೊದಲನೆಯ ಕೆಲಸವೆಂದರೆ, ಜನರ ದುಃಖವಿಮೋಚನದ ಕಾರ್ಯವು. ಬಕರಗಂಜ ಜಿಲ್ಹೆಯಲ್ಲಿ ಒಬ್ಬ ರೋಗಿಯೂ, ಒಬ್ಬ ದುಃಖಿತನೂ ಉಳಿಯಬಾರದಂತೆ ಪ್ರಯತ್ನಪಡುವದೇ ಈ ತರುಣರ ಸಂಘದ ಧ್ಯೇಯವಾಗಿತ್ತು. ಈ ಸಮಿತಿಯವರು ಮಾಡಿದ ಮೊದಲನೆಯ ಅಪರಾಧವಿದು

ಇವರ ಮೇಲಿನ ಎರಡನೆಯ ಆರೋಪವೇನೆಂದರೆ ಈ ಸಮಿತಿಯವರು ಬರಗಾಲದಲ್ಲಿ ಮನೆಮನೆಗೆ ತಿರುಗಿ ಉಪವಾಸದಿಂದ ಬಳಲಿದ ಜನರಿಗೆ ಸಹಾಯ ಮಾಡುತ್ತಿದ್ದುದು.

ಬರಗಾಲವು ಎಲ್ಲ ಕಡೆಗೆ ತನ್ನ ಭಯಂಕರವಾದ ಸ್ವರೂಪವನ್ನು ತೋರಿಸುತ್ತಿತ್ತು ಮನೆತನಸ್ಥರು ಪರರ ಹತ್ತರ ಸಹಾಯದ ಯಾಚನೆ ಮಾಡಲಿಕ್ಕೆ ನಾಚುತ್ತಿದ್ದರು. ಬಾರಿಸಾಲದ ತರುಣರು ಇಂಥ ಸ್ಥಳಗಳನ್ನು ಹುಡುಕಿ ಆ ಜನರ ಮಾನಕ್ಕೆ ದಕ್ಕೆ ಬರದಂತೆ ಗುಪ್ತವಾಗಿ ಹೋಗಿ ಸಹಾಯ ಮಾಡುತ್ತಿದ್ದರು. ಈ ರೀತಿಯಲ್ಲಿ ಜನರಿಗೆ ಸಹಾಯ ಮಾಡಿ ಗಂಡಸರನ್ನೂ ಹೆಂಗಸರನ್ನೂ ಬರಗಾಲದ ಘೋರವಾದ ಆಪತ್ತಿನಿಂದ ಉಳಿಸಿದರು. ಸ್ವದೇಶಬಾಂಧವ ಸಮಿತಿಯವರು ಮಾಡಿದ ಎರಡನೆಯ ಗುನ್ಹೆ ಇದು.

ಬಂಗಾಲದ ಸಮಾಜದಲ್ಲಿ ಎಷ್ಟೋ ಒಳ್ಳೇ ತೊಡಕಿನ ಮಾತುಗಳ ಸಲುವಾಗಿ ಬಡಿದಾಟಗಳಿವೆ. ಅಣ್ಣತಮ್ಮಂದಿರ ನಡುವೆ ಬಡಿದಾಟ, ತಾಯಿಮಕ್ಕಳ ನಡುವೆ ಸಹ ಕಲಹ! ಹೀಗಾಗಿ ಸಮಾಜದಲ್ಲಿ ದ್ವೇಷವು ಬೆಳೆಯಹತ್ತಿತು ಇದರಿಂದ ಆತ್ಮನಾಶವಾಗುವದು ಸ್ವಾಭಾವಿಕವಿದೆ. ಆದರೆ ಹೀಗಾಗಬಾರದೆಂದು ಸ್ವದೇಶಬಾಂಧವ ಸಮಿತಿಯವರು ಜನರಿಗೆ ಉಪದೇಶ ಮಾಡಹತ್ತಿದರು "ಸರಕಾರಿ ಕೋರ್ಟುಗಳಿಗೆ ತಮ್ಮ ತಮ್ಮೊಳಗಿನ ನ್ಯಾಯಗಳನ್ನು ಒಯ್ಯಬೇಡಿರಿ. ನಾವು ಪಂಚರ ಕಡೆಯಿಂದ ನಮ್ಮ ನ್ಯಾಯಗಳನ್ನು ತೀರಿಸಿಕೊಳ್ಳುವ. ಮೊದಲು ಪಂಚರ ಕಡೆಗೆ ಹೋಗಿರಿ. ಅಲ್ಲಿ ನಿಮಗೆ ನ್ಯಾಯವು ಸಿಗದಿದ್ದರೆ, ಬೇಕಾದರೆ ಕೋರ್ಟಿಗೆ ಹೋಗಿರಿ." ಈ ಉಪದೇಶದ ಇ. ಪರಿಣಾಮವು ಜನರ ಮೇಲೆ ಆಗಿ ನೂರಾರು ಬಡಿದಾಟಗಳು ನೊಂದಿಸಲ್ಪಟ್ಟ; ಸಮಾಜದೊಳಗಿನ ದ್ವೇಷವು ಕಡಿಮೆಯಾಗಹತ್ತಿ ಶಾಂತಿಸೌಖ್ಯಗಳು ಮತ್ತೆ ತಲೆದೋರ ಹತ್ತಿದವು. ಇದು ಈ ಸಮಿತಿಯವರಿಂದಾದ ಮೂರನೇ ದೋಷವು

ಈ ಸಮಿತಿಯ ಕಟ್ಟಕಡೆಯ ಹಾಗೂ ಮಹತ್ವದ ದೋಷವೆಂದರೆ ಅವರು ಸ್ವದೇಶಿ ವಸ್ತುಗಳ ಪ್ರಸಾರದ ವಿಷಯಕ್ಕೆ ಮಾಡಿದ ಪ್ರಯತ್ನವು ಬಾಲ್ಯಾವಸ್ಥೆಯೊಳಗಿರುವ ನಮ್ಮ ದೇಶದ ಕಾರಖಾನೆಗಳು ಬೆಳವಣಿಗೆಯನ್ನು ಹೊಂದಬೇಕಾದರೆ ಸ್ವದೇಶಿವಸ್ತುಗಳನ್ನು ಉಪಯೋಗಿಸುವದೊಂದೇ ಉಪಾಯವು. ಪರದೇಶದ ವಸ್ತುಗಳಿಗಿಂತ ತನ್ನ ದೇಶದ ವಸ್ತುಗಳು ಹೀನತರದವಿದ್ದರೂ ಅವುಗಳನ್ನು ಮೆಚ್ಚಿ ತಕ್ಕೊಳ್ಳಲಿಕ್ಕೇಬೇಕು. ಸ್ವದೇಶ ಬಾಂಧವ ಸಮಿತಿಯವರು, ದೇಶಾಭಿಮಾನವನ್ನು ಹುಟ್ಟಿಸಿ, ಸತತವಾಗಿ ಜನರ ಬೆನ್ನುಹತ್ತಿ, ದೇಶದ ಲಾಭವನ್ನು ತೋರಿಸಿಕೊಟ್ಟು, ಹೀಗೆ ಹಲವು ಉಪಾಯಗಳಿಂ ಜನರಲ್ಲಿ ಸ್ವದೇಶಿ ಮಾಲಿನ ಪ್ರಸಾರಮಾಡಹತ್ತಿದರು. ಇಡೀ ಬಂಗಾಲದಲ್ಲಿ ಬಾರಿಸಾಲದಂತೆ ಒಂದು ಭಾಗದಲ್ಲಿ ಸಹ ವ್ಯವಸ್ಥಿತ ಪದ್ಧತಿಯಿಂದಲೂ ಶಾಂತತನದಿಂದಲೂ ಸ್ವದೇಶಿ ಚಳವಳಿಯ ಪ್ರಸಾರವಾಗಲಿಲ್ಲ. ಅಶ್ವಿನಿಕುಮಾರದತ್ತರಂಥವರು ಪ್ರತಿಯೊಂದು ಭಾಗಕ್ಕೆ ಎಲ್ಲಿಂದ ಸಿಗಬೇಕು! ಹೀಗೆ ಬಹಿಷ್ಕಾರದ ಚಳವಳಿಯು ಈ ಸಮಿತಿಯವರಿಂದ ಎಲ್ಲ ಕಡೆಗೆ ಹಬ್ಬಿತು.

ಸರಕಾರದವರಿಗೆ ಈ ಸಮಿತಿಯನ್ನು ಮುರಿಯಲಿಕ್ಕೆ ಮತ್ತೆ ಒಂದು ಕಾರಣ ವುಂಟಾಯಿತು. ಈ ಸಮಿತಿಯೊಳಗಿನ ತರುಣರು ಆತ್ಮರಕ್ಷಣೆಗಾಗಿ ಬಡಿಗೆಗಳನ್ನು

ಉಪಯೋಗಿಸುತ್ತಿದ್ದರು. ಇದರ ಉಪಯೋಗವನ್ನು ಮಾಡಿಕೊಳ್ಳುವ ಪದ್ಧತಿಯು ಬಹಿರಂಗವಾಗಿ ಎಲ್ಲರಿಗೆ ಗೊತ್ತಾಗುವಂತೆ ಕಲಿಸಲ್ಪಡುತ್ತಿತ್ತು, ಕಲ್ಪನಾಚತುರರಾದ ಪೋಲಿಸರಿಗೆ ಈ ತರುಣರ ಹತ್ತರ ಬಾಂಬುಗಳ ಸಂಶಯವು ಬರಹತ್ತಿತು ಪ್ರತಿಭಾಶಾಲಿಗಳಾದ ಪೋಲಿಸರು ಕೋಲುಗಳೇ ಬಾಂಬುಗಳ ಉತ್ಪತ್ತಿಗೆ ಕಾರಣವೆಂದು ಸಿದ್ಧ ಮಾಡಲಿಕ್ಕೆ ಹತ್ತಿದರು. ದರೋಡೆಯಾಗುವ ಸ್ಥಳದಲ್ಲಿ ಮೊದಲು ಪೋಲಿಸರು ಇರುವಂತೆಯಿಲ್ಲ. ಆದರೆ ಅದು ಆದನಂತರ ಅಲ್ಲಿ ಬಂದು ಈ ಸಮಿತಿಯ ತರುಣರ ಮೇಲೆ ಸಂಶಯ ತಕ್ಕೊಳ್ಳುವದು ಇವರ ಪ್ರವೃತ್ತಿಯಿತ್ತು. "ಬಡಿಗೆಗಳು ಬಾಂಬುಗಳನ್ನು ಹುಟ್ಟಿಸುತ್ತವೆ. ಬಾಂಬುಗಳು ದರೋಡೆಗಳಿಗೆ ಕಾರಣವಾಗುವವು" ಎಂದು ಇವರು ತರ್ಕಿಸುವರು' ದರೋಡೆಯಾದ ಕೂಡಲೆ ಅದರ ಸಮೀಪದಲ್ಲಿರುವ ಸಮಿತಿಯ ತರುಣರನ್ನು—ಅವರಿಗೆ ೧೨ ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾಗಿದ್ದರೆ ತೀರಿತು—ಹಿಡಿಯುವರು. ಕೆಲವು ದಿನ ಸೆರೆಯಲ್ಲಿಡುವರು ಆರೋಪವನ್ನು ಸಿದ್ಧಮಾಡಲಿಕ್ಕೆ ಸಾಕಷ್ಟು ಪುರಾವೆಯು ದೊರೆಯದಾಗುತ್ತಲೆ ಅವರನ್ನು ಬಿಟ್ಟು ಬಿಡುವರು. ಪೋಲಿಸರು ಇಷ್ಟಕ್ಕೆ ಧೈರ್ಯಗೆಡದೆ (ನಾಚಿಕೊಳ್ಳದೆ) ಮತ್ತೆ ತಮ್ಮ ಕಾರ್ಯಕ್ರಮವನ್ನು ಹಾಗೇ ನಡಿಸುವರು ಒಬ್ಬನನ್ನು ಬಿಟ್ಟರೆ ಮತ್ತೊಬ್ಬನನ್ನು ಹಿಡಿಯುವರು. ಈ ರೀತಿಯಾಗಿ ಪುರಾವೆಯು ಸಿಗುವದಿಲ್ಲವೆಂದು ಮನವರಿಕೆಯಾಗುವವರೆಗೆ ತಮ್ಮ ಕೆಲಸವನ್ನು ಮುಂದೆ ನಡಿಸುವರು. ಕೆಲವು ಸಾರೆ ಸಭ್ಯಗೃಹಸ್ಥರನ್ನು ಮತ್ತೆ ಕೆಲವುಸಾರೆ ತರುಣರನ್ನು ಹಿಡಿದು ಕೋರ್ಟಿನಮುಂದೆ ತರುವರು ಆದರೆ ನ್ಯಾಯಾಧೀಶರಿಗೆ ತಕ್ಕಷ್ಟು ಪುರಾವೆಯಿಲ್ಲದ್ದರಿಂದ ಆರೋಪಿಗಳನ್ನು ಮುಕ್ತ ಮಾಡಬೇಕಾಗುವದು!

ಹಳ್ಳಿಹಳ್ಳಿಗಳಲ್ಲಿ ಪ್ರಕೃತಿಯಿಂದ ಧಷ್ಟಪುಷ್ಟನಾದವನನ್ನು ಕಾಣುತ್ತಲೆ ಪೋಲಿಸರು ಬದಮಾಷಲಿಸ್ಟಿಗೆ ದಾಖಲ ಮಾಡಿಕೊಳ್ಳುವರು! ದೇಶದೊಳಗಿನ ಜನರು ಸಶಕ್ತರಾಗಬೇಕೆಂಬ ಹೇತುವಿನಿಂದ ಸಮಿತಿಯು ತರುಣರಿಗೆ ಕೋಲುಗಳ ಉಪಯೋಗವನ್ನು ಕಲಿಸಹತ್ತಿತು. ಪೋಲಿಸರು ಅವರ ಹೇತುವಿನ ವಿಪರ್ಯಾಸವನ್ನು ಮಾಡಹತ್ತಿದರು "ಯಾವಪಕ್ಷದಲ್ಲಿ ಸಮಿತಿಗಳು ಕೋಲುಗಳ ಆಟಗಳಿಗೆ ಉತ್ತೇಜನ ಕೊಡುವವೋ ಆ ಪಕ್ಷದಲ್ಲಿ ಸಮಿತಿಗಳು ದೊಂಬಿಗೆ ಉಬ್ಬಿಸುತ್ತಿರಲಿಕ್ಕೇಬೇಕು. ಬಾಂಬುಗಳ ಕಾರಖಾನೆ ಇರಲಿಕ್ಕೆ ಬೇಕು" ಪೋಲೀಸರ ಈವಿಚಾರ ಪದ್ಧತಿಯು ಸರಕಾರಕ್ಕೆ ಮಾನ್ಯವಾಯಿತು! ಈ ತತ್ವದ ಪ್ರಕಾರ ಕೆಲವು ತರುಣರನ್ನು ಸೆರೆಹಿಡಿದರು. ಇಂಥ ಜನರು ಶಿಕ್ಷಿಸಲ್ಪಡಬೇಕೆಂದು ಸರಕಾರದ ಅಂತಸ್ಥ ಆಜ್ಞೆಯಿತ್ತು. ಆದರೆ ಹಾಯಕೋರ್ಟುಗಳ ಜಜ್ಜರಿಗೆ ಪುರಾವೆ, ಕಾಯಿದೆಗಳ ಅಲ್ಪಸ್ವಲ್ಪ ಕಲ್ಪನೆಯಾದರೂ ಇರುವದರಿಂದ ಪೋಲಿಸರ ಇಚ್ಛೆಯಂತೆ ಪ್ರತಿಯೊಬ್ಬರಿಗೆ ಶಿಕ್ಷೆಗಳಾಗಲಿಲ್ಲ

ಸ್ವದೇಶಬಾಂಧವ ಸಮಿತಿಯವರು ಮೇಲೆ ಹೇಳಿದ ರೀತಿಯಲ್ಲಿ ರಾಷ್ಟ್ರಕಾರ್ಯವನ್ನು ಮಾಡಹತ್ತಿದರು, ಹೀಗೆ ಕಾಯಿದೆಶೀರ ರೀತಿಯಿಂದ ನಡಿಸಲ್ಪಟ್ಟ ಸಂಸ್ಥೆಗಳು ಮುರಿಯ

ಲ್ಪಟ್ಟವು. ಇವುಗಳನ್ನು ಇರಗೊಡುವದು ತರವಲ್ಲವೆಂದು ಮುರಿದರಲ್ಲದೆ, ಈ ಸಂಸ್ಥೆಗಳು ದೋಷಿಯೆಂದಲ್ಲ! ಕಾಲವು ಬದಲಾದಂತೆ ರಾಜ್ಯಪದ್ಧತಿಯಲ್ಲಿ ಹೆಚ್ಚು ಕಡಿಮೆಯಾಗಬೇಕಿದ್ದರೆ ಹೀಗಾಗತಕ್ಕದ್ದು ಸ್ವಾಭಾವಿಕವಿದೆ. ಅಧಿಕಾರಿಗಳು ಸಮಾಜದ ಹಕ್ಕುಗಳನ್ನು ಸಂಶಯದ ದೃಷ್ಟಿಯಿಂದ ನೋಡಹತ್ತಿದರು. ಭಾಷಾಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯಗಳನ್ನು ಹರಣಮಾಡಹತ್ತಿದರು. ಜನರಲ್ಲಿ ಸದ್ಗುಣಗಳು ಬೆಳೆದು ಸ್ವಾವಲಂಬನದ ಗುಣವು ಬೆಳೆದರೆ ರಾಷ್ಟ್ರದಲ್ಲಿ ಜಾಗೃತಿಯಾಗುವದೆಂಬ ಭೀತಿಯಿಂದ ಅಧಿಕಾರಿಗಳು ಸಮಾಜದ ಹಕ್ಕುಗಳನ್ನು ನಷ್ಟಮಾಡಿದರು. ಆದರೆ ಇದರಲ್ಲಿ ಅವರಿಗೆ ಯಶಸ್ಸು ಸಿಗಲಿಲ್ಲ. ಪ್ರೆಸ್ಸುಗಳು ಹೆಸರಿಗೆ ಮಾತ್ರ ಸ್ವತಂತ್ರವಾಗಿವೆ. ತಲೆಯ ಮೇಲೆ ಪ್ರೆಸ್ಸ ಆಕ್ಟಿನ ಬಿಚ್ಚುಗತ್ತಿಯು ಜೋತಾಡುತ್ತಲಿದೆ. ಅದರಲ್ಲಿ ಸ್ವಾತಂತ್ರ್ಯದ ಅಲ್ಪಾಂಶವಾದರೂ ಇಲ್ಲ. ರಾಜದ್ರೋಹದ ಸುಂದರವಾದ ಕಟ್ಟಳೆಯಿದೆ. ಅದರ ಅನಿಶ್ಚಿತ ಸ್ವರೂಪದೊಳಗಿನ ಶಬ್ದಜಾಲದೊಳಗೆ ಸಿಗದ ಮನುಷ್ಯನೇ ಇಲ್ಲ. ಮ್ಯಾಜಿಸ್ಟ್ರೇಟನಿಗೆ ಮನಸ್ಸಿಗೆ ಬಂದರೆ ಬೇಕಾದವರನ್ನು ಬೇಕಾದಾಗ ಹಿಡಿಯಬಹುದು. ಆತನ ಇಚ್ಛೆಗೆ ಬರುತ್ತಲೆ ಬೇಕಾದ ಒಂದು ಲೇಖವು ರಾಜದ್ರೋಹಿಯದಾಗಬಹುದು. ಅಧಿಕಾರಿಯು ಇಚ್ಛೆಗೆ ಬಂದಾಗ ತನ್ನ ಲೆಕ್ಕಣಿಕೆಯ ಗೀಟಿನೊಂದಿಗೆ ಸಮಾಜಗಳ ಹಕ್ಕುಗಳನ್ನು ನಷ್ಟಪಡಿಸಬಹುದು. ಬ್ರಿಟಿಶಜನರ ಪ್ರವೃತ್ತಿಯು ಸ್ವಭಾವತಃ ಸ್ವಾತಂತ್ರ್ಯದ ಕಡೆಗೆ ಇರುತ್ತದೆ. ಆದುದರಿಂದ ಅವರಿಂದ ಇಲ್ಲಿ ಎಷ್ಟೊಂದು ಜೋರಿನಿಂದ ಜುಲುಮೆಯನ್ನು ಮಾಡಲಿಕ್ಕೆ ಆಗಲೊಲ್ಲದಾಗಿದೆ. ಆದರೆ ಆ ಕಾಲವೂ ಬರಬಹುದು ಇಂಥ ಪರಿಸ್ಥಿತಿಯಲ್ಲಿ ನಾವು ಮಾಡತಕ್ಕದ್ದೇನು? ಕೇವಲ ಸಂಶಯದ ಮೇಲೆ ನಮ್ಮನ್ನು ಹಿಡಿಯಬಹುದು; ಪೀಡಿಸಬಹುದು; ತಲೆಯಮೇಲೆ ಜೋತಾಡುತ್ತಿರುವ ಪ್ರೆಸಆಕ್ಟಿನ ಬಿಚ್ಚುಗತ್ತಿಯು ಕೆಳಕೆಳಗೆ ಬರಬಹುದು. ನಮ್ಮ ಸಂಸ್ಥೆಗಳು ಬೇಕಾದಾಗ ದೋಷಿಗಳೆಂದೂ ನಿಯಮಬಾಹ್ಯಗಳೆಂದೂ ಪ್ರಕಟಿಸಲ್ಪಡಬಹುದು. ಆದರೆ ಬೇಕಾದಂಥ ಕಾಯಿದೆಗಳಾಗಲಿ, ಕಠಿಣ ಪ್ರಸಂಗಗಳು ಬರಲಿ ನಮ್ಮ ಮಾರ್ಗದ ಆಕ್ರಮಣವನ್ನು ನಾವು ಮುಂದೆ ಹಾಗೇ ಮಾಡಲಿಕ್ಕೆಬೇಕು. ಇಂದಿಗಿಂತಲೂ ನಾಳಿನ ಪರಿಸ್ಥಿತಿಯು ಹೆಚ್ಚು ಕಠಿಣವಾಗಬಹುದು. ಆದರೆ ನಮ್ಮ ಕಾರ್ಯವನ್ನು ನಾವು ನಿಲ್ಲಿಸಕೂಡದು. ನಮ್ಮ ದೇಶಭಕ್ತಿಯ ಮೇಲೆ ಬೇಕಾದಂಥ ಆರೋಪಗಳು ಮಾಡಲ್ಪಡಲಿ ಎಂಥ ಗಂಡಾಂತರಗಳಿಗೆ ಎದುರಾಗುವ ಪ್ರಸಂಗವು ಬರಲಿ ನಾವು ನಮ್ಮ ಕರ್ತವ್ಯಕರ್ಮವನ್ನು ಮಾಡಲಿಕ್ಕೆಬೇಕು. ಮುಂದೆ ಸಾಗಲಿಕ್ಕೆಬೇಕು.

ಸಮಿತಿಗಳೆಂದರೇನು? ಸಮಿತಿಗಳು ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿಗಳಿಂದ ಆಗುತ್ತವೆಂತಲ್ಲ. ಅದಕ್ಕೆ ಕೂಡಲಿಕ್ಕೆ ಒಂದು ನಿಶ್ಚಿತಸ್ಥಳವೂ ಬೇಕೆಂತಲ್ಲ.

ಸಮಿತಿಯೆಂದರೆ ಒಕ್ಕಟ್ಟು, ಸಮಿತಿಯೆಂದರೆ ಬಂಧುಭಾವ, ಎಲ್ಲಿ ಸ್ವಾರ್ಥ ತ್ಯಾಗ, ನಿಸ್ವಾರ್ಥತನದ ಕಾರ್ಯ, ಚೈತನ್ಯಗಳಿರುವವ್ರೋ ಅಲ್ಲಿ ಸಂಘಗಳಾಗುತ್ತವೆ. ಒಬ್ಬ ಮನುಷ್ಯನಿದ್ದರೂ ಕಾರ್ಯಕ್ಕೆ ಆರಂಭವಾಗುವದು. ಕಾರ್ಯ ಮಾಡಲಿಕ್ಕೆ ಇಂಥ ಸಾಧನಗಳೇ ಬೇಕೆಂದು ಅದು ಅಡಗಾಣಿಸಿಕೊಂಡು ಕೂಡ್ರುವದಿಲ್ಲ. ಒಂದೇತರದ ಧ್ಯೇಯದಿಂದ ಪ್ರೇರಿತವಾದ ಅಂತಃಕರಣಗಳು ಒಂದರ ಸಮೀಪಕ್ಕೊಂದು ಬಂದರೆ ಸಮಿತಿಗಳಾಗುವವು. ಬಂಧು-ಭಾವದಿಂದ ಎಲ್ಲವರೂ ಕೈಯಲ್ಲಿ ಕೈಹಾಕಿ ಕಾರ್ಯಕ್ಕೆ ಹತ್ತುತ್ತಿದ್ದಲ್ಲಿ ಸಂಘಗಳಾಗುವವು. ಈ ರೀತಿಯಲ್ಲಿ ನಮ್ಮಲ್ಲಿ ನಮ್ಮ ಮಾತೃಭೂಮಿಯ ವಿಷಯಕ್ಕೆ ಇಡೀ ದೇಶದಲ್ಲಿ ಪ್ರೇಮವುಂಟಾದರೆ ದೊಡ್ಡದೊಂದು ಸಂಘವಾಗುವದು. ಈ ಸಂಘಗಳು ಯುರೋಪಿಯರಂತೆ ಸ್ವಾರ್ಥದ ಆಶೆಯಿಂದಾಗಿರದೆ ಜನ್ಮಭೂಮಿಯ ಮೇಲಿನ ನಿಸ್ವಾರ್ಥ ಪ್ರೇಮದಿಂದ ಆಗುವವು.

ಇಂಥ ಸಂಘಗಳನ್ನು ಮಾಡಿರಿ, ಒಕ್ಕಟ್ಟಾಗಿರಿ, ನಿಮ್ಮ ಸ್ವಜನಸೇವೆಯಲ್ಲಿ ಪರಮಾತ್ಮನ ಸೇವೆಯ ಸುಖವನ್ನು ಅನುಭವಿಸಿರಿ. ಕೇವಲ ಸ್ವಾರ್ಥದಿಂದ ಪ್ರೇರಿತರಾಗಿ ಕುಳ್ಳಿರಬೇಡಿರಿ. ಉದಾತ್ತ ಹೇತುವಿರಲಿ. ನೀವೆಲ್ಲರೂ ಒಂದು. ನೀವು ಬಂಧುಗಳಿರುವಿರಿ. ನಿಮ್ಮ ಮಾತೃಭೂಮಿಯ ಸಲುವಾಗಿ ಕೂಡಿರಿ.

ಸಂಘ ಶಕ್ತಿಃ ಕಲೌಯುಗ ಇದು ಕಲಿಯುಗದ ಧರ್ಮವಾಗಿದೆ. ಸಮಾಜಕಾರ್ಯವನ್ನು ಪ್ರೀತಿಸಲಿಕ್ಕೆ ಬಂಗಾಲಿಗಳು ಕಲಿತಿದ್ದಾರೆ. ಹೀಗೆ ಮಾತೃಭೂಮಿಯ ಸೇವೆ ಮಾಡುವದರಿಂದ ನೀವು (ಬಂಗಾಲಿಗಳು) ಒಂದು ದೊಡ್ಡ ಸಂಸ್ಥೆಯನ್ನು ನಿರ್ಮಾಣ ಮಾಡುತ್ತಲಿದ್ದೀರಿ. ದೇಶದ ಎಲ್ಲ ಮುಖಂಡರಲ್ಲಿ ಅಗ್ನಿಸೀಕುಮಾರದತ್ತರ ತೇಜವು ಸ್ವಲ್ಪವಾದ್ದಾಗಾದರೂ ಪ್ರವೇಶಿಸಿತೆಂದರೆ ಇಡೀದೇಶವೇ ತಾನೆ ಒಂದು ಬ್ರಹ್ಮಾಂಡದ ಸಮಿತಿಯಾಗುವದು "ಒಕ್ಕಟ್ಟಾಗಿರಿ ಸ್ವತಂತ್ರರಾಗಿರಿ, ಒಂದಾಗಿರಿ, ಉತ್ಕರ್ಷಗಳಾಗಿರಿ." ಎಂದು ಭಾರತೀಯರಿಗೆ ದೇವರ ಆಜ್ಞೆಯಿರುತ್ತದೆ.

* * *

ಅರವಿಂದ ಯೋಗಿಗಳು ತುರುಂಗದೊಳಗಿಂದ ಬಂದ ಬಳಿಕ ಇಡೀ ಭರತಖಂಡದ ಮುಖಂಡತನದ ಚುಕ್ಕಾಣಿಯು ಅವರ ಕೈಯಲ್ಲಿ ಬಂದಿತ್ತಷ್ಟೇ. ಆ ಕಾಲಕ್ಕೆ ಅವರು ಎಲ್ಲ ದೇಶಕ್ಕೆ ಉದ್ದೇಶಿಸಿ ತೆಗೆದ ಆಜ್ಞಾಪತ್ರದ ಸಾರಾಂಶವನ್ನು ಕೆಳಗೆ ಕೊಟ್ಟಿದೆ.

ನಮಗೆ ರಾಷ್ಟ್ರವನ್ನು ಪೂರ್ಣಾವಸ್ಥೆಗೆ ವೈಯ್ಯುವದಿರುತ್ತದೆ. ಈ ಮಾರ್ಗವನ್ನು ಕ್ರಮಿಸುತ್ತಿರಲು ಇದಕ್ಕಿಂತ ಕಡಿಮೆ ತರದ ಸ್ವರಾಜ್ಯವು ನಮಗೆ ಸಾಕು. ಜಾತಿ ಮತ್ತು ಧರ್ಮಗಳಿಗಾಗಿ ಕೌನ್ಸಿಲಿನಲ್ಲಿ ಬೇರೆ ಸ್ಥಳಗಳನ್ನು ಕಾಯ್ದಿಡುವ ಅಸಡ್ಡಾಳವಾದ ಪದ್ಧತಿಯು ನಮಗೆ ಬೇಡ ಖಜಾನೆಯ ಮೇಲೆ ನಮ್ಮ ಅಧಿಕಾರವು ನಡೆಯಬೇಕು. ಅಧಿಕಾರ ನಡಿಸುವ ನೌಕರರ ಮೇಲೆ ನಮ್ಮ ಅಧಿಕಾರವು ನಡೆಯುತ್ತಿರಲಿಕ್ಕೇ ಬೇಕು. ಈ ಅಧಿಕಾರ

ಗಳು ಸಿಗುವವರೆಗೆ ನಾವು ಸರಕಾರದ ಸಂಗಡ ಸಹಕಾರವನ್ನು ಎಂದೂ ಮಾಡ ಕೂಡದು. ಕಾಲ ಪರಿಸ್ಥಿತಿಯನ್ನು ನೋಡಿಕೊಂಡು ಇದರ ಪ್ರಯೋಗವನ್ನು ಹೆಚ್ಚು ಕಡಿಮೆ ತೀಕ್ಷ್ಣ ರೀತಿಯಲ್ಲಿ ಮಾಡತಕ್ಕದ್ದಿರುತ್ತದೆ. ಈಗಿನ ಹೊಲಸು ಪದ್ಧತಿಯ ಶಿಕ್ಷಣ ದಿಂದ ರಾಷ್ಟ್ರವು ನಿಃಸತ್ವವಾಗುತ್ತಿರುವದರಿಂದ ನವಜೀವನದಾಯಿಯಾದ ರಾಷ್ಟ್ರೀಯ ಶಿಕ್ಷಣವನ್ನು ಕೊಡಲಿಕ್ಕೆ ಹತ್ತಬೇಕು. ಪಂಚರ ಪತಿಯಿಂದ ನ್ಯಾಯಗಳನ್ನು ತೀರಿಸುವ ಪದ್ಧತಿಯು ಮರೆಯುತ್ತ ನಡೆದಿದೆ. ಆದರೆ ಅದನ್ನು ಪುನಃ ಆರಂಭಿಸಲಿಕ್ಕೆ ಬೇಕು. ಲೋಕಶಿಕ್ಷಣದ ಕಾರ್ಯವನ್ನು ಕೈಕೊಂಡು ಚಲೋ ರೀತಿಯಲ್ಲಿ ಜರುಗಿಸಲಿಕ್ಕೆ ಬೇಕು. ಮತ್ತು ನಮ್ಮ ಔದ್ಯೋಗಿಕ ಹಾಗೂ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲಿಕ್ಕೆ ಬೇಕು. ಇವುಗಳನ್ನೂ ಇಂಥ ಬೇರೆ ತರದ ಚಟುವಟಿಕೆಗಳನ್ನೂ ನಾವು ಪರಿಮಾಣದ ಶಾಂತತೆಯ ಹಾಗೂ ಕಾಯದೆಶೀರ ಮಾರ್ಗದಿಂದಲೇ ನಡೆಸುವದಿರುತ್ತದೆ. ಇದರ ಸಲು ವಾಗಿ ರಾಷ್ಟ್ರೀಯ ಪಕ್ಷದವರಿಗೆ ತಮ್ಮ ಸಂಸ್ಥೆಗಳನ್ನು ಸ್ಥಾಪಿಸಲಿಕ್ಕೆ ಬೇಕು. ಇವುಗಳನ್ನು ಮುರಿಯಲಿಕ್ಕೆ ಅಧಿಕಾರಿಗಳು ಯತ್ನಿಸಿದರೆ ಅದು ಸರಕಾರದವರ ತಪ್ಪು. ಲಂಚಬಡಕ ಪೋಲೀಸರು, ಅವಿಚಾರಿಗಳಾದ ಅಧಿಕಾರಿಗಳು ಅಥವಾ ಪಕ್ಷಪಾತಿಗಳಾದ ನ್ಯಾಯಾಧೀಶರು ಈ ಚಳವಳಗಳನ್ನು ಮಾಡುವವರನ್ನು ಮುರಿಯಲಿಕ್ಕೆ ಯತ್ನಿಸಬಹುದು ಅವರನ್ನು ಗೋಳಾಡಿಸಬಹುದು. ಆದರೆ ಅದಕ್ಕುಪಾಯವಿಲ್ಲ. ಉತ್ಕರ್ಷದ ಮಾರ್ಗವನ್ನು ಆಕ್ರಮಿಸುವಾಗ ಹಾದಿಯಲ್ಲಿ ಹತ್ತುವ ಸುಂಕವನ್ನು ಕೊಡಲಿಕ್ಕೆ ರಾಷ್ಟ್ರೀಯ ಪಕ್ಷದವರು ಸಿದ್ಧರಿರಲಿಕ್ಕೆ ಬೇಕು. ಈ ಕಾಲದಲ್ಲಿ ರಾಷ್ಟ್ರೀಯ ಚಳವಳಿಗೆ ಕಾಯದೇಶೀರ ಹಾಗೂ ಸಂಘಟಿತ ಸ್ವರೂಪವನ್ನು ಕೊಡಲಿಕ್ಕೆ ಪ್ರತಿಯೊಬ್ಬರು ಸಿದ್ಧರಿರಲಿಕ್ಕೆ ಬೇಕು. ಸರಕಾರದ ಒತ್ತಾಯಕ್ಕೆ ಬೆದರಿ ಬಾಯ್ಬಿಡುವವರು ಈ ಉಸಾಬರಿಗೆ ಬೀಳ ಬಾರದು. "ಆಂಗ್ಲೋ ಇಂಡಿಯನರ ಬಾಲ ಬಡಿದರೆ ಮತ್ತು ಇಂಗ್ಲಂಡದೊಳಗಿನ ಉದಾರ ಮತವಾದಿ ಜನರ ಸಂಗಡ "ಅಳ್ಳಳ್ಳ ಪಳ್ಳಳ್ಳ" ಮಾಡಿದರೆ ಸ್ವಪ್ರಯತ್ನದ ಅವಶ್ಯಕತೆ ಯಿಲ್ಲ, ನಮ್ಮ ಸಂಕಟಗಳ ಪರಿಹಾರವಾಗುವದು" ಎಂಬುವ ಅಭಿಪ್ರಾಯವಿದ್ದ ಜನರು ಈ ನಮ್ಮ ರಾಷ್ಟ್ರೀಯ ಚಳವಳಿಗಳಿಂದ ದೂರಿರಬೇಕು. ಹಾಗೂ ಯಾರು ಅಲ್ಪಸಂತುಷ್ಟರಿದ್ದು ಸರಕಾರದವರು ಕೊಟ್ಟ ಅರ್ಧಗಿರ್ಧ ತುಣುಕಿನಿಂದ ಸಮಾಧಾನ ಹೊಂದುವರೋ ಅವರೂ ನಮ್ಮಿಂದ ಸರಿದು ಒತ್ತಟ್ಟಿಗಾಗಬೇಕು. ಯಾರಿಗೆ "ರಾಷ್ಟ್ರೀಯ" ರೆಂಬ ಹೆಸರಿಗೆ ಒಪ್ಪುವಂತೆ ನಡೆಯುವ ಕೂವತ್ತು ಇರುವದೋ ಅವರೇ ಮುಂದೆ ಬಂದು ಈ ರಾಷ್ಟ್ರಕಾರ್ಯದ ಭಾರವನ್ನು ಹೊರಲಿಕ್ಕೆ ತಲೆಗೊಡಬೇಕು.

* * * *

೧೯೦೭-೮ ರಲ್ಲಿ ಎಲ್ಲ ಮುಖಂಡರು ಸಾಮ್ರಾಜ್ಯಾಂತರ್ಗದ ಸ್ವರಾಜ್ಯವನ್ನು ಬೇಡುತ್ತಿರಲು ಅರವಿಂದ ಯೋಗಿಗಳು ಮಾತ್ರ ಸಂಪೂರ್ಣ ಸ್ವಾತಂತ್ರ್ಯವು ಸಿಗದ

ಹೊರ್ತು ಗತಿಯೇ ಇಲ್ಲವೆಂದು ಪ್ರತಿಪಾದಿಸುತ್ತಿದ್ದರು. ಆ ಸಂಬಂಧದ ಉದ್ಗಾರಗಳೇ ನೆಂದರೆ:—

" ಅನೇಕರು ಸ್ವಾತಂತ್ರ್ಯ ಶಬ್ದವನ್ನು (ವ್ಯಾಖ್ಯಾನದಲ್ಲಿ) ಉಪಯೋಗಿಸಲಿಕ್ಕೆ ಭಯ ಪಡುತ್ತಾರೆ. ಆದರೆ ನಾನು ಈ ವರೆಗೆ ಈ ಶಬ್ದವನ್ನೇ ಉಪಯೋಗಿಸಿದ್ದೇನೆ. ಈ ಶಬ್ದವು ಜನರಲ್ಲಿ ಸ್ವಾತಂತ್ರ್ಯದ ಮಹತ್ವಾಕಾಂಕ್ಷೆಯನ್ನುಂಟು ಮಾಡಲಿಕ್ಕೆ (ಉಪಯೋಗಿಸಲ್ಪಡುವ) ನನ್ನ ಮಂತ್ರವಾಗಿದೆ. ಈ ಮಂತ್ರವು ನನ್ನ ಮುಖ್ಯ ಉಪದೇಶವಾಗಿದೆ. ಇದನ್ನು ನಾನು ಆಗಾಗ್ಗೆ ಉಪಯೋಗಿಸಿದ್ದೇನೆ. ಸ್ವಾತಂತ್ರ್ಯದ ಮಹಾತ್ವಾಕಾಂಕ್ಷೆಯನ್ನುಂಟು ಮಾಡು ವದು ದೋಷವಾಗಿದ್ದರೆ ನನ್ನನ್ನು ಕಾರಾಗೃಹದಲ್ಲಿಡಿರಿ ! ಹಾಗೂ ನನ್ನ ಕೈಗಳನ್ನು ಶೃಂಖ ಲೆಯಿಂದ ಬಂಧಿಸಿರಿ, ಸ್ವಾತಂತ್ರ್ಯದ ಉಪದೇಶ ಮಾಡುವದು ಅಪರಾಧವಾಗಿದ್ದರೆ, ನಾನು ಅಪರಾಧಿಯಾಗಿದ್ದೇನೆ. ನನ್ನನ್ನು ಶಿಕ್ಷಿಸಿರಿ. "

ಕರ್ಮಯೋಗಿನದಲ್ಲಿ ಮಹರ್ಷಿ ಅರವಿಂದ ಘೋಷರು ಪ್ರಕಟಿಸಿದ ದಿವ್ಯ ಮಂತ್ರ ವನ್ನು ಕೆಳಗೆ ಕೊಟ್ಟಿದೆ. ಅದನ್ನು ದಿನಾಲು ಪ್ರತಿಯೊಬ್ಬ ಭಾರತೀಯನೂ ಭಕ್ತಿಪೂರ್ವ ಕವಾಗಿ ಅನ್ನುತ್ತಿರಬೇಕು. ಅದು –

ಹಿಂದುಸ್ಥಾನವು ಅಭೇದ್ಯವಾದ ಹಾಗೂ ಸುಸಂಬದ್ಧವಾದ ಒಂದು ರಾಷ್ಟ್ರವಿರುತ್ತ ದೆಂದು ನನ್ನ ವಿಶ್ವಾಸವಿರುತ್ತದೆ.

ಹಿಂದುಸ್ಥಾನವು ನಮ್ಮ ಮನೆ, ನಮ್ಮ ಸಂಪತ್ತು, ಮತ್ತು ನಮ್ಮ ಭಕ್ತಿಸ್ಥಲವಿರು ತ್ತದೆ.

ವೇದೋಪನಿಷತ್ತುಗಳೊಳಗಿಂದ ಉತ್ಪನ್ನವಾದಂಥ ಹಲವು ಧರ್ಮ ಹಾಗೂ ಸಾಮ್ರಾಜ್ಯಗಳಿಗೆ ಜನ್ಮಗೊಡುವಂಥ ಕವಿಗಳ ರಸವಂತಿಕೆಯಲ್ಲಿ ನರ್ತಿಸುವಂಥ ಹಾಗೂ ಋಷಿಗಳ ಸಮಾಧಿಸ್ಥಿತಿಯ ಧ್ಯಾನದಲ್ಲಿ ಪ್ರತ್ಯಕ್ಷವಾಗುವಂಥದೊಂದು ದಿವ್ಯಶಕ್ತಿಯು ಮತ್ತೆ ಉದಯವಾಗಿರುತ್ತದೆ. ಆ ಶಕ್ತಿಯ ಹೆಸರು " ರಾಷ್ಟ್ರೀಯತ್ವ " ವೆಂಬುದಾಗಿದೆ.

ಹಿಂದುಸ್ಥಾನದ ವರ್ತಮಾನ ಕಾಲದ ಅಸ್ತಿವಾರವು ಭೂತಕಾಲದಲ್ಲಿ ಬಹಳ ಆಳದ ವರೆಗೆ ಹೋಗಿದ್ದು ಅದರೆದುರಿಗೆ ತೇಜಃಪುಂಜವಾದ ಭವಿಷ್ಯತ್ ಕಾಲವು ಥಳಥಳಿಸುತ್ತ ಲಿದೆ. ಇದು ನನ್ನ ಸಾಕ್ಷಾತ್ಕಾರವು.

ಅಮ್ಮಾ ಭಾರತ ಜನನೀ, ನೀನು ಸುಖದ ಪೀತಾಂಬರವನ್ನುಟ್ಟು ಬಾ, ಅಥವಾ ದುಃಖದ ರಗಟೆಯನ್ನು ಧರಿಸಿ ಬಾ ! ಥಳಗುಟ್ಟುಗಿಸುವ ಐಶ್ವರ್ಯದೊಳಗಿಂದ ಬಾ ಅಥವಾ ಹೀನದೆಶೆಯ ಅಂಧಃಕಾರದೊಳಗಿಂದ ಬಾ, ಹೇಗಾದರೂ ಬಾ, ಅಂತೂ ಬಂದು ನನ್ನನ್ನು " ಎಲೋ ಮಗು " ಎಂದು ಪ್ರೇಮದಿಂದ ಕರೆ ! ಅಂದರೆ ನನ್ನ ಶವದಲ್ಲಿ ಸಹ ಜೀವನ ಕಲೆಯು ಬಂದೀತು !